(ಶ್ರೀ ಹೆಚ್.ಡಿ. ರೇವಣ್ಣ, ಶ್ರೀ ವೈ.ಎಸ್.ವಿ. ದತ್ತಾ, ಮಾನ್ಯ ಸದಸ್ಯರುಗಳು ವಿದ್ಯುತ್ ಸಮಸ್ಯೆಯ ಬಗ್ಗೆ ನಿಯಮ 60 ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೋರಿದಾಗ ನಿಯಮ 69 ರ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ನೀಡುತ್ತೇನೆಂದು ಮಾನ್ಯ ಸಭಾಧ್ಯಕ್ಷರು ತೀರ್ಪು ನೀಡಿದರು.)

4. ವಿತ್ತೀಯ ಕಾರ್ಯಕಲಾಪಗಳು

2014–15ನೇ ಸಾಲಿನ ಅನುದಾನ ಬೇಡಿಕೆಯ ಮೇಲೆ ಮುಂದುವರೆದ ಚರ್ಚೆ

ಬೇಡಿಕೆ ಸಂಖ್ಯೆ: 7:

ಬೇಡಿಕೆ ಹೆಸರು: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ

ಅಧ್ಯಕ್ಷರು:– ಈಗ ಶ್ರೀಮತಿ ಶಶಿಕಲಾ ಅ. ಜೊಲ್ಲೆಯವರು ಮಾತನಾಡುವುದು.

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ನಿಪ್ಪಾಣಿ):– ಮಾನ್ಯ ಅಧ್ಯಕ್ಷರೆ, ಪ್ರಥಮಬಾರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತಾ, ಇವತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬಗ್ಗೆ ಅನೇಕ ಹಿರಿಯ ಸಹೋದರರು ಬಹಳಷ್ಟು ಕೂಲಂಕಷವಾಗಿ ಚರ್ಚೆಯನ್ನು ಮಾಡಿದ್ದಾರೆ. ಗ್ರಾಮದ ಅಭಿವೃದ್ಧಿಯಿಂದಲೇ ನಮ್ಮ ದೇಶದ ಅಭಿವೃದ್ಧಿ ಎಂದು ಗಾಂಧೀಜಿಯವರು, ನಮ್ಮ ಹಿರಿಯರು ಕಂಡಂತಹ ಕನಸು ನಿಜವಾಗಿಯೂ ಒಂದು ಒಳ್ಳೆಯ ಉದ್ದೇಶವನ್ನು ಇಟ್ಟುಕೊಂಡು ಆ ಕನಸನ್ನು ಕಂಡಿದ್ದರು. ಅದೇ ರೀತಿಯಾಗಿ ನಮ್ಮ ಭಾರತ ದೇಶ ಶೇ.70 ರಷ್ಟು ಹಳ್ಳಿಗಳಿಂದ ಕೂಡಿರುವುದನ್ನು ನೋಡಿದರೆ ಇವತ್ತಿನ ದಿವಸ ಸಮಾಜದಲ್ಲಿನ ಒಬ್ಬ ಕಟ್ಟಕಡೆಯ ವ್ಯಕ್ತಿ ನೆಮ್ಮದಿಯ ಬದುಕನ್ನು ಸಾಧಿಸಲು ಸಾಧ್ಯ ಮಾಡುವ ಇಲಾಖೆ ಯಾವುದಾದರೂ ಇದೆ

ಎಂದರೆ ಅದು ಗ್ರಾಮೀಣಾಭಿವೃದ್ಧಿ ಇಲಾಖೆ ಎಂದು ಬಹಳಷ್ಟು ಸಂತೋಷದಿಂದ ಹೇಳಬಯಸುತ್ತೇನೆ. ಅದೇ ರೀತಿಯಾಗಿ ಇವತ್ತಿನ ಸಚಿವರೂ ಕೂಡ ನಮ್ಮ ಶಾಸಕರಿಗೂ ಮತ್ತು ನಮ್ಮ ರಾಜ್ಯಕ್ಕೂ ಒಂದು ಆಶಾಕಿರಣವಾಗಿ ಇವತ್ತಿನ ದಿವಸ ಗ್ರಾಮೀಣಾಭಿವೃದ್ಧಿ ಇಲಾಖೆಯನ್ನು ತುಂಬಾ ಚೆನ್ನಾಗಿ ನಡೆಸಿಕೊಂಡು ಹೋಗುವುದರಲ್ಲಿ ಪ್ರಯತ್ನವನ್ನು ಮಾಡುತ್ತಿದ್ದಾರೆ. ಈ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ 1964 ರ ಜನಸಂಖ್ಯೆಯನ್ನು ನೋಡಿದಾಗ ನಮ್ಮ ಗ್ರಾಮೀಣ ಭಾಗದಲ್ಲಿ ಶೇ.75 ರಷ್ಟು ಜನರು ವಾಸವಾಗಿದ್ದಾರು. ಆದರೆ ಅದು ಈಗ ಶೇಕಡಾವಾರು 52 ಕ್ಕೆ ಕುಸಿತವಾಗಿದೆ ಎನ್ನುವುದನ್ನು ನಾವು ನೋಡುತ್ತಿದ್ದೇವೆ. ಇದಕ್ಕೆ ಕಾರಣವೇನು ಎಂದಾಗ ನಮ್ಮ ಗ್ರಾಮಗಳಿಗೆ ಬೇಕಾಗಿರುವಂತಹ ಮೂಲಭೂತ ಸೌಕರ್ಯದ ಕೊರತೆ, ಅದರಿಂದ ನಮ್ಮ ಜನ ನಗರಪ್ರದೇಶಗಳಿಗೆ ವಲಸೆ ಬರುತ್ತಿದ್ದಾರೆ ಎನ್ನುವುದರ ಬಗ್ಗೆ ಚರ್ಚೆಯನ್ನು ಕೂಡ ಈಗ ಸಾಕಷ್ಟು ಸಹೋದರ ಶಾಸಕರು ಮಾಡಿರುವುದನ್ನು ನೋಡುತ್ತೇವೆ. ಅದರಲ್ಲಿ ಎಲ್ಲಾ ವಿಷಯಗಳನ್ನು ತೆಗೆದುಕೊಂಡು ಚರ್ಚೆಮಾಡುವುದಕ್ಕಿಂತ ಪ್ರಮುಖವಾದಂತಹ ವಿಷಯಗಳನ್ನು ನಾನು ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. PDO ಗಳ ಬಗ್ಗೆ ಚರ್ಚೆ ನಡೆದಾಗ ನಿಜವಾಗಿಯೂ ನನ್ನ ಒಂದು ವರ್ಷದ ಅನುಭವದಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ PDO ಗಳ ಕೊರತೆ ಕಾಣಿಸುತ್ತಿದೆ. ಅಂತಹ PDO ಗಳ ಕೊರತೆಯನ್ನು ನೀಗಿಸುವಲ್ಲಿ ಸನ್ಮಾನ್ಯ ಸಚಿವರು PDO ಗಳ ನೇಮಕಾತಿಯನ್ನು ಮಾಡಿ ಪ್ರತಿಯೊಂದು ಪಂಚಾಯಿತಿಗೆ ಒಂದು separate PDO ಇರುವ ವ್ಯವಸ್ಥೆ ಆಗಬೇಕು ಮತ್ತು ಅದೇ ಊರಿನಲ್ಲಿ ಅವರು ವಾಸಿಸುವಂತಹ ವ್ಯವಸ್ಥೆ ಆಗಬೇಕು. ಏಕೆಂದರೆ GPS ಇರಬಹುದು ಅಥವಾ ರೇಷನ್ ಕಾರ್ಡ್‌ನ ಸರ್ವೆ ಇರಬಹುದು, ಆ ಗ್ರಾಮದ ಸ್ವಚ್ಛತೆಗಳು ಇರಬಹುದು ಮತ್ತು ಅನೇಕ ಕಾಲರಾ, ಮಲೇರಿಯಾ, ಡೆಂಗ್ಯೂ ಅಂತಹ ರೋಗಗಳು ಬರುವಾಗ ಆ ಗ್ರಾಮದ ಸ್ವಚ್ಛತೆಯನ್ನು ನೋಡಿದಾಗ PDO ಗಳು 3–4 ಪಂಚಾಯಿತಿಗಳ charge ಅನ್ನು ತೆಗೆದುಕೊಂಡಾಗ ಒಂದು ಪಂಚಾಯಿತಿಯಲ್ಲಿಯೂ ಕೂಡ ಅವರು ವ್ಯವಸ್ಥಿತವಾಗಿ ಕಾರ್ಯವನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಅದೇ

ರೀತಿಯಾಗಿ ನಾವೇನಾದರೂ ಅವರನ್ನು ಕರೆದು ಸ್ವಲ್ಪ ತರಾಟೆಗೆ ತೆಗೆದುಕೊಂಡು ಇದನ್ನು ಮಾಡಲೇಬೇಕು ಎಂದಾಗ ಬಹಳಷ್ಟು PDO ಗಳು ಅನಾರೋಗ್ಯದಿಂದ ಅಂದರೆ ಬಿ.ಪಿ. ಮತ್ತು ಷುಗರ್ ಕಾಯಿಲೆಯಿಂದ ನರಳುತ್ತಿದ್ದಾರೆ. ಹಾಗೆಯೇ ಪಂಚಾಯಿತಿ ಅಧ್ಯಕ್ಷರು ಇರಬಹುದು, ನಾವುಗಳು ಇರಬಹುದು, ಅವರಿಗೆ ಹೇಳಿದಾಗ ಅವರು ಮರುದಿನವೇ ರಜಾ ಹಾಕಿ admit ಆಗಿದ್ದೆ ಮೇಡಂ, ಹುಷಾರಿಲ್ಲ ಮೇಡಂ, ಎನ್ನುವಂತಹ ತೊಂದರೆಯನ್ನು ನಾವು ನೋಡುತ್ತಿದ್ದೇವೆ. ಈ ಒಂದು ಕಾರಣದಿಂದ PDOಗಳ ಕೊರತೆಯಿಂದ ವಸತಿಯ GPS ನಲ್ಲಿ ಅನೇಕ ತೊಂದರೆಗಳಾಗಿ ಕೆಲವೊಂದು ಫಲಾನುಭವಿಗಳಿಗೆ ಮನೆಗಳು ಬ್ಲಾಕ್ ಆಗಿರುವುದು, ಮನೆ ಬಿಲ್ ಬರದೇ ಇರುವುದು, ಶೌಚಾಲಯಗಳು ಫೋಟೋಗಳು ಇರದ ಕಾರಣ ಆ ಶೌಚಾಲಯದ ಬಿಲ್‌ಗಳು ಪೆಂಡಿಂಗ್ ಇರುವುದನ್ನು ನಾವು ನೋಡುತ್ತಿದ್ದೇವೆ. ಅದಕ್ಕೆ ದಯವಿಟ್ಟು ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಸಚಿವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಪ್ರತಿಯೊಂದು ಪಂಚಾಯಿತಿಗಳಿಗೆ PDO ಗಳನ್ನು ನೇಮಕ ಮಾಡಬೇಕು.

ಎರಡನೆಯದಾಗಿ, ಮಾನ್ಯ ಸಚಿವರು ಎಲ್ಲಾ ಕಡೆ ಕೂಡ ಕುಡಿಯುವ ನೀರಿನ ಶುದ್ಧೀಕರಣ ಘಟಕಗಳನ್ನು ಹಾಕಲು ಕ್ರಮ ತೆಗೆದುಕೊಂಡಿರುವುದು ಸ್ವಾಗತಾರ್ಹವಾದದು ಮತ್ತು ನನ್ನ ಕ್ಷೇತ್ರದಲ್ಲಿಯೂ ಕೂಡ ಅದಕ್ಕೆ ಒಳ್ಳೆಯ ರೀತಿಯಿಂದ ಜನರಿಂದ ಪ್ರೋತ್ಸಾಹ ಬರುತ್ತಿದೆ ಮತ್ತು ಬೇಡಿಕೆ ಕೂಡ ಬರುತ್ತಿದೆ. ಅದೇ ರೀತಿ ಈಗಾಗಲೇ ಮಾನ್ಯ ಸಚಿವರಲ್ಲಿ ಮನವಿಯನ್ನೂ ಕೂಡ ಕೊಟ್ಟಿದ್ದೇನೆ ಮತ್ತು ಪ್ರತಿಯೊಂದು ಹಳ್ಳಿಗಳಲ್ಲಿ RO Unit ಗಳನ್ನು (Reverse Osmosis Unit) ಶುದ್ಧೀಕರಣ ಘಟಕಗಳನ್ನು ಪ್ರತಿಯೊಂದು ಪಂಚಾಯಿತಿ ಮಟ್ಟದಲ್ಲಿ ಅಥವಾ ಸಂಘ ಸಂಸ್ಥೆಗಳ ಕಡೆಗಳಿಂದ ಅಲ್ಲಿರುವಂತಹ ದೊಡ್ಡ ದೊಡ್ಡ ಉದ್ಯಮಿಗಳೂ ಕೂಡ ಮುಂದೆ ಬರುತ್ತಿದ್ದಾರೆ. RO Unit ಗಳನ್ನು ಪ್ರತಿಯೊಂದು ಹಳ್ಳಿಗೆ ಹಾಕಿ ಹಳ್ಳಿಗೆ ಶುದ್ಧ ಕುಡಿಯುವ ನೀರಿನ ಘಟಕ ಆಗಬೇಕು. ಆ ಒಂದು ಕುಡಿಯುವ ನೀರಿನಿಂದಲೇ 50% ನಷ್ಟು ನಾವು ಆರೋಗ್ಯವನ್ನು ಸುಧಾರಣೆ ಮಾಡಬಹುದು ಎನ್ನುವ

ನಿರ್ಣಯಕ್ಕೆ ಎಲ್ಲರೂ ಬಂದಿದ್ದಾರೆ. ಅದಕ್ಕೆ ನಾನು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಏಕೆಂದರೆ ಸಂಘಸಂಸ್ಥೆಗಳು, ಗ್ರಾಮ ಪಂಚಾಯಿತಿಗಳು ಮತ್ತು ಉದ್ಯಮಗಳಿಂದ ಇಂತಿಷ್ಟು ಹಣ ಮತ್ತು ಸರ್ಕಾರದಿಂದ ಇಂತಿಷ್ಟು ಅನುದಾನ ಎಂದು ಹೇಳಿ ಆ ಎರಡೂ ಜನರ ಸಂಯುಕ್ತಾಶ್ರಯದಲ್ಲಿ ಪ್ರತಿಯೊಂದು ಊರಿಗೆ RO Units ಆಗಬೇಕು ಮತ್ತು ಆ maintenance ಕೂಡ ಯಾವ ಒಂದು ಸಂಘಸಂಸ್ಥೆಯವರು ತೆಗೆದುಕೊಂಡಿರುತ್ತಾರೆ, ಅವರಿಗೆ ಕೊಡುವಂಥದ್ದು ಆಗಬೇಕು ಎನ್ನುವ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ.

ಬಹುಗ್ರಾಮ ಕುಡಿಯುವ ನೀರಿನ ಯೋಜನೆ, ಈ ಯೋಜನೆಯು ರಾಜ್ಯದಲ್ಲಿ ಯಾವ ಮಟ್ಟದಲ್ಲಿ ಇದೆ ಎನ್ನುವುದು ನನಗೆ ಅಷ್ಟು ಗೊತ್ತಿಲ್ಲದಿದ್ದರೂ ಕೂಡ ನನ್ನ ನಿಪ್ಪಾಣಿ ಕ್ಷೇತ್ರದಲ್ಲಿ ಈ ಒಂದು ಕೊರತೆ ಬಹಳಷ್ಟು ಕಾಣುತ್ತಿದೆ. ಏಕೆಂದರೆ ನಮ್ಮ ಕ್ಷೇತ್ರದ ಕೊನೆ ಹಳ್ಳಿ ಮಾನಕಪುರ ಎಂಬುದರಲ್ಲಿ ಮಹಾರಾಷ್ಟ್ರದ ಪಂಚಗಂಗಾ ನದಿಯಿಂದ ಅಲ್ಲಿ ಕುಡಿಯುವ ನೀರಿನ ಬಳಕೆಯಾಗುತ್ತಿದೆ. ಆದರೆ ಎಲ್ಲವೂ ಕೂಡ ಕಾರ್ಖಾನೆಯ ಕಲುಷಿತ ನೀರಿನಿಂದ ಆ ನೀರು ಕಲುಷಿತವಾಗಿ ಅಲ್ಲಿ ಕಾಲರಾ, ಮಲೇರಿಯಾ ಮತ್ತು ಅನೇಕ ರೋಗಗಳಿಂದ ಅಲ್ಲಿನ ಜನ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅದಕ್ಕೆ ಬಹು ಗ್ರಾಮ ಕುಡಿಯುವ ನೀರಿನ ಯೋಜನೆ ನಮ್ಮ ಕ್ಷೇತ್ರಕ್ಕೂ ಕೂಡ ಹೆಚ್ಚಿನ ಪ್ರಮಾಣದಲ್ಲಿ ಕೊಡಬೇಕು. ಅನೇಕ ಬಹು ಗ್ರಾಮ ಯೋಜನೆಗಳು ಪ್ರಾರಂಭದ ಹಂತದಲ್ಲಿಯೇ ಅವು ಬಳಕೆಯಾಗದ ರೀತಿಯಲ್ಲಿ ಅನೇಕ ಕಳಪೆ ಕಾರ್ಯಗಳೂ ನನ್ನ ಕ್ಷೇತ್ರದಲ್ಲಿ ಆಗಿದೆ. ಅದಕ್ಕೆ ಶಾಸಕರು ತಾಲ್ಲೂಕು ಪಂಚಾಯಿತಿಯಿಂದ ಮತ್ತು ಜಿಲ್ಲಾ ಪಂಚಾಯಿತಿಯಿಂದ ಒಂದು ಕಮಿಟಿಯನ್ನು ಮಾಡಿ ಆ ಬಹು ಗ್ರಾಮ ಯೋಜನೆಯ ಒಂದು ಕೂಲಂಕಷವಾದ ಸರ್ವೆ ಆಗಬೇಕು ಮತ್ತು ಹೊಸದಾಗಿ ಮಾಡುವಂತಹ ಬಹು ಗ್ರಾಮ ಯೋಜನೆ ಅಲ್ಲಿರುವಂತಹ ಒಂದು ಸಮಿತಿಯನ್ನೊಳಗೊಂಡು ಅದನ್ನು ಸರಿಯಾದ ರೀತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಯಾಗಬೇಕು. ಏಕೆಂದರೆ ಸರ್ಕಾರದಿಂದ ಇಷ್ಟೊಂದು ಅನುದಾನ ಖರ್ಚು ಮಾಡಿ ಆ ಯೋಜನೆಗಳನ್ನು ಮಾಡುತ್ತಿರಬೇಕಾದರೆ ಅವು ಕಳಪೆಯದ್ದು ಆಗಬಾರದು

ಮತ್ತು ಆ ಜನರಿಗೆ ತೊಂದರೆಯಾಗಬಾರದು ಎನ್ನುವ ದೃಷ್ಟಿಕೋನದಿಂದ ಅದನ್ನೂ ಕೂಡ ಹೇಳುವುದಕ್ಕೆ ಬಯಸುತ್ತೇನೆ. ಪ್ರತ್ಯೇಕ ಪಂಚಾಯಿತಿಗಳ ಅವಶ್ಯಕತೆ ಬಹಳಷ್ಟು ಇದೆ ಮತ್ತು ಪ್ರತ್ಯೇಕ ಪಂಚಾಯಿತಿಯ ಸರ್ವೆ ಕೂಡ ನಡೆಯುತ್ತಿದೆ. ಅದೇ ರೀತಿಯಲ್ಲಿ ಪ್ರತ್ಯೇಕ ಪಂಚಾಯಿತಿಗಳೂ ಕೂಡ ಅವಶ್ಯಕತೆ ಇರುವುದರಿಂದ ಶೌಚಾಲಯಗಳ ವ್ಯವಸ್ಥೆ ಬಗ್ಗೆ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಶೌಚಾಲಯಗಳ ಬಗ್ಗೆ ಮಾನ್ಯ ಸಚಿವರು ತುಂಬಾ ಒಳ್ಳೆಯ ಕಾಳಜಿಯನ್ನು ಇಟ್ಟುಕೊಂಡು ಮಾಡುತ್ತಿದ್ದಾರೆ. ಆದರೆ ನಮ್ಮ ಕ್ಷೇತ್ರದಲ್ಲಿಯೂ ಕೂಡ ready-made ಶೌಚಾಲಯವನ್ನು ತಂದು fix ಮಾಡಬಹುದೇ ಎಂದು ನಾನು ಪುತ್ತೂರಿನ ಒಂದು factory ಗೆ ಭೇಟಿ ಕೊಟ್ಟಿದ್ದೆ. ಅಲ್ಲಿ ಒಳ್ಳೆಯ ರೀತಿಯಲ್ಲಿ ಶೌಚಾಲಯಗಳನ್ನು ಮಾಡುತ್ತಾರೆ. ಅದನ್ನು ಮೂರು ಗಂಟೆಯೊಳಗಾಗಿ ಒಂದು ಮನೆಗೆ ಶೌಚಾಲಯವನ್ನು ಅಳವಡಿಸುವಂತಹ ಕಾರ್ಯವನ್ನು ಅವರು ಮಾಡುತ್ತಾರೆ. ಆದರೆ ಆ factory ಮಾಲೀಕರು ಒಂದು ಸಮಸ್ಯೆಯನ್ನು ಹೇಳಿದರು. ಆ ಶೌಚಾಲಯಗಳಿಗೆ ತೆರಿಗೆ 14% ಇರುವುದರಿಂದ ಅದು ಜನರಿಗೆ ಮುಟ್ಟಿಸುವುದಕ್ಕೆ ತುಂಬಾ ಕಷ್ಟವಾಗುತ್ತಿದೆ. ಅಂತಹ ಶೌಚಾಲಯಗಳ ಒಂದು factory ಗಳಿಗೆ ತೆರಿಗೆ ಏನಾದರೂ ಕಡಿಮೆ ಮಾಡಿದರೆ ಅದು ಇನ್ನೂ ಒಳ್ಳೆಯ ರೀತಿಯಲ್ಲಿ ಜನರಿಗೆ ಮುಟ್ಟಿಸುವಲ್ಲಿ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಅದೇ ರೀತಿಯಾಗಿ ಪಂಚಾಯಿತಿ ಮಟ್ಟದಲ್ಲಿ ಅಂತರ್ಜಲ ಮಟ್ಟ ಹೆಚ್ಚಿಗೆ ಆಗಬೇಕೆಂದು ಎಲ್ಲರೂ ಬೇಡಿಕೆ ಮಾಡಿದ್ದರು. ಒಂದು ನಿಮಿಷ ಮಾನ್ಯ ಅಧ್ಯಕ್ಷರೆ, ತಾವು ಮಹಿಳೆಯರಿಗೆ ಮಾತನಾಡಲು ಅವಕಾಶವನ್ನೇ ಕೊಡುವುದಿಲ್ಲ. ನಾನು ಮಾನ್ಯ ಸಚಿವರಲ್ಲಿ ವಿನಂತಿಸುವುದೇನೆಂದರೆ, ನಮ್ಮ ಹಳ್ಳಿಯಲ್ಲಿರುವಂತಹ ಗ್ರಾಮ ಪಂಚಾಯಿತಿಗಳು, ಶಾಲೆಗಳು, ಆಸ್ಪತ್ರೆಗಳಲ್ಲಿ rain water harvesting ಕಾರ್ಯಕ್ರಮ ಆಗಬೇಕು. ಅದೇ ರೀತಿಯಲ್ಲಿ ಯಾರ್ಯಾರು ಮನೆಗಳಲ್ಲಿ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತಾರೋ, ಅವರಿಗೂ ಕೂಡ ಸರ್ಕಾರದಿಂದ ಒಂದು ಸವಲತ್ತನ್ನು ಮಾಡಿಕೊಡಬೇಕು ಅಂದರೆ ನಮ್ಮ ಅಂತರ್ಜಲ ಮಟ್ಟ ಹೆಚ್ಚಿಗೆ ಆಗುವ ನಿಟ್ಟಿನಲ್ಲಿ ನಾನು ಯೋಚನೆ ಮಾಡುತ್ತಿದ್ದೇನೆ.

ಅಧ್ಯಕ್ಷರು:– ಹತ್ತು ನಿಮಿಷ ಆಯಿತು.

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ:– ಮಾನ್ಯ ಅಧ್ಯಕ್ಷರೆ ಇನ್ನೂ ಹತ್ತು ನಿಮಿಷ ಆಗಿಲ್ಲ.

ಅಧ್ಯಕ್ಷರು:– ತಮಗೆ ಮಾತನಾಡಲು ಅವಕಾಶ ಕೊಟ್ಟಿದ್ದು ಐದು ನಿಮಿಷ. ಈಗಾಗಲೇ 8 ನಿಮಿಷ ಆಯಿತು.

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ:– ಈ ರೀತಿಯಾಗಿ ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ಎಲ್ಲಾ ಬೇಡಿಕೆಗಳನ್ನು ಇಡುತ್ತಾ, Task-Force ನ ಬಗ್ಗೆ ಎಲ್ಲಾ ಸಚಿವರು ಹೇಳಿದ ಹಾಗೆ ನನ್ನ ಕ್ಷೇತ್ರದಲ್ಲಿಯೂ ಕೂಡ ತೊಂದರೆಯಾಗಿದೆ. ಇನ್ನೂ ಡಿ.ಸಿ ಯವರು ಅದಕ್ಕೆ ಸಹಿ ಹಾಕಿಲ್ಲ. Task-Force ನ ಸಮಸ್ಯೆ, ನೀರಿನ ಸಮಸ್ಯೆ ಸ್ವತಃ ಡಿ.ಸಿ ಯವರು ನನ್ನ ಕ್ಷೇತ್ರಕ್ಕೆ ಬಂದಾಗ ಅಲ್ಲಿನ ಜನರು ಹೇಳಿದ್ದರು. ಆದರೂ ಇನ್ನೂ ಕೂಡ ಬೋರ್‌ವೆಲ್ ಕೊರೆಸುವಂಥದ್ದು ಆಗಲಿ, ನೀರಿನ ವ್ಯವಸ್ಥೆ ಆಗಲಿ ಆಗಿಲ್ಲ. ಅದಕ್ಕೂ ಕೂಡ ಯೋಗ್ಯವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು.

ಅಧ್ಯಕ್ಷರು:– ನಾರಾಯಣಸ್ವಾಮಿಯವರು ಹಾಜರಿಲ್ಲ. ಮಾನ್ಯ ಜಿ.ಟಿ. ದೇವೇಗೌಡರು ಮಾತನಾಡುವುದು.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ನಾರಾಯಣ ಸ್ವಾಮಿಯವರು ಸದನದಲ್ಲಿಲ್ಲ. ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ ನಾನು ಮಾತನಾಡುತ್ತೇನೆ.

ಅಧ್ಯಕ್ಷರು:– ಇಲ್ಲ. ಶ್ರೀ ಜಿ.ಟಿ. ದೇವೇಗೌಡರೆ, ತಾವು ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಜಿ.ಟಿ. ದೇವೇಗೌಡರ ಮೇಲೆ ತಾವು ಬಾರಿ ನಿಗಾ ಇಟ್ಟುಕೊಂಡಿದ್ದೀರಲ್ಲಾ

ಅಧ್ಯಕ್ಷರು:– ಒಂದು ನಿಮಿಷ ತಾಳಿ. ಶ್ರೀ ಜಿ.ಟಿ. ದೇವೇಗೌಡರೆ, ತಾವು ಮಾತನಾಡಿ.

ಶ್ರೀ ಜಿ.ಟಿ. ದೇವೇಗೌಡ (ಚಾಮುಂಡೇಶ್ವರಿ):- ಮಾನ್ಯ ಸಭಾಧ್ಯಕ್ಷರೆ, ಈ ದೇಶದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಬಲಯುತವಾಗಿರಬೇಕು, ಹಳ್ಳಿಗಳ ಅಭಿವೃದ್ಧಿಯಾಗಬೇಕು. ಇದು ಒಂದು ಮಹತ್ತರವಾದಂತಹ ಖಾತೆ. ಮಹಾತ್ಮ ಗಾಂಧೀಜಿಯವರು ಹಳ್ಳಿಗಳ ಅಭಿವೃದ್ಧಿಯಾಗಬೇಕು, ಶೇಕಡ 70ರಷ್ಟು ಜನರು ಹಳ್ಳಿಯಲ್ಲಿ ವಾಸ ಮಾಡುತ್ತಾರೆ. ಅವರುಗಳಿಗೆ ಮೂಲಭೂತ ಸೌಕರ್ಯ, ನೈರ್ಮಲ್ಯ ಎಲ್ಲವು ಕೂಡ ಇರಬೇಕೆಂದು ಮನಗಂಡು ಮಹಾತ್ಮ ಗಾಂಧೀಜಿಯವರ ಹೆಸರನ್ನು ನಾವೆಲ್ಲರೂ ಕೂಡ ನೆನೆಸಿಕೊಳ್ಳುತ್ತೇವೆ. ಸ್ವಾತಂತ್ರ್ಯ ನಂತರ ಪ್ರಪ್ರಥಮವಾಗಿ Village Panchayat, District Board Act 1952ರಲ್ಲಿ ಅಸ್ತಿತ್ವಕ್ಕೆ ಬಂತು. ಇದಾದನಂತರ ಶ್ರೀ ಬಲವಂತರಾಯ್‌ರವರ ಸಮಿತಿಯು ಅಧಿಕಾರ ವಿಕೇಂದ್ರಿಕರಣ ಮಾಡಿ Democratic De-centralization, 3-tier system ಅವತ್ತು ಸಹ ಇತ್ತು. ಗ್ರಾಮ ಪಂಚಾಯಿತಿ, ತಾಲ್ಲೂಕು ಬೋರ್ಡ್, District Board, ತಾಲ್ಲೂಕು ಬೋರ್ಡ್ ಬಹಳ ಪ್ರಬಲವಾಗಿತ್ತು. ಈ ಬಗ್ಗೆ ತಮಗೂ ಸಹ ಚೆನ್ನಾಗಿ ಗೊತ್ತಿದೆ. ಅವತ್ತಿನ ದಿವಸ ಎಲ್ಲಾ ಕೆಲಸಕಾರ್ಯಗಳು ನೇರವಾಗಿ ಆಗುತ್ತಿತ್ತು. ಮನೆಗಳು ಇರಲಿ, ರಸ್ತೆಗಳು ಇರಲಿ, ಅಗ ಹಳ್ಳಿಗಳ ಅಭಿವೃದ್ಧಿಯು ಚೆನ್ನಾಗಿ ಆಗುತ್ತಿತ್ತು. ಇದಾದನಂತರ 1980ರ ದಶಕದಲ್ಲಿಯೇ ಕನಿಷ್ಠ ನಾಗರಿಕ ಸೌಲಭ್ಯಗಳನ್ನು ಒದಗಿಸಬೇಕು, ಪ್ರತಿಯೊಂದು ಕುಟುಂಬವು ಆರ್ಥಿಕವಾಗಿ ಅಭಿವೃದ್ಧಿಯಾಗಬೇಕು ಹಾಗೂ ಎಲ್ಲರಿಗೂ ಕೂಲಿ ಕೆಲಸವು ದೊರೆಯಬೇಕೆಂಬ ಉದ್ದೇಶದಿಂದ District Rural Development Society (DRDS), IRDP, NREP, RLEGP ಯೋಜನೆಗಳು ಅಂದೇ ಜಾರಿಯಲ್ಲಿದ್ದವು. ಈ ಬಗ್ಗೆ 1952ರಲ್ಲಿ ಒಂದು amendment ಆಗಿದೆ. 1959ರಲ್ಲಿ Karnataka Village Panchayat & local Board Act ಆಗಿದೆ. 1983ರಲ್ಲಿ ಒಂದು ಬಾರಿ Zilla Parishad Mandal Panchayat Act, ಮತ್ತು 1993ರಲ್ಲಿ ಮತ್ತೊಂದು Karnataka Zilla Panchayat, Taluk Panchayat Act ಬಂತು. ಈ ರೀತಿಯಾಗಿ ಬಹಳಷ್ಟು ಸಾರಿ ಗ್ರಾಮ ಪಂಚಾಯಿತಿಯ ಕಾಯಿದೆಗಳಿಗೆ ತಿದ್ದುಪಡಿಗಳು ಬಂದಿವೆ. ಆದರೆ ಈ ಬಾರಿ ಮತ್ತು ಶ್ರೀ ರಮೇಶ್ ಕುಮಾರ್‌ರವರ ಅಧ್ಯಕ್ಷತೆಯಲ್ಲಿ

2014ಕ್ಕೆ ಇನ್ನೊಂದು ಸಮಿತಿಯನ್ನು ಮಾಡಿ ಇನ್ನೂ ಹೆಚ್ಚು ಬಲಯುತಗೊಳಿಸಬೇಕು ಎನ್ನುವ ಸದುದ್ದೇಶದಿಂದ ಇದನ್ನು ಜಾರಿಗೆ ಮಾಡಿದ್ದಾರೆಂದು ನಾನಾದರೂ ಕೂಡ ಭಾವಿಸಿಕೊಂಡಿದ್ದೇನೆ. ಶ್ರೀ ರಮೇಶ್ ಕುಮಾರ್‌ರವರು ಹಿಂದೆಯೂ ಕೂಡ ಇದ್ದರು, 1983ರಲ್ಲಿ ಅಧಿಕಾರಕ್ಕೆ ಬಂದಂತಹ ಶ್ರೀ ರಾಮಕೃಷ್ಣ ಹೆಗಡೆಯವರ ಜನತಾ ಪಕ್ಷದ ಸರ್ಕಾರದಲ್ಲಿ ಶ್ರೀ ಅಬ್ದುಲ್ ನಜೀರ್‌ಸಾಬ್‌ರವರು ಗ್ರಾಮೀಣಾಭಿವೃದ್ಧಿ ಸಚಿವರಾಗಿ ಅಂದು ಈ ಒಂದು ಕಾಯಿದೆಯನ್ನು ಜಾರಿಗೆ ತರಬೇಕೆಂದು ಎಲ್ಲಾ ಪಕ್ಷದ ಹಿರಿಯ ಸದಸ್ಯರುಗಳನ್ನೊಳಗೊಂಡ ಸಮಿತಿಯನ್ನು West Bengal ಮತ್ತು ಬೇರೆಬೇರೆ ರಾಜ್ಯಗಳಿಗೆ ಕಳುಹಿಸಿ ಅಧ್ಯಯನ ಮಾಡಿ Karnataka Zilla Parishad, Mandal Panchyat Act ಅನ್ನು ತರಬೇಕಾದರೆ ಆಗ ಇಡೀ ಸದನದಲ್ಲಿ ವಿರೋಧ ಇತ್ತು. ಅವರು ಎಲ್ಲಾ ಶಾಸಕರುಗಳ ಮನವೊಲಿಸಿ ನಿಮ್ಮನ್ನು ಕೂಡ ತಾಲ್ಲೂಕು ಪಂಚಾಯಿತಿ ಸಲಹಾ ಸಮಿತಿಯ ಅಧ್ಯಕ್ಷರನ್ನಾಗಿ ಮಾಡುತ್ತೇವೆ ನೀವು ತಾಲ್ಲೂಕು ಮಟ್ಟದಲ್ಲಿ ಶಾಸಕರಾಗಿರುತ್ತೀರಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷತ್ ಇದೆ, ಮಂಡಲ ಪಂಚಾಯಿತಿಯಲ್ಲಿ ಮಂಡಲ ಪಂಚಾಯಿತಿ ಇರುತ್ತದೆ ಎಂದು ಒಪ್ಪಿಸಿ ಈ ಕಾಯಿದೆಯನ್ನು ಜಾರಿಗೆ ತಂದಿರುವುದು ತಮಗೆಲ್ಲರಿಗೂ ಕೂಡ ಗೊತ್ತಿರುವಂತಹ ವಿಚಾರವಾಗಿದೆ. ಆದರೆ ಅವರ ಸರ್ಕಾರ 1987ರಲ್ಲಿ ಅಧಿಕಾರಕ್ಕೆ ಬಂತು, 1989ರಲ್ಲಿ ಅಂದು ಶ್ರೀ ಅಬ್ದುಲ್ ನಜೀರ್‌ಸಾಬ್‌ರವರು ಕನಸು ಕಂಡಿದ್ದರು. ಶ್ರೀ ಜಯಪ್ರಕಾಶ್ ನಾರಾಯಣ್‌ರವರು ಕಟ್ಟಿದಂತಹ ಜನತಾಪಕ್ಷವನ್ನು ಕಟ್ಟಕಡೆಯ ಹಳ್ಳಿಯಲ್ಲಿಯೂ ಕೂಡ ಪಕ್ಷದ ಚುನಾವಣೆಯ ಮೂಲಕ ಉಳಿಸುತ್ತೇನೆಂದು ಮಾಡಿದರು. ಆದರೆ 1989ರ ಚುನಾವಣೆಯಲ್ಲಿ ಎಲ್ಲಾ ಕಡೆಯಲ್ಲಿ ಅಧಿಕಾರದಲ್ಲಿದ್ದರೂ ಕೂಡ ಸೋತೆವು. ಆಗ ಶ್ರೀ ವೀರೇಂದ್ರಪಾಟೀಲ್‌ರವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂತು. ಅವತ್ತು ಕೂಡ ಶ್ರೀ ರಾಜಶೇಖರ ಮೂರ್ತಿಯವರು ಕಂದಾಯ ಮಂತ್ರಿಗಳಾಗಿದ್ದರು. ನಾನು ತಾಲ್ಲೂಕು ಪಂಚಾಯಿತಿಯ ಸಲಹ ಸಮಿತಿಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಅಂದು ಕಾಂಗ್ರೆಸ್ ಸರ್ಕಾರದಲ್ಲಿ ಮತ್ತೆ ಇದನ್ನು ಕೇಂದ್ರದಲ್ಲಿ

ಶ್ರೀ ಮಣಿಶಂಕರ್ ಅಯ್ಯರ್‌ರವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದರು. ಶ್ರೀ ರಾಜೀವ್ ಗಾಂಧಿಯವರು ಭಾರತದ ಪ್ರಧಾನಮಂತ್ರಿಯಾಗಿದ್ದರು. ನಮ್ಮ ನಜೀರ್‌ಸಾಬ್‌ರವರು ತಂದಿರುವಂತಹ model ಕಾಯಿದೆಯನ್ನು ದೇಶಾದ್ಯಂತ ಜಾರಿಗೆ ತರಬೇಕೆಂದು ಹೇಳಿ ಆ model ಅನ್ನು 3-tier system ಮಾಡಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿಗಳ ಚುನಾವಣೆಯನ್ನು ನಡೆಸುವುದರ ಮೂಲಕ ಅಧಿಕಾರಕ್ಕೆ ತಂದರು. ಅವರು ಏನು ಮಾಡಿದರು ಅಂದರೆ ಏನು ಮಂಡಲ ಪಂಚಾಯಿತಿಯ ಪದವನ್ನೇ ಬದಲಾವಣೆ ಮಾಡಿದರು. ಗ್ರಾಮ ಪಂಚಾಯಿತಿ, ಜಿಲ್ಲಾ ಪರಿಷತ್ ಅನ್ನು ತೆಗೆದು ಜಿಲ್ಲಾ ಪಂಚಾಯತ್ ಮಾಡಿದರು. ಅಲ್ಲಿರುವಂತಹ ಮುಖ್ಯ ಕಾರ್ಯದರ್ಶಿ ಹುದ್ದೆ ಇದ್ದರೂ ಅವರನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂದು ಮಾಡಿದರು. ಶ್ರೀ ಅಬ್ದುಲ್ ನಜೀರ್‌ಸಾಬ್‌ರವರು ಹೇಳುತ್ತಿದ್ದರು. ಈ ದೇಶದಲ್ಲಿ ಐಎಎಸ್ ಅಧಿಕಾರಿಗಳು ಕೇಂದ್ರ ಸರ್ಕಾರದಲ್ಲಿ ರಾಜ್ಯ ಸರ್ಕಾರದಲ್ಲಿ ಇದ್ದಾರೆ, ಅವರಿಂದ ಹಳ್ಳಿಯ ಯೋಜನೆಗಳನ್ನು ತಯಾರು ಮಾಡುವುದಕ್ಕೆ ಸಾಧ್ಯವಿಲ್ಲ. ಹಳ್ಳಿಯ ಯೋಜನೆಗಳನ್ನು ಹಳ್ಳಿಯವರೆ ಮಾಡಬೇಕು, ಗ್ರಾಮಸಭೆಗಳು ಕಡ್ಡಾಯವಾಗಿ ಆಗಬೇಕು ಅಲ್ಲಿರತಕ್ಕಂತಹ ಚುನಾಯಿತ ಪ್ರತಿನಿಧಿಗಳಿಂದಲೇ ಯೋಜನೆಗಳು ತಯಾರಾಗಿ ದೆಹಲಿಗೆ ಹೋಗಬೇಕೆನ್ನುವಂತಹ ಕನಸನ್ನು ಅವರು ಕಂಡಿದ್ದರು, ಆ ಮೂಲಕ ಜಾರಿಗೆ ತಂದರು. ಅದೆಲ್ಲವನ್ನು ವಿಕೃತಗೊಳಿಸಿ ಅಧಿಕಾರ ವಿಕೇಂದ್ರೀಕರಣ ಎಂದು ಘೋಷಿಸಿದರೂ ಕೂಡ ಗ್ರಾಮ ಪಂಚಾಯಿತಿಯಲ್ಲಿ ಅಧಿಕಾರಿಯೇ Chief Executive Head ಆಗಿದ್ದಾರೆ. ಜಿಲ್ಲಾ ಪಂಚಾಯಿತಿ ಅಧಿಕಾರಿಯನ್ನೇ Chief Executive Head ಎಂದು ಮಾಡಿದರು. ನಮ್ಮ ತಾಲ್ಲೂಕು ಪಂಚಾಯಿತಿಗೆ ಚುನಾಯಿತ ಪ್ರತಿನಿಧಿಗಳನ್ನು ಅವರು ಕೈಕೆಳಗೆ ಮಾಡಿದರು. ಆಗ ಸನ್ಮಾನ್ಯ ಸಿದ್ದರಾಮಯ್ಯನವರು ಜನತಾ ಪಕ್ಷದಲ್ಲಿ ಮಹಾ ಪ್ರಧಾನ ಕಾರ್ಯದರ್ಶಿಯಾಗಿದ್ದರು. ನೋಡಿ, ಕಾಂಗ್ರೆಸ್ ಪಕ್ಷದವರು ಅಧಿಕಾರ ಎಲ್ಲವನ್ನು ಮೊಟಕು ಮಾಡಿದರು, ನಮ್ಮಿಂದ ಅಧಿಕಾರವನ್ನು ಕಿತ್ತುಕೊಂಡಿದ್ದಾರೆ, ಗ್ರಾಮ ಪಂಚಾಯಿತಿ ಸೆಕ್ರೆಟರಿಗಳಿಗೆ ಅಧಿಕಾರವನ್ನು ಕೊಟ್ಟು

ಅವರ ಹಿಂದೆ ಛೇರ್ಮನ್ ಬ್ಯಾಗ್ ಹಿಡಿದುಕೊಂಡು ಹೋಗುವ ಹಾಗೆ ಮಾಡಿದ್ದಾರೆ ನಾವು ಮತ್ತೆ ಅಧಿಕಾರಕ್ಕೆ ಬರುತ್ತೇವೆ, ನಿಮ್ಮನ್ನೇ ಮುಖ್ಯಸ್ಥರನ್ನಾಗಿ ಮಾಡುತ್ತೇವೆ ಎಂದು ಹೇಳಿದರು. ಅದೇ ರೀತಿಯಾಗಿ 1994ರಲ್ಲಿ ಶ್ರೀ ಹೆಚ್.ಡಿ. ದೇವೇಗೌಡರು ಮುಖ್ಯಮಂತ್ರಿಯಾದಂತಹ ಸಂದರ್ಭದಲ್ಲಿ ಮತ್ತೆ ಚುನಾಯಿತ ಪ್ರತಿನಿಧಿಗಳನ್ನು Chief Executive Head ಎಂದು ಮಾಡಿ ಅವತ್ತು ಜಾರಿಗೆ ತಂದು ಅಧಿಕಾರವನ್ನು ಕೊಟ್ಟರು. ತಾಲ್ಲೂಕು ಬೋರ್ಡ್ ಇದ್ದಂತಹ ಸಂದರ್ಭದಲ್ಲಿಯೂ ಕೂಡ ಆ ಮೂಲಕ ಬಂದಂತಹ 44 ಜನ ಶಾಸಕರು ಇದ್ದರು, ಮಾನ್ಯ ಸಿದ್ದರಾಮಯ್ಯನವರೂ ಕೂಡ ಇವತ್ತು ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ. ತಾಲ್ಲೂಕು ಬೋರ್ಡ್ ಚುನಾವಣೆ ಮೂಲಕವೇ ಅವರು ಗೆದ್ದು ಬಂದಿದ್ದಾರೆ. ಅವರೇ ಈಗ ಮುಖ್ಯಮಂತ್ರಿಯಾಗಿದ್ದಾರೆ, ಶ್ರೀ ಹೆಚ್.ಕೆ. ಪಾಟೀಲ್‌ರವರು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾರೆ. ನಾನಾದರೂ ಕೂಡ ಒಂದು ಆಸೆಯನ್ನು ವ್ಯಕ್ತಪಡಿಸುತ್ತೇನೆ. ಗ್ರಾಮೀಣಾಭಿವೃದ್ಧಿ ಸಚಿವರು ಇಲ್ಲಿ ಇದ್ದಾರೆ, ಶ್ರೀ ನಜೀರ್ ಸಾಬ್‌ರವರ ಆಸೆಗಳನ್ನು ಅವರು ಈಡೇರಿಸುತ್ತಾರೆಂದು ಈ ರಾಜ್ಯದ 6 ಕೋಟಿ ಜನರ ನಂಬಿಕೆ ಅವರ ಮೇಲೆ ಇದೆ. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿ ಈ ಕ್ಷೇತ್ರವನ್ನು ಬಲಯುತಗೊಳಿಸುತ್ತಾರೆಂಬ ಅಚಲವಾದಂತಹ ನಂಬಿಕೆ, ಈ ರಾಜ್ಯದ ಜನರಿಗೆ ಇದೆ ಎನ್ನುವಂತಹ ವಿಚಾರವನ್ನು ತಿಳಿಸುವುದಕ್ಕೆ ಬಯಸುತ್ತೇನೆ. ಕರ್ನಾಟಕ ರಾಜ್ಯದ ಮುಖ್ಯ ಕಾರ್ಯದರ್ಶಿಗಿಂತಲೂ ಕೂಡ ಜಿಲ್ಲಾ ಮಟ್ಟದ ಮುಖ್ಯ ಕಾರ್ಯದರ್ಶಿ ಶ್ರೀ ಎಂ.ಆರ್. ಶ್ರೀನಿವಾಸ ಮೂರ್ತಿಯವರು ಇದ್ದರು. ಇವತ್ತು ಮುಖ್ಯ ಕಾರ್ಯದರ್ಶಿಯಾಗಿರುವ ಶ್ರೀ ಕೌಶಿಕ್ ಮುಖರ್ಜಿಯವರೂ ಕೂಡ ನಮ್ಮ ಜಿಲ್ಲಾ ಪರಿಷತ್‌ನಲ್ಲಿ ಮುಖ್ಯ ಕಾರ್ಯದರ್ಶಿಯಾಗಿದ್ದರು. ಅವೆಲ್ಲವನ್ನು ತೆಗೆದು ಈಗ ಏನು ಮಾಡಿದ್ದಾರೆಂದರೆ, ಉದಾಹರಣೆಗೆ ಹೇಳುವುದಾದರೆ ತಾಲ್ಲೂಕು ಪಂಚಾಯತ್ ಬಗ್ಗೆ ಸನ್ಮಾನ್ಯ ಸಚಿವರಿಗೆ ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಯಾವ ಕೆಎಎಸ್ ಅಧಿಕಾರಿಗಳು ತಾಲ್ಲೂಕು ಪಂಚಾಯಿತಿಯಲ್ಲಿ Executive Officers ಆಗಿರುತ್ತಿದ್ದರು, ಇವತ್ತು ಅವರನ್ನು ತೆಗೆದಿದ್ದಾರೆ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ

ಮತ್ತು ಪಶುಸಂಗೋಪನಾ ಸಚಿವರಾದ ಶ್ರೀ ಟಿ.ಬಿ. ಜಯಚಂದ್ರರವರು Animal Husbandry Departmentನಲ್ಲಿ ಡಾಕ್ಟರ್‌ಗಳು ಇಲ್ಲವೆಂದು ಹೇಳುತ್ತಿದ್ದಾರೆ. ಇವರೆಲ್ಲರೂ E.O.ಗಳಾಗಿ ಬರುತ್ತಿದ್ದಾರೆ. Veterinary Doctor ಗಳು Executive Officers ಗಳಾಗಿ ಬರುತ್ತಿದ್ದಾರೆ. ಅವರಿಗೆ ಏನು ಅನುಭವ ಇದೆ? Geologistಗಳು, ಭೂವಿಜ್ಞಾನ ಇಲಾಖೆಯವರು E.O.ಗಳಾಗಿ ಬರುತ್ತಿದ್ದಾರೆ. ಇವತ್ತು ಬೇರೆ ಬೇರೆ ಇಲಾಖೆಯವರು E.O.ಗಳಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಪರಿಣಿತಿಯೇ ಇಲ್ಲ. ಈ ಹಿಂದೆ BDOಗಳು ಇದ್ದರು. BDOಗಳು Development Department ನಿಂದ ತಾಲ್ಲೂಕು ಬೋರ್ಡ್ ಆಫೀಸ್‌ಗೆ ಬರುತ್ತಿದ್ದರು. ಇವತ್ತು 28 ಇಲಾಖೆಯಲ್ಲಿ ಇರುವಂತಹವರು E.O.ಗಳಾಗಿ ಅಧಿಕಾರಕ್ಕೆ ಬರುತ್ತಿದ್ದಾರೆ. ಅವರಿಗೆ ಎರಡೇ ವರ್ಷದಲ್ಲಿ promotion ಸಿಗುತ್ತದೆ. ನೀವು ಇವರುಗಳನ್ನು ಈಗಾಗಲೇ ಖಾಯಂಗೊಳಿಸಿಬಿಟ್ಟಿದ್ದೀರಿ. ಗ್ರಾಮ ಪಂಚಾಯಿತಿ ಇಲಾಖೆಗೆ ಇವರನ್ನು ನೀವು ವಿಲೀನಗೊಳಿಸಿದ್ದೀರಿ. ನೀವು ಅವರಿಗೆ ಈಗಾಗಲೇ promotion ಕೊಟ್ಟಿದ್ದೀರಿ. ಅವರುಗಳು ಜಿಲ್ಲಾ ಪಂಚಾಯಿತಿಯಲ್ಲಿ Deputy Secretary. ಶ್ರೀಮತಿ ಅಮಿತಾ ಪ್ರಸಾದ್‌ರವರು ಇಲ್ಲಿಯೇ ಇದ್ದಾರೆ, ಅವರು ಸೀನಿಯರ್ ಇದ್ದಾರೆ. ಅವರು ಶ್ರೀ ಅಬ್ದುಲ್ ನಜೀರ್‌ಸಾಬ್‌ರವರ ಕಾಲದಿಂದ ಇದ್ದಾರೆ. ಈ ರೀತಿಯಾಗಿ ಮಾಡುತ್ತಿದ್ದಾರಲ್ಲಾ ಇದು ನಿಮಗೆ ಒಪ್ಪಿಗೆ ಆಗುತ್ತದೆಯೇ? ಅವರನ್ನು ಇಲ್ಲಿಗೆ ತಂದು ಕೂರಿಸಿದ್ದೀರಲ್ಲಾ, ನಿಮ್ಮ ಕೈಯಲ್ಲಿ ಈ ಪಂಚಾಯಿತಿಯನ್ನು ಬಲಯುತಗೊಳಿಸುವುದಕ್ಕೆ ಸಾಧ್ಯವೇ? ಅನುಭವ ಇಲ್ಲದಿರುವ Veterinary Doctor E.O. ಕೆಲಸ ಮಾಡುವುದಕ್ಕೆ ಸಾಧ್ಯವೇ? ಅವರಿಗೆ ಅನುಭವ ಇದೆಯಾ? ನೀವು ಅವರನ್ನು ಕರೆದುಕೊಂಡು ಬಂದು ಜಿಲ್ಲಾ ಪಂಚಾಯಿತಿಯ ಉಪಕಾರ್ಯದರ್ಶಿಯನ್ನಾಗಿ ಮಾಡುತ್ತಿದ್ದೀರಿ. ಇದರಿಂದ ಏನಾಗುತ್ತಿದೆ ಎನ್ನುವುದನ್ನು ಒಂದು ಬಾರಿ ನೀವು ಯೋಚನೆ ಮಾಡಬೇಕು. ಇವತ್ತು ಏನಾಗಿದೆ ಎಂದರೆ ಕಂಪ್ಯೂಟರ್ ತಂದಿದ್ದೀರಿ. ನಮ್ಮ ಹಳ್ಳಿಗಳಲ್ಲಿ ಗ್ರಾಮ ಪಂಚಾಯಿತಿ, ನೀವು ಗ್ರಾಮಮಟ್ಟಕ್ಕೆ ಹೋಗುತ್ತೀರಿ, ಅಲ್ಲಿ ಗ್ರಾಮಠಾಣಾ ಇದೆ. ಗ್ರಾಮಠಾಣಾ extension ಆಗಿ ನೂರಾರು ವರ್ಷ ಆಯಿತು. ಗ್ರಾಮಠಾಣಾ

extend ಎಲ್ಲಿ ಆಗಿದೆ? 50% ಆಗಿದೆ, ಇನ್ನುಳಿದ 50% ಅವರೆಲ್ಲರೂ ಸರ್ವೆ ನಂಬರ್‌ನಲ್ಲಿ ಮನೆಯನ್ನು ಕಟ್ಟಿಕೊಂಡಿದ್ದಾರೆ. ಒಂದು ಊರಿನಲ್ಲಿ ಗ್ರಾಮಠಾಣಾ ಇತ್ತು, ತೋಪು ಇತ್ತು, ಕೆರೆ ಇತ್ತು, ಶಾಲಾ ಮೈದಾನ ಇತ್ತು, ಶಾಲೆ ಇತ್ತು, ಇವೆಲ್ಲವು ಮಹಾತ್ಮ ಗಾಂಧಿಯವರ ಆಸೆಗಳು. ಇವತ್ತು ಅವು ಎಲ್ಲಿದೆ? ಗುಂಡುತೋಪು, ನಮ್ಮ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್. ಬಂಗಾರಪ್ಪನವರ ಕಾಲದಲ್ಲಿ ಕೃಷಿಗಾಗಿ ಅವರಿಗೆ ಕೊಟ್ಟುಬಿಟ್ಟರು. ಗೋಮಾಳ ಸಾಗುವಳಿಯನ್ನು ಕೊಟ್ಟರು, ಇವತ್ತು ಊರಿನಲ್ಲಿ ಏನಿದೆ, ಅವರೆಲ್ಲರೂ ಸರ್ವೆ ನಂಬರ್‌ನಲ್ಲಿ ಮನೆಯನ್ನು ಕಟ್ಟಿಕೊಂಡಿದ್ದಾರೆ. ನೀವು ನಮೂನೆ 9 & 11 ತಂದಿದ್ದೀರಿ ಇದನ್ನು ನೀವು ಯಾರಿಗೆ ಕೊಡುತ್ತಿದ್ದೀರಿ? ಗ್ರಾಮಠಾಣಾ ಒಳಗಡೆ ಕಟ್ಟಿರುವಂತಹವರಿಗೆ, plan approval ಆಗಿರುವವರಿಗೆ ನೀವು ಅವರಿಗೆ ನಮೂನೆ 9 & 11 ಕೊಡುತ್ತಿದ್ದೀರಿ. ಇನ್ನುಳಿದ 50% ಸರ್ವೆ ನಂಬರ್‌ನವರಿಗೆ ನೀವು ಏನು ಮಾಡುತ್ತಿದ್ದೀರಿ? ರಿಜಿಸ್ಟರ್ ಆಗಿದ್ದರೆ plan approval ಆಗಿದ್ದರೆ, ನೀವು ನಮೂನೆ 11ಬಿ ಎಂದು ಮಾಡಿದ್ದೀರಿ. ಅವರ ತಾತನ ಆಸ್ತಿ, ರೆವಿನ್ಯೂ ಇಲಾಖೆಯಲ್ಲಿ ಆರ್‌ಟಿಸಿ ಇದ್ದವರೆಲ್ಲರನ್ನು ನೀವು computerಗೆ merge ಮಾಡಿದ್ದೀರಿ, 25 ವರ್ಷ ಆರ್‌ಟಿಸಿ ಇದ್ದವರೆಲ್ಲರನ್ನು computerಗೆ ತಂದು ಅಲ್ಲಿ merge ಮಾಡಿದ್ದೀರಿ. ಆದರೆ ಗ್ರಾಮ ಪಂಚಾಯಿತಿಯಲ್ಲಿ ಅವರ ತಾತ, ಅವನ ಮಗ, ಅವನ ಮೊಮ್ಮಗನ ಹೆಸರಿಗೆ ಖಾತೆಯನ್ನು, ಇವರಿಗೆ 11ಬಿ ಅನ್ನು ಕೊಡುವುದಿಲ್ಲ. 9 ಮತ್ತು 11 ಅನ್ನು ಕೊಡುವುದಿಲ್ಲ. ಅವರ ಗತಿ ಏನು? ಗ್ರಾಮೀಣ ಪ್ರದೇಶದ ಬಡವರ ಗತಿ ಏನು ಎಂದು ನಾನು ನಿಮ್ಮನ್ನು ಕೇಳುವುದಕ್ಕೆ ಬಯಸುತ್ತೇನೆ. ಸರ್ಕಾರವು ಏನು ಮಾಡುತ್ತಿದೆ?

ಅಧ್ಯಕ್ಷರು:- ಮಾನ್ಯ ಸಚಿವರೆ, ಸರ್ಕಾರ ಏನು ಮಾಡುತ್ತಿದೆ ಹೇಳಿ.

ಶ್ರೀ ಜಿ.ಟಿ. ದೇವೇಗೌಡ:- ಪೋಡಿ ಅಗುತ್ತಿಲ್ಲ, ರೈತರು ಸತ್ತುಹೋದರು, ಹಳ್ಳಿಯಲ್ಲಿರುವ ಮನೆಗಳಿಗೆ ಖಾತೆಗಳು ಆಗುತ್ತಿಲ್ಲ, ಮನೆಗಳು ರಿಜಿಸ್ಟರ್ ಆಗುತ್ತಿಲ್ಲ. ನಾನು ಸತ್ಯವಾದ ವಿಚಾರವನ್ನು ಹೇಳುತ್ತಿದ್ದೇನೆ. ಗ್ರಾಮೀಣ ಪ್ರದೇಶದ ಜನರು ಕಷ್ಟ ಅನುಭವಿಸುತ್ತಿದ್ದಾರೆ. ಒಂದು ಬಾರಿ

ಎರಡು ಬಾರಿ ರಿಜಿಸ್ಟರ್ ಆಗಿದ್ದರೆ ಅವರಿಗೆ ನಮೂನೆ 11 ಬಿ ಕೊಡುತ್ತಾರಂತೆ. ಅವರ ತಾತನಿಂದ ತಂದೆಯಿಂದ ಖಾತೆ ಬಂದಿದ್ದರೆ ಅವರ ಹೆಸರಿಗೆ ನಮೂನೆ 11 ಬಿ ಕೊಡುವುದಿಲ್ಲವಂತೆ. ಇದು ಎಂತಹ ನ್ಯಾಯ? ಇವರೆಲ್ಲರೂ ಬಂದು ಹಳ್ಳಿಗಳಲ್ಲಿ ಏನು ಮಾಡುತ್ತಾರೆ? ನಾನು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇವರು ಕಂಪ್ಯೂಟರ್ ತಂದರು. ರೆವಿನ್ಯೂ ಇಲಾಖೆಗೆ ಶ್ರೀ ರಾಜೀವ್ ಚಾವ್ಲಾ ಬಂದರು, Software, Computer, ಸತ್ತುಹೋಯಿತು. ದುರಸ್ತಿ ಇಲ್ಲದೆ ರೈತ ಸತ್ತುಹೋದ. ಈಗ ಅವರು ಗ್ರಾಮೀಣ ಪ್ರದೇಶಕ್ಕೆ computer ತಂದರು. ಖಾತೆ ಇಲ್ಲ, ಬಡವ ಸತ್ತು ಹೋದ, ಹಳ್ಳಿಗಳಲ್ಲಿ ಮನೆಯನ್ನು ಕಟ್ಟುವುದಕ್ಕಾಗುತ್ತಿಲ್ಲ. ಸೈಟನ್ನು ಏನೂ ಮಾಡುವುದಕ್ಕಾಗುತ್ತಿಲ್ಲ. ಆಹಾರ ಇಲಾಖೆಯಲ್ಲಿ SMS ಸಿಸ್ಟಂ ತಂದರು. ನನಗೇ ಬರುವುದಿಲ್ಲ. ಅಧ್ಯಕ್ಷರೆ, ಹಳ್ಳಿಯ ಪಡಿತರ ಬಡವರು ಸತ್ತುಹೋದರು. ಸ್ವಲ್ಪ ದಿವಸಗಳಲ್ಲಿ ಏನೇನಾಗುತ್ತದೆಂದು ನೋಡಿ ಅಧ್ಯಕ್ಷರೆ, ವಸತಿ ಇಲಾಖೆಗೆ GPS ತಂದರು, ಏನಾಗುತ್ತಿದೆ? Basement ಮಾಡಿದ್ದಾನೆ, ಇನ್ನೊಂದು ಫೋಟೋ ಕಳುಹಿಸಿ ಕೊಡಬೇಕು, ಕಳುಹಿಸದಿದ್ದರೆ ಅವನಿಗೆ ಬಿಲ್ ಇಲ್ಲ, ಎರಡನೆ ಬಿಲ್ ಇಲ್ಲ, ಮೂರನೆ ಬಿಲ್ ಇಲ್ಲ. ನಮಗೆ ಬರುವುದಿಲ್ಲ. ಕಳೆದ ಬಾರಿ 10000 ಮನೆಗಳನ್ನು ಕೊಟ್ಟರು ಎರಡೇ ಬಾರಿ implement ಆಗಿರುವುದು. ನಿವೇಶನಗಳೇ ಇಲ್ಲ ಅಧ್ಯಕ್ಷರೆ, 15 ಲಕ್ಷ ಮನೆಗಳನ್ನು ಕೊಡುತ್ತೇವೆಂದು ಹೇಳುತ್ತೀರಿ, ಎಲ್ಲಿ ಕೊಡುತ್ತೀರಿ? ನಿವೇಶನಗಳನ್ನು ಹಂಚಬೇಕು. ನಾನು ಒಂದು ಮಾತು ಹೇಳುತ್ತೇನೆ, 40 ಹೆಕ್ಟೇರ್ ಪ್ರದೇಶವನ್ನು ಕೆರೆಗಳಿಗೆಂದು ಗ್ರಾಮ ಪಂಚಾಯಿತಿಗೆ ಬಿಟ್ಟಿದ್ದೀರಿ, ಅವರು light charge ಕಟ್ಟಲಿಕ್ಕೆ ಆಗುತ್ತಿಲ್ಲ. ಅವನು ಕುಡಿಯುವ ನೀರಿನ ಬಿಲ್ ಕಟ್ಟಲಿಕ್ಕಾಗುತ್ತಿಲ್ಲ. 13th Finance ನಲ್ಲಿ ಅವರಿಗೆ 8 ಲಕ್ಷ ರೂಪಾಯಿಗಳನ್ನು ಕೊಡುತ್ತೀರಿ. ಅದು ಅವರ ಖರ್ಚಿಗೆ ಸಾಕಾಗುತ್ತಿಲ್ಲ, establishment ಇಲ್ಲ, ಒಂದು ತಾಲ್ಲೂಕು ಪಂಚಾಯಿತಿಗೆ 3.00 ಕೋಟಿ ರೂಪಾಯಿಗಳನ್ನು ಕೊಡುವುದು, ಒಂದು ಕೋಟಿ ರೂಪಾಯಿಗಳನ್ನು ಅಧ್ಯಕ್ಷರಿಗೆ ಕೊಡಬೇಕು, 13th Finance ನಲ್ಲಿ ಒಂದೂಕಾಲು ಕೋಟಿ ರೂಪಾಯಿಗಳು, ಇಡೀ 28 ತಾಲ್ಲೂಕು ಪಂಚಾಯಿತಿ 30 ಜನ membersಗೆ

ಅವರು ಕೊಡುವುದು 3.00 ಕೋಟಿ ರೂಪಾಯಿಗಳು. ತಾಲ್ಲೂಕು ಪಂಚಾಯಿತಿ ಏಕೆ ಬೇಕು? 40 ಹೆಕ್ಟೇರ್ ಇರತಕ್ಕಂಥ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆ ಇದೆ, ಅವರಿಗೆ ಕೊಡಿ. ಅಲ್ಲಿ ಇಂಜಿನಿಯರ್ಸ್ ಇದ್ದಾರೆ, ಅವರು ಅದನ್ನು ಅಭಿವೃದ್ಧಿಪಡಿಸಲಿ ಅಧ್ಯಕ್ಷರೆ, ಗ್ರಾಮ ಪಂಚಾಯಿತಿಯಲ್ಲಿ ನೀವೇಕೆ ಇಟ್ಟುಕೊಳ್ಳುವಿರಿ? ಕೆರೆಗಳನ್ನು ಯಾರು ಮಾಡುತ್ತಾರೆ?

ಅಧ್ಯಕ್ಷರು:– ಸಾಕು.

ಶ್ರೀ ಜಿ.ಟಿ. ದೇವೇಗೌಡ:– ಒಂದು ನಿಮಿಷ, ಅಧ್ಯಕ್ಷರೆ ನಾನು ನಿಮಗೆ ಹೇಳಬಯಸುತ್ತಿದ್ದೇನೆ, ಸಣ್ಣ ನೀರಾವರಿ ಇಲಾಖೆಯ ಕೆರೆಗಳನ್ನು ಅಭಿವೃದ್ಧಿಪಡಿಸಲಿಕ್ಕೆ ಮಾಡಿದ್ದಾರೆ. ಪ್ರಾಧಿಕಾರ ಮಾಡಿ, ವಹಿಸಿ, ಒಂದು ಕ್ಷೇತ್ರದಲ್ಲಿ ಒಂದು ಕೆರೆ ಎಲ್ಲಿಯೂ ಆಗಿಲ್ಲ, ಸಾವಿರಾರು ಕೋಟಿ ರೂಪಾಯಿಗಳು ಹೋಗುತ್ತಿದೆ, ಅದನ್ನು ಸರಿಯಾಗಿ ಮಾಡಿ, ಕುಡಿಯುವ ನೀರಿನ ಬಗ್ಗೆ ಹೇಳಿಬಿಟ್ಟು ಮುಗಿಸುತ್ತೇನೆ. ಕುಡಿಯುವ ನೀರಿನ ಬಗ್ಗೆ ನಮ್ಮ ಮೈಸೂರು ಭಾಗದಲ್ಲಿ ನೀವು ಕೇಳಬಾರದು, ಬೆಳಗಾಂ ಭಾಗದಲ್ಲಿ ಸುಖವಾಗಿದ್ದಾರೆ, ಗುಲ್ಬರ್ಗಾ ಭಾಗದಲ್ಲಿ ಸುಖವಾಗಿದ್ದಾರೆ, ನಮ್ಮ ಮೈಸೂರು ಭಾಗದಲ್ಲಿ ಕುಡಿಯುವ ನೀರಿಲ್ಲ. ಒಂದು ಕಡೆ ಜಿಲ್ಲಾ ಪಂಚಾಯಿತಿ, ಇನ್ನೊಂದು ಕಡೆ ಕಾರ್ಪೊರೇಷನ್, ಇನ್ನೊಂದು ಕಡೆ Water Board, ಏಕೆ ಬೇಕು? ನಮಗೆ ಪ್ರತ್ಯೇಕವಾದ Water Board ಮಾಡಿ. ಮೈಸೂರು ಒಂದು ಜಲಮಂಡಳಿ ಕೊಡಿ. ಮಾನ್ಯ ಮುಖ್ಯಮಂತ್ರಿಗಳು 25 ವರ್ಷಗಳಿಂದ ಅಲ್ಲಿ ಇದ್ದಾರೆ. ಅವರೀಗ ಈ ಸದನದಲ್ಲಿಲ್ಲ, ಇದ್ದಿದ್ದರೆ ಅವರಿಗೆ ಹೇಳುತ್ತಿದ್ದೆ. ಜಲಮಂಡಳಿ ಮಾಡಿ, ನೇರವಾಗಿ ನಿರ್ವಹಿಸಿ, Revenue ವಿಭಾಗಕ್ಕೆ ಒಂದು ಮುಖ್ಯ ಇಂಜಿನಿಯರ್ ಕಛೇರಿ ತೆರೆಯಬೇಕು. ಮಂತ್ರಿಗಳು ಈಗ ತಾಲ್ಲೂಕಿಗೆ ಒಂದು ಮಾಡುತ್ತಿದ್ದೀರಿ ಸಂತೋಷ. ಸವದಿಯವರು ಇವತ್ತು ಶ್ರೀ ಹೆಚ್.ಕೆ. ಪಾಟೀಲರನ್ನು ಮುಖ್ಯಮಂತ್ರಿಗಳಾಗಬೇಕೆಂದು ಹೇಳುತ್ತಿದ್ದರು. ಶ್ರೀ ಕೆ.ಹೆಚ್. ಪಾಟೀಲರು ಹೋರಾಟ ಮಾಡಿದರು. ನಂಜೇಗೌಡರು, ನಾಗರತ್ನಮ್ಮನವರು, ಎಸ್.ಎಂ. ಕೃಷ್ಣ, ಎಸ್. ಪುಟ್ಟಸ್ವಾಮಿಯವರು ಎಲ್ಲಾ ಅವರಿಗೆ ಬೆಂಬಲ ಕೊಟ್ಟಿದ್ದೇವೆ.

ಅಧ್ಯಕ್ಷರು:– ವಿಷಯದ ಬಗ್ಗೆ ಮಾತನಾಡುವುದನ್ನು ಬಿಟ್ಟು ಎಲ್ಲೋ ಹೋಗುತ್ತೀರಿ. ಆಯಿತು. ಮುಗಿಸಿ.

ಶ್ರೀ ಜಿ.ಟಿ. ದೇವೇಗೌಡ:– ದೇವರಾಜ ಅರಸುರವರ ವಿರುದ್ಧವಾಗಿ ಸೆಟೆದು ನಿಂತಿದ್ದರು. ನೀವು ಅಷ್ಟು ಶಕ್ತಿಯುತವಾಗಿ ಕೆಲಸ ಮಾಡಬೇಕು.

ಅಧ್ಯಕ್ಷರು:– ಕುಡಿಯುವ ನೀರಿನ ಬಗ್ಗೆ ಮಾತನಾಡಿ ಅಂದರೆ ದೇವರಾಜ ಅರಸು, ಮುಖ್ಯಮಂತ್ರಿ, ಹೀಗೆ ಮಾತನಾಡುವುದೆ? ಸಾಕು ಬಿಡಿ,

ಶ್ರೀ ಜಿ.ಟಿ. ದೇವೇಗೌಡ:– ಸವದಿಯವರು ಹೇಳಿದ್ದಕ್ಕೆ ನಮ್ಮ ಭಾಗದಲ್ಲಿಯೂ ಕೂಡ ಕೆ.ಹೆಚ್. ಪಾಟೀಲ್‌ರವರಿಗೆ ಬೆಂಬಲ ಕೊಡುತ್ತಿದ್ದೆವು. ಆದ್ದರಿಂದ ಹೆಚ್.ಕೆ. ಪಾಟೀಲರೆ, ನಿಮಗೆ ಕಳಕಳಿ ಇದೆ, ಮಾಡಬೇಕೆಂಬ ಛಲ ಇದೆ, ಅವತ್ತಿನಿಂದ ಪ್ರಾರಂಭ ಮಾಡಿದ್ದೀರಿ, ನೀವು ಸರಳವಾಗಿ ಮಾಡಬೇಕೆಂದು ಏನು ಹೊರಟಿದ್ದೀರಿ ಅದು ಕಠಿಣವಾಗುತ್ತಿವೆ, ಮನೆಗಳನ್ನು ಕಟ್ಟಲಿಕ್ಕೆ ಆಗುತ್ತಿಲ್ಲ. ಯಾರಿಗೂ ಸ್ವಾತಂತ್ರ್ಯ ಇಲ್ಲ, ಬಹಳಷ್ಟು ಮನೆಗಳಿರಲಿ, ನಿವೇಶನಗಳಿರಲಿ, ಊರಿಗೊಂದು ಕೆರೆ, ಊರಿಗೊಂದು ಸ್ಮಶಾನ, ಊರಿಗೊಂದು ತೋಪು, ಅದನ್ನು ಏನು ಮಾಡಬೇಕೆಂದು ಮಾಡಿದ್ದೀರಿ ಅವೆಲ್ಲ ಅಭಿವೃದ್ಧಿಯಾಗಬೇಕಾದರೆ ಸರ್ಕಾರಕ್ಕೆ commitment ಬೇಕು, ಕಾಳಜಿ ಬೇಕು, ಕಾಂಗ್ರೆಸ್ ಸರ್ಕಾರ ಇದನ್ನು ವಿಕೃತಗೊಳಿಸಿದೆ ಸಿದ್ದರಾಮಯ್ಯನವರೇ ಇದನ್ನು ನೀವು ಸರಿಮಾಡಿ, ಈ ಗ್ರಾಮ ಪಂಚಾಯತ್ ರಾಜ್ ಸಂಸ್ಥೆಗಳನ್ನು ಉಳಿಸಿ, ಅಭಿವೃದ್ಧಿ ಮಾಡಿ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ವಡ್ನಾಳ್ ರಾಜಣ್ಣ ಮಾತನಾಡಿ 5 ನಿಮಿಷ ಮಾತನಾಡಿ,

ಶ್ರೀ ವಡ್ನಾಳ್ ರಾಜಣ್ಣ (ಚನ್ನಗಿರಿ):– ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬೇಡಿಕೆಯ ಮೇಲೆ ಚರ್ಚೆ ಮಾಡಲಿಕ್ಕೆ ಅವಕಾಶಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ, ತಮಗೆ ಅಭಿನಂದನೆಗಳು. ನಮ್ಮ ದೇಶ ಹಳ್ಳಿಗಳ ದೇಶ. ಹಳ್ಳಿಗಳ ಅಭಿವೃದ್ಧಿಯಾಗಬೇಕು, ಆಗ ರಾಷ್ಟ್ರದ ಅಭಿವೃದ್ಧಿಯಾಗಬೇಕೆಂದು ಕನಸನ್ನು

ಕಂಡಂಥ ಮಹಾತ್ಮ ಗಾಂಧೀಜಿಯವರ ಕನಸು ನನಸಾಗಬೇಕಾದಂಥ ಸಂದರ್ಭ ಇದು. ಹಾಗಾಗಿ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯಾಗಬೇಕಾದರೆ ಇನ್ನು ಸಾಕಷ್ಟು ಅಭಿವೃದ್ಧಿಯ ಕೆಲಸಗಳಾಗಬೇಕೆನ್ನುವಂಥ ಮಾತನ್ನು ತಮ್ಮ ಮೂಲಕ ಹೇಳಲಿಕ್ಕೆ ಬಯಸುತ್ತೇನೆ.

ಅಧ್ಯಕ್ಷರು:– ಇನ್ನೊಬ್ಬ ಮಹಾತ್ಮ ಗಾಂಧೀಜಿಯವರನ್ನು ಕರೆಸೋಣ, ಹೇಳಿ.

ಶ್ರೀ ವಡ್ನಾಳ್ ರಾಜಣ್ಣ:– ಮಾನ್ಯ ಅಧ್ಯಕ್ಷರೆ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಮೂರು ಹಂತಗಳ ಸಂಸ್ಥೆಗಳ ಮೂಲಕ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯನ್ನು ಮಾಡುವಂಥ ಒಂದು ಪ್ರಯತ್ನ ನಡೆಯುತ್ತಿದೆ. ಗ್ರಾಮ ಪಂಚಾಯಿತಿಗಳಿಗೆ ಸರ್ಕಾರ ಕೊಡುವಂಥ ಅನುದಾನ ಏನಿದೆ, ಅದು ಯಾವುದೂ ಸಾಕಾಗುವುದಿಲ್ಲ, 8–10 ಲಕ್ಷ ರೂಪಾಯಿಗಳನ್ನು ಒಂದೊಂದು ಗ್ರಾಮ ಪಂಚಾಯಿತಿಗೆ ಕೊಟ್ಟರೆ ಇನ್ನು ಎಷ್ಟೇ ವರ್ಷಗಳಾದರೂ ಗ್ರಾಮಗಳ ಅಭಿವೃದ್ಧಿ ಆಗಲಿಕ್ಕೆ ಸಾಧ್ಯವಿಲ್ಲ. ಕೇವಲ ಕರೆಂಟ್ ಫೀಸ್ ಅನ್ನು ಕಟ್ಟಲಿಕ್ಕೆ ಆಗದಿರುವಂಥ ಪರಿಸ್ಥಿತಿಯನ್ನು ಈಗ ನಾವು ಕಾಣುತ್ತಿದ್ದೇವೆ. ಆದರೆ ಕೇಂದ್ರದಲ್ಲಿ ಯುಪಿಎ ಸರ್ಕಾರ ಬಂದ ಮೇಲೆ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಗ್ರಾಮಗಳ ಅಭಿವೃದ್ಧಿ ಸಾಕಷ್ಟು ಆಗಿರುವುದನ್ನು ನಾವು ಕಾಣುತ್ತೇವೆ. ಒಂದೊಂದು ಗ್ರಾಮ ಪಂಚಾಯಿತಿಯಲ್ಲಿ minimum 50 ಲಕ್ಷ ರೂಪಾಯಿಗಳಿಂದ ಎರಡು ಕೋಟಿ ರೂಪಾಯಿಗಳವರೆಗೆ ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಆಗಿರುವುದನ್ನು ನಾವು ಕಾಣುತ್ತೇವೆ. ಗ್ರಾಮ ಪಂಚಾಯಿತಿಯಲ್ಲಿ ಸಿಬ್ಬಂದಿಯ ಕೊರತೆ ಇರುವಂಥದ್ದು, ಸಿಬ್ಬಂದಿಯ ಕೊರತೆಯಿಂದ ಸಾಕಷ್ಟು ಕೆಲಸಗಳ ಹಿನ್ನಡೆಯಾಗುತ್ತಿದೆ. ಮಾನ್ಯ ಸಚಿವರು ಅನುಭವಿಗಳಿದ್ದೀರಿ, ಸಮರ್ಥರಿದ್ದೀರಿ, ಆ ಗ್ರಾಮ ಪಂಚಾಯಿತಿಗೆ ತಕ್ಕ ಹಾಗೆ ಸಿಬ್ಬಂದಿಯನ್ನು ಒದಗಿಸುವಂಥ ಕೆಲಸ ಆಗಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲಿ ಸುಮಾರು 61 ಗ್ರಾಮ ಪಂಚಾಯಿತಿಗಳು ಬರುತ್ತವೆ. ಅಲ್ಲಿರುವಂಥ PDO ಗಳ ಸಂಖ್ಯೆ 22 ಇದೆ. ಒಬ್ಬೊಬ್ಬ PDO ಎರಡು–ಮೂರು ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ಮಾಡಬೇಕೆಂದು ಹೇಳಿದರೆ ಅದು ಆಗದಿರುವಂಥ

ಪರಿಸ್ಥಿತಿ, ಜೊತೆಗೆ ಕಂಪ್ಯೂಟರ್ ಆಪರೇಟ್ ಮಾಡುವವರು ಕೇವಲ ಒಬ್ಬರಿದ್ದರೆ ಅವರಿಗೆ ಕೆಲಸ ಒತ್ತಡ ಸಾಕಷ್ಟು ಇರುವಂಥ ಸಂದರ್ಭದಲ್ಲಿ ಒಂದು ಕಡೆ ಉದ್ಯೋಗ ಖಾತ್ರಿಯ ಕೆಲಸಗಳನ್ನು ಮಾಡಬೇಕಾಗುತ್ತದೆ. ಇನ್ನೊಂದು ಕಡೆ ಅವರಿಗೆ ರೇಷನ್ ಕಾರ್ಡ್‌ಗಳ ಕೆಲಸವನ್ನು ಅವರೇ ಮಾಡುವುದರಿಂದ ಆ ಕೆಲಸದ ಒತ್ತಡದಿಂದ ಆ ಕೆಲಸಗಳ ಹಿನ್ನೆಡೆಯಾಗುತ್ತದೆ. ಎರಡು ಜನ ಕಂಪ್ಯೂಟರ್ ಆಪರೇಟರ್‌ಗಳು ಬೇಕು, ಎರಡು ಕಂಪ್ಯೂಟರ್ ಬೇಕು. ಒಂದು ಕಂಪ್ಯೂಟರ್‌ನಲ್ಲಿ ಇಬ್ಬರನ್ನು ಕೂರಿಸುವುದಕ್ಕಾಗುವುದಿಲ್ಲ. ಹಾಗಾಗಿ ಆ ವ್ಯವಸ್ಥೆಯನ್ನು ಮಾಡಬೇಕೆಂಬ ವಿನಂತಿಯನ್ನು ಮತ್ತು ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಕಡ್ಡಾಯವಾಗಿ ಒಬ್ಬ PDO ಇದ್ದರೆ ಆ ಕೆಲಸಗಳು ಜರೂರಾಗಿ ನಡೆಯಲಿಕ್ಕೆ ಸಾಧ್ಯತೆ ಇದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಅಲ್ಲಿಗೆ ಸಂಬಂಧಪಟ್ಟಂತೆ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಎಸ್ಟಿಮೇಟ್ ಮಾಡುವಂಥ ಸಂದರ್ಭದಲ್ಲಿ ನಮಗೆ Junior Engineers ಸಂಖ್ಯೆ ಕೂಡ ಕಡಿಮೆ ಇದೆ. ಈಗಾಗಲೇ Technical Engineer, Technical Assistatants ಅನ್ನು ನೀವು appoint ಮಾಡಿದ್ದೀರಿ. ಅವರೂ ಸಹ ಐದು–ಆರು ಗ್ರಾಮ ಪಂಚಾಯಿತಿಗಳಿಗೆ ಒಬ್ಬೊಬ್ಬರು ಇದ್ದಾರೆ. ಹಾಗಾಗಿ ಅದು ಸಹ ಸಾಕಾಗುವುದಿಲ್ಲ, ಅವೆಲ್ಲಾ ವ್ಯವಸ್ಥೆಯನ್ನು ಸರಿಮಾಡುವಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು, ಅದನ್ನು ಮಾಡುತ್ತೀರಿ ಎಂದು ತಮ್ಮಲ್ಲಿ ಭರವಸೆಯನ್ನು ಇಟ್ಟುಕೊಂಡಿದ್ದೇನೆ. ನಮ್ಮ ಪಂಚಾಯಿತಿಯಲ್ಲಿ ಅನೇಕ ಕೆಲಸಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ಅದರಲ್ಲಿಯೂ ಪ್ರಮುಖವಾಗಿ ಮನೆಗಳನ್ನು ಕೊಡುವುದರಲ್ಲಿ ಸಾಕಷ್ಟು ಲೋಪದೋಷಗಳಾಗುತ್ತವೆ ಎಂದು ಹೇಳಿ ನಾನಾದರೂ ಭಾವಿಸಿದ್ದೇನೆ. ಇವತ್ತು ಯಾವುದೇ ಸರ್ಕಾರ ಬರಲಿ, ಒಂದು ಕ್ಷೇತ್ರದಲ್ಲಿ ಕನಿಷ್ಠ ಪಕ್ಷ 8,000 ಅಥವಾ 10,000 ಮನೆಗಳನ್ನು ಕೊಡುತ್ತಿದ್ದಾರೆ. ಆದರೂ ಸಹ ನಮಗೆ ಇನ್ನು ಮನೆಗಳ ಬೇಡಿಕೆ ಇದೆ. ಅದನ್ನು ಸಮರ್ಪಕವಾಗಿ ಅರ್ಹ ಫಲಾನುಭವಿಗಳನ್ನು ಗುರುತಿಸುವಲ್ಲಿ ಎಲ್ಲೋ ಎಲ್ಲರೂ ವಿಫಲರಾಗುತ್ತಿದ್ದೇವೆಂದು ನನ್ನ ಭಾವನೆ. ಮೊದಲು ಸರ್ಕಾರ ಮಾಡಬೇಕಾಗುವುದು siteless, houseless ಏನಿದ್ದಾರೆ

ಅವರ ಪಟ್ಟಿಯನ್ನು ತಯಾರು ಮಾಡಿಕೊಳ್ಳಬೇಕು. ಆ ಪಟ್ಟಿಯನ್ನು ಇಟ್ಟುಕೊಂಡು ಆ ಗ್ರಾಮ ಪಂಚಾಯಿತಿಯ ಮಟ್ಟದಲ್ಲಿ ಮನೆಗಳನ್ನು ಆಯ್ಕೆ ಮಾಡತಕ್ಕಂಥ ಸಂದರ್ಭದಲ್ಲಿ ಲಾಟರಿ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಬೇಕೆಂದು ಈಗಾಗಲೇ ಸರ್ಕಾರ ಆದೇಶ ಹೊರಡಿಸಿದೆ. ಅದು ಕಡ್ಡಾಯವಾಗಿ ಎಲ್ಲಿಯೂ ಆಗಿಲ್ಲ, ಕಾಟಾಚಾರಕ್ಕೆ ಅಗಿರುವುದನ್ನು ನಾವು ಕಾಣುತ್ತೇವೆ. ಅದನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು. ಅರ್ಹ ಫಲಾನುಭವಿಗಳನ್ನು ಲಾಟರಿ ಮೂಲಕವೇ ಆಯ್ಕೆ ಮಾಡುವಂಥ ಕೆಲಸವಾದರೆ ಸ್ವಲ್ಪ ಮಟ್ಟಿಗೆ ಸುಧಾರಣೆ ಆಗಬಹುದೆಂದು ನಾನು ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ನಿರ್ಮಲ್ ಭಾರತ್ ಅಭಿಯಾನ್ (NBA) ಕಾರ್ಯಕ್ರಮ ಏನಿದೆ, ಅದೊಂದು ಒಳ್ಳೆಯ ಉತ್ತಮವಾದಂಥ ಕಾರ್ಯಕ್ರಮ, ಆ ಕಾರ್ಯಕ್ರಮದಲ್ಲಿ ನಾನಾ ತರಹದ ಸಮಸ್ಯೆಗಳು ಬರುತ್ತಿವೆ. ಆ ಶೌಚಾಲಯಗಳನ್ನು ನಿರ್ಮಾಣ ಮಾಡುವಂಥ ಸಂದರ್ಭದಲ್ಲಿ ಬಡವರು ಶೌಚಾಲಯವನ್ನು ಕಟ್ಟಿಕೊಳ್ಳುವುದಕ್ಕೆ ತಯಾರಾಗುತ್ತಾರೆ. ಆದರೆ ಅದಕ್ಕೆ ಕೊಡಬೇಕಾದಂಥ ಹಣವನ್ನು ಸಮಯಕ್ಕೆ ಸರಿಯಾಗಿ ಕೊಡದೆ ಬಹಳ ಕಷ್ಟವನ್ನು ಅನುಭವಿಸುತ್ತಿರುವುದನ್ನು ಕ್ಷೇತ್ರಗಳಲ್ಲಿ ನೋಡುತ್ತಿದ್ದೇವೆ. ಹಾಗಾಗಿ ಆ ಬಡವರು ಏನು ನಿರ್ಮಲ್ ಭಾರತ್ ಅಭಿಯಾನ್ ಯೋಜನೆಯಡಿಯಲ್ಲಿ ಶೌಚಾಲಯವನ್ನು ಕಟ್ಟಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ, ಅವರಿಗೆ ಸಕಾಲಕ್ಕೆ ಸರಿಯಾಗಿ ಹಣವನ್ನು ಒದಗಿಸುವಂಥ ಕೆಲಸವಾಗಬೇಕು. ಇನ್ನೊಂದು ಬಹಳ ಕ್ಲಿಷ್ಟಕರವಾದಂಥ ಸಂಗತಿಯನ್ನು ನಮ್ಮ ಕ್ಷೇತ್ರದಲ್ಲಿ ಕಾಣುತ್ತೇನೆ. ಪಾಂಡವ ಹಟ್ಟಿ ಎನ್ನುವಂಥದ್ದು ಒಂದು ಗ್ರಾಮವಿದೆ. ಹರಿಜನ ಕಾಲೋನಿಯಲ್ಲಿ ಅವರಿಗೆ ಶೌಚಾಲಯವನ್ನು ಕಟ್ಟಿಸಿಕೊಳ್ಳಲಿಕ್ಕೂ ಸಹ ಜಾಗವಿಲ್ಲ, ಸುಮಾರು 150 ಮನೆಗಳಿರುವಂಥ ಕಾಲೋನಿ ಅದು, ಅಲ್ಲಿ 150 ಮನೆಗಳಲ್ಲಿಯೂ ಶೌಚಾಲಯವನ್ನು ಕಟ್ಟಿಸಿಕೊಡಲಿಕ್ಕೆ ಜಾಗವಿಲ್ಲದಿರುವಂಥ ಪರಿಸ್ಥಿತಿ ಇದೆ. ಅವರಿರುವಂಥ ಮನೆಗಳಲ್ಲಿ ಶೌಚಾಲಯವನ್ನು ಕಟ್ಟಿಕೊಳ್ಳುವುದಕ್ಕೆ ಅವರು ತಯಾರಿದ್ದರೂ ಅದಕ್ಕೆ ಅವಕಾಶವಿಲ್ಲದೇ ಇರುವುದು ಕಂಡುಬರುತ್ತಿದೆ. ಸಂತೆಬೆನ್ನೂರು ಎನ್ನುವಂಥ ದೊಡ್ಡ ಗ್ರಾಮ,

22 ಗ್ರಾಮಗಳಿರುವ ಗ್ರಾಮ ಪಂಚಾಯಿತಿ ಇದೆ. ಅಲ್ಲಿಯೂ ಅದೇ ಪರಿಸ್ಥಿತಿ ಇದೆ, ಅವರಿಗೆ ನೀವೇನು ಕ್ರಮವನ್ನು ತೆಗೆದುಕೊಳ್ಳುತ್ತೀರಿ, ಯಾವರೀತಿ ನಿರ್ಮಲ್ ಭಾರತ್ ಅಭಿಯಾನ್ ಯೋಜನೆಯಡಿಯಲ್ಲಿ ಶೌಚಾಲಯವನ್ನು ಮಾಡಿಕೊಡಲಿಕ್ಕೆ ಅದಕ್ಕೆ ಪರಿಹಾರವೆಂದರೆ ಅವರಿಗೆ ಬೇರೆ ಕಡೆ ಜಾಗ ನೋಡಿ ಅವರಿಗೆ ಸೈಟ್ ಕೊಟ್ಟು ಮನೆ ಕಟ್ಟಿಸಿ ಶೌಚಾಲಯವನ್ನು ಮಾಡಿಕೊಡಬೇಕು.

ಅಧ್ಯಕ್ಷರು:- ಸಲಹೆಯನ್ನು ಕೊಡಿ, ಇಂಥ ಕಡೆ ಜಾಗ ಕೊಡಿಸುತ್ತೇನೆ ಎಂದು ಹೇಳಿ.

ಶ್ರೀ ವಡ್ನಾಳ್ ರಾಜಣ್ಣ:- ಅವರಿಗೆ ಬೇರೆ ದಾರಿಯೇ ಇಲ್ಲ.

ಅಧ್ಯಕ್ಷರು:- ತೋರಿಸಿ ಹೇಳ್ರಿ. ಇಂತಹ ಕಡೆಗೆ ಕೊಡಿಸುತ್ತೇನೆ ಎಂದು ಹೇಳಿ.

ಶ್ರೀ ವಡ್ನಾಳ್ ರಾಜಣ್ಣ:- ನಾನು ಹೇಳಿದಂತಹ ಒಂದೆರಡು-ಮೂರು ಗ್ರಾಮಗಳಲ್ಲಿ ಯಾವುದೇ ಕಾರಣಕ್ಕೆ ಅವರ ಮನೆಯಲ್ಲಿ ಶೌಚಾಲಯವನ್ನು ಮಾಡಿಕೊಳ್ಳುವುದಕ್ಕೆ ಜಾಗವೇ ಇಲ್ಲದೇ ಇತರಕ್ಕಂತಹ ಪರಿಸ್ಥಿತಿಯಲ್ಲಿ ಸಣ್ಣ ಸಣ್ಣ ಮನೆಗಳಲ್ಲಿ ವಾಸ ಮಾಡುತ್ತಿದ್ದಾರೆ. ಅವರಿಗೆ ಬೇರೆ ಕಡೆ ಜಾಗವನ್ನು ಕೊಟ್ಟು, ಮನೆಯನ್ನು ಕಟ್ಟಿ, ಶೌಚಾಲಯದ ವ್ಯವಸ್ಥೆಯನ್ನು ಮಾಡಿಕೊಡುವಂತಹ ಕೆಲಸವನ್ನು ಮಾನ್ಯ ಮಂತ್ರಿಗಳು ಮಾಡಬೇಕೆಂಬ ವಿನಂತಿಯನ್ನು ಮಾಡಿಕೊಳ್ಳುವುದಕ್ಕೆ ನಾನು ಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನು ಕುಡಿಯುವ ನೀರಿಗೆ ಸಂಬಂಧಪಟ್ಟ ಹಾಗೆ, ಕುಡಿಯುವ ನೀರಿನ ಪರಿಸ್ಥಿತಿ ಏನಾಗಿದೆ ಎಂದರೆ, ಇವತ್ತು ನಾವು ಬೋರ್‌ವೆಲ್ ಹಾಕಿಸಿದ್ದೇವೆ ಎಂದರೆ ಎರಡು ಇಂಚು ನೀರು ಬಿದ್ದಿದೆ ಎಂದು ಹೇಳುತ್ತಾರೆ. ಎಂಟು ದಿವಸಗಳು ಆಯಿತು ಎಂದರೆ ಸಂಪೂರ್ಣವಾಗಿ ನೀರಿಲ್ಲವೆನ್ನುವ ಸೂಚನೆಯನ್ನು ಮತ್ತೇ ಕೊಡುತ್ತಾರೆ. ಆದರೆ, ಮತ್ತೇ ಬೋರ್‌ವೆಲ್ ಹಾಕಿಸಿ ನೀರನ್ನು ಕೊಡುತ್ತೇವೆ ಸರಿ. ಆದರೆ, ಆ ಬೋರ್‌ವೆಲ್‌ನಲ್ಲಿ ಇದ್ದಂತಹ ಮೋಟರ್ ಏನಾಗುತ್ತದೆ ಎಂಬುದು ಇಲ್ಲಿಯವರೆಗೆ ಯಾರಿಗೂ ಗೊತ್ತಾಗುವುದಿಲ್ಲ. ಮತ್ತೇ ಹೊಸದಾಗಿ

ಬೋರ್‌ವೆಲ್ ಹಾಕುತ್ತೇವೆ. ಮತ್ತೇ ಹೊಸದಾಗಿ ಪೈಪ್‌ಲೈನ್ ಮಾಡುತ್ತೇವೆ. ಮತ್ತೇ ಹೊಸದಾಗಿ ಮೋಟರ್‌ಅನ್ನು ಹಾಕುತ್ತೇವೆ. ಹಾಗಾಗಿ ಯಾವಾಗ ನಾವು ಬೋರ್‌ವೆಲ್ ಹಾಕುತ್ತೇವೆ, ಆ ಬೋರ್‌ವೆಲ್‌ಗೆ ಹಾಕಿದಂತಹ ಮೋಟರ್ ಏನಾಯಿತು ಎನ್ನುವುದು ಬೇಕಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ನಾವು ಕುಡಿಯುವ ನೀರಿಗೆ ಪ್ರತಿವರ್ಷ ಒಂದೊಂದು ಹಳ್ಳಿಯಲ್ಲಿ ಕನಿಷ್ಠ ಪಕ್ಷವೆಂದರೂ 2–3–4 ಬೋರ್‌ವೆಲ್‌ಗಳನ್ನು ಹಾಕುತ್ತಿದ್ದೇವೆ. ಆದರೆ, ಅಲ್ಲಿ ನೀರಿನ sources ಕಡಿಮೆ ಇರುವುದರಿಂದ ಸಾಕಷ್ಟು ವ್ಯತ್ಯಾಸಗಳನ್ನು ಕಾಣುತ್ತಿರುವಂತಹ ಸಂದರ್ಭದಲ್ಲಿ ನದಿ ಮೂಲಗಳಿಂದ ನೀರನ್ನು ತರತಕ್ಕಂತಹ ಕೆಲಸ ಮಾಡಿದರೆ, ಕೆರೆಗಳನ್ನು ತುಂಬಿಸುವಂತಹ ಕೆಲಸ ಮಾಡಿದರೆ, ನಮಗೆ ಅಂತರ್ಜಲ ಮಟ್ಟವನ್ನು ಹೆಚ್ಚಿಸುವುದಕ್ಕೆ ಸಾಧ್ಯತೆ ಇರತಕ್ಕಂತಹದ್ದು ಅನುಭವದ ಮೇರೆಗೆ ಹೇಳಬೇಕೆಂದರೆ ಮಾನ್ಯ ಹೆಚ್.ಕೆ. ಪಾಟೀಲ್‌ರವರು ನೀರಾವರಿ ಮಂತ್ರಿಗಳಾದಂತಹ ಸಂದರ್ಭದಲ್ಲಿ 1999ರಲ್ಲಿ ಉಗ್ರಾಣಿ ಮತ್ತು ಅಮೃತಾಪುರ ಏತನೀರಾವರಿ ಮಾಡಿದ ಪರಿಣಾಮ ಇವತ್ತು ಆ ಭಾಗದಲ್ಲಿರತಕ್ಕಂತಹ 40 ಹಳ್ಳಿಗಳಲ್ಲಿ ಇವತ್ತು ಒಂದೂವರೆ ವರ್ಷದಲ್ಲಿ ಒಂದೂ ಕೊಳವೆ ಬಾವಿ ಸಹ ನಾವು ಹಾಕಿಲ್ಲ. ಏಕೆಂದರೆ, ಆ ಭಾಗದಲ್ಲಿರತಕ್ಕಂತಹ ಕೆರೆಗಳು ಎಲ್ಲಾ ತುಂಬಿದರ ಪರಿಣಾಮ ಇವತ್ತು ಒಂದೂ ಬೋರ್‌ವೆಲ್‌ಗಳನ್ನು ಹಾಕದೇ ಇರುವಂತಹದ್ದನ್ನು ನಾವು ಕಾಣುತ್ತೇವೆ. ಹಾಗಾಗಿ ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಆ ನದಿ ಮೂಲದಿಂದ ಎಲ್ಲೆಲ್ಲಿ ನೀರನ್ನು ತಂದು ಕೆರೆಗಳನ್ನು ತುಂಬಿಸುವುದಕ್ಕೆ ಸಾಧ್ಯತೆಯಿದೆ, ಅಲ್ಲಿ ತುಂಬಿಸುವಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರೆ ಸರ್ಕಾರ ಒಂದು ಸಲ 100 ಕೋಟಿ, 500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬಹುದು. ಆದರೆ, ಪ್ರತಿ ದಿವಸ, ಪ್ರತಿ ವರ್ಷ ಖರ್ಚು ಮಾಡತಕ್ಕಂತಹ ಹಣವನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯತೆಯಿದೆ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ.

ಅಧ್ಯಕ್ಷರು:– O.K., ಆಯಿತು, ಸಾಕು.

ಶ್ರೀ ವಡ್ನಾಳ್ ರಾಜಣ್ಣ:– ಮಾನ್ಯ ಅಧ್ಯಕ್ಷರೆ, ರಸ್ತೆಗಳಿಗೆ ಸಂಬಂಧಪಟ್ಟ ಹಾಗೆ ನಮ್ಮ ಹೊಲ, ನಮ್ಮ ರಸ್ತೆ ಎನ್ನುವ ಒಂದು ಕಾರ್ಯಕ್ರಮ ನಮ್ಮ ಸರ್ಕಾರದ್ದು ಇದೆ. ಆದರೆ, ರೈತರಿಗೆ ಬಹಳ ಮುಖ್ಯವಾಗಿ ಇರತಕ್ಕಂತಹ ರಸ್ತೆಗಳು ಅವು. ಇವತ್ತು ಈ ಸರ್ಕಾರದಲ್ಲಿ ಕೊಡತಕ್ಕಂತಹ ಕಾರ್ಯಕ್ರಮ ಏನಿದೆ ಅದನ್ನು ನರೇಗಾ ಮೂಲಕ ಮಾಡತಕ್ಕಂತಹ ವಿಧಾನವೇನಿದೆ ಅದಕ್ಕಿಂತ ಹೆಚ್ಚಾಗಿ ಒಂದೊಂದು ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 25–30 ಕಿ.ಮೀ. ರಸ್ತೆಯನ್ನು ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು ಎನ್ನುವ ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು:– ಆಯಿತು. Please, ದಯವಿಟ್ಟು ಸಾಕು.

ಶ್ರೀ ವಡ್ನಾಳ್ ರಾಜಣ್ಣ:– ಮಾನ್ಯ ಅಧ್ಯಕ್ಷರೆ, ಇನ್ನೊಂದು ಬಹಳ ಪ್ರಮುಖವಾದಂತಹ ವಿಚಾರ. ನಮ್ಮ ಗ್ರಾಮ, ನಮ್ಮ ರಸ್ತೆ. ನಮ್ಮ ಹಳ್ಳಿ ಜನ ನೋಡುತ್ತಿದ್ದಾರೆ. ಈ ರಾಜ್ಯದಲ್ಲಿ ಇವತ್ತು ಪ್ರಥಮ ಬಾರಿಗೆ ಗ್ರಾಮೀಣಾಭಿವೃದ್ಧಿ ಇಲಾಖೆಯ ಬೇಡಿಕೆ ಮೇಲೆ ಚರ್ಚೆ ನಡೆಯುತ್ತಿದೆ. ಏನೋ ಬಹಳ ಕ್ರಾಂತಿಕರವಾದಂತಹ ತೀರ್ಮಾನವನ್ನು ತೆಗೆದುಕೊಳ್ಳಬಹುದು ಎನ್ನುವ ದೃಷ್ಟಿಯಿಂದ ಹಳ್ಳಿಯಲ್ಲಿರತಕ್ಕಂತಹ ಜನರು ನೋಡುತ್ತಿದ್ದಾರೆ. ಹಳ್ಳಿಯಲ್ಲಿರತಕ್ಕಂತಹವರು ನಮಗೆ ಬೈಪಾಸ್ ರಸ್ತೆ ಕೊಡಿ ಎಂದು ಕೇಳುವುದಿಲ್ಲ, ನಮಗೆ ರಿಂಗ್ ರೋಡ್ ಕೊಡಿ ಎಂದು ಕೇಳುವುದಿಲ್ಲ, ನಮಗೆ ಫ್ಲೈ ಓವರ್ ಕೊಡಿ ಎಂದು ಕೇಳುವುದಿಲ್ಲ, ನಮಗೆ ಮೆಟ್ರೊ ಟ್ರೈನ್ ಕೊಡಿ ಎಂದು ಕೇಳುವುದಿಲ್ಲ. ಅವರಿಗೆ ಬೇಕಾದಂತಹ ರಸ್ತೆ ಏನಿದೆ, ನಮ್ಮ ಗ್ರಾಮ, ನಮ್ಮ ರಸ್ತೆ ಎನ್ನತಕ್ಕಂತಹದ್ದನ್ನು ಮಾನ್ಯ ಸಚಿವರು 20 ಕಿ.ಮೀ.ಗೆ ಸೀಮಿತ ಮಾಡಿರುವಂತಹದ್ದನ್ನು 30 ಕಿ.ಮೀ.ಗೆ ಹೆಚ್ಚಿಸಬೇಕೆಂದು ವಿನಂತಿ ಮಾಡುತ್ತೇನೆ. ನಾವು ಇಲ್ಲಿ ಸದನದಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ನಾವು ನಜೀರ್ ಸಾಬ್ ಅವರನ್ನು ಜ್ಞಾಪಕ ಮಾಡಿಕೊಳ್ಳುತ್ತೇವೆ. ಕುಡಿಯುವ ನೀರನ್ನು ಕೊಟ್ಟಂತಹವರು ನಜೀರ್ ಸಾಬ್ ಅವರು ಎಂದು ಜ್ಞಾಪಿಸಿಕೊಳ್ಳುತ್ತೇವೆ. ಹಾಗೆಯೇ ಮಾನ್ಯ ಹೆಚ್.ಕೆ. ಪಾಟೀಲ್‌ರವರು ತಾವು ಏನು ಇದ್ದೀರಿ, ತಾವು ಸಮರ್ಥರಿದ್ದೀರಿ, ಅನುಭವ ಇದೆ. ಅದೇ ರೀತಿ ಕ್ರಾಂತಿಕಾರಕವಾದಂತಹ

ಕೆಲಸವನ್ನು ಮಾಡುವಂತಹವರಿದ್ದೀರಿ. 30 ಕಿ.ಮೀ. ನಮ್ಮ ಗ್ರಾಮ, ನಮ್ಮ ರಸ್ತೆಗೆ ಕೊಡಬೇಕು ಎನ್ನುವಂತಹ ಒತ್ತಾಯವನ್ನು ಮಾಡುವ ಮೂಲಕ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.

ಪಿ. ರಾಜೀವ್:- ಮಾನ್ಯ ಅಧ್ಯಕ್ಷರೆ, first time MLA ಗಳಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು:- ಆಯಿತು, ಬರುತ್ತೇವೆ. 5–5 ನಿಮಿಷದಲ್ಲಿ ಮಾತನಾಡಿ ಎಂದರೆ ನೀವು ಒಬ್ಬೊಬ್ಬರು 10–10 ನಿಮಿಷ ಮಾತನಾಡಿದರೆ ನಾನು ಏನು ಮಾಡುವುದಕ್ಕೆ ಆಗುತ್ತದೆ? ದಯವಿಟ್ಟು ನಾನು ಎಲ್ಲರಿಗೂ ವಿನಂತಿ ಮಾಡಿಕೊಳ್ಳುತ್ತೇನೆ. ಈ ದಿವಸ ನಾವು lunch ಒಳಗಡೆ complete ಮಾಡಬೇಕು. ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಅದಕ್ಕೋಸ್ಕರ ನಾನು ಹೇಳುವುದು. ಮಾತನಾಡಿ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ):- ಮಾನ್ಯ ಅಧ್ಯಕ್ಷರೆ, ಪಂಚಾಯತ್ ರಾಜ್ ಇಲಾಖೆಯ ಬಗ್ಗೆ ಇವತ್ತು ಸಾಕಷ್ಟು ಚರ್ಚೆಗಳಾಗಿವೆ. ಬಹುಶಃ 73ನೇ ತಿದ್ದುಪಡಿ ಮಾಡಿ ಪಂಚಾಯತ್ ರಾಜ್ ಕಾಯ್ದೆ ಅನುಷ್ಠಾನಕ್ಕೆ ತಂದಂತಹ ಮೂಲ ಉದ್ದೇಶವೇನೆಂದರೆ, ಹಳ್ಳಿಯಲ್ಲಿ ವಾಸ ಮಾಡುತ್ತಿರುವಂತಹ ಕಟ್ಟ ಕಡೆಯ ವ್ಯಕ್ತಿ ಸ್ವಾವಲಂಬಿ, ಸ್ವಾಭಿಮಾನ ಜೀವನವನ್ನು ಮಾಡಬೇಕು, ಆತನಿಗೆ ಮೂಲಭೂತ ಸೌಕರ್ಯ ಏನು ಆಗಬೇಕು ಅದನ್ನು ತೆಗೆದುಕೊಳ್ಳುವಂತಹದ್ದು ಅಥವಾ ಅದನ್ನು ಕೇಳುವಂತಹ ಅಧಿಕಾರ ಆ ಗ್ರಾಮದ ವ್ಯಕ್ತಿಗೆ ಸಿಗಬೇಕು ಎನ್ನುವುದು ಬಹುಶಃ ಈ ತಿದ್ದುಪಡಿಯ ಉದ್ದೇಶ, ಪಂಚಾಯತ್ ರಾಜ್ ಕಾಯ್ದೆ. ಆದರೆ, ಇವತ್ತು ಏನಾಗುತ್ತಿದೆ ಎಂದರೆ, ಕಾರ್ಯಕ್ರಮಗಳು ಸಾಕಷ್ಟು ಇವೆ. ಆದರೆ, ಅದನ್ನು ಅನುಷ್ಠಾನ ಮಾಡದ ವ್ಯವಸ್ಥೆಗಳು ಹೇಗಿವೆ? ಇವತ್ತು ನಾವು ಉದ್ಯೋಗ ಖಾತ್ರಿ ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ ಬಹಳ ಒಳ್ಳೆಯ ಕಾರ್ಯಕ್ರಮ ಎನ್ನುವುದು ಕೂಡ ಇದೆ. ಅದು ಹೇಗೆ ಅನುಷ್ಠಾನವಾಗುತ್ತಿದೆ? ಇದನ್ನು ಸ್ವಲ್ಪ

ಗಂಭೀರವಾಗಿ ನಾವು ಯೋಚನೆ ಮಾಡಿದಾಗ ಈ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಯಾವ್ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ಗೈಡ್‌ಲೈನ್ಸ್ ಇದೆ. ಎಲ್ಲಾ percentage ಇಷ್ಟು, formation of new road 10%, ಅದು ಬಿಟ್ಟು ಬೇರೆ ಮಾಡುವ ಹಾಗಿಲ್ಲ. ಬೇರೆ ಬೇರೆ ಇದೆ. ಅದರ ಜೊತೆಗೆ ಬಜೆಟ್‌ನಲ್ಲಿ ಒಂದಿಷ್ಟು ಕಾರ್ಯಕ್ರಗಳನ್ನು ಕೊಟ್ಟಿದ್ದಾರೆ. ಆದರೆ, ಇಡೀ ರಾಜ್ಯಕ್ಕೆ ಅದನ್ನು ಏಕ ರೀತಿಯಲ್ಲಿ ಅನುಷ್ಠಾನ ಮಾಡಲಿಕ್ಕೆ ಸಾಧ್ಯತೆಯಿದೆಯೇ, ಖಂಡಿತ ಇಲ್ಲ. ನಮ್ಮ ಮಲೆನಾಡು ಭಾಗದಲ್ಲಿ ಮೊದಲ ಆದ್ಯತೆ ಯಾವುದಕ್ಕೆ ಕೊಡಬೇಕೆಂದರೆ ರಸ್ತೆಗಳಾಗಬೇಕು ಅಥವಾ ಇರುವಂತಹ ರಸ್ತೆಗಳಿಗೆ ಚರಂಡಿಗಳನ್ನು ಮಾಡುವುದಕ್ಕೆ ಹೆಚ್ಚು ಆದ್ಯತೆ ಕೊಡಬೇಕು. ಅಲ್ಲಲ್ಲಿ ಕುಡಿಯುವ ನೀರಿಗೆ ಆದ್ಯತೆ ಕೊಡಬೇಕು. ಇದಕ್ಕೆ ಹೆಚ್ಚು ಆದ್ಯತೆ ಕೊಡಬೇಕು, ಬಿಡಿ. ಇವರು 10% ಬಿಟ್ಟರೆ ಇಲ್ಲ. ಆಮೇಲೆ ಇವತ್ತು ಹೇಗಿದೆ ಎಂದರೆ ಈ ಕ್ರಿಯಾ ಯೋಜನೆ ಮಾಡುವುದರಲ್ಲಿ ಇವರ ಅಧಿಕಾರ ವಿಕೇಂದ್ರೀಕರಣ ಹೋಗಿ ಇವತ್ತು ಅಧಿಕಾರ ಕೇಂದ್ರೀಕರಣ ಆಗಿದೆ. ಗ್ರಾಮ ಸಭೆಯಲ್ಲಿ ಏನು ಗೈಡ್‌ಲೈನ್ಸ್ ಕೊಟ್ಟಿರುತ್ತಾರೆ ಅದರ ಪ್ರಕಾರ ಅವರಿಗೆ ಏನು ಬೇಕೋ ಅದನ್ನು ನಿಶ್ಚಯ ಮಾಡಿ ಕ್ರಿಯಾ ಯೋಜನೆ ಮಾಡಿ ಕಳುಹಿಸಿಕೊಟ್ಟರೆ ತಾಲ್ಲೂಕು ಪಂಚಾಯಿತಿ EO ಅದಕ್ಕೆ ಒಪ್ಪಿಗೆ ಹಾಕಬೇಕು. ಇವತ್ತು ತಾಲ್ಲೂಕು ಪಂಚಾಯಿತಿ EO ಗಳ ಪರಿಸ್ಥಿತಿ ಹೇಗಿದೆ ಎಂದರೆ ನಾನು ವಿವರಗಳಿಗೆ ಹೋಗುವುದಿಲ್ಲ. ಈ ಬಗ್ಗೆ ನಾನು ಸಚಿವರಲ್ಲಿ ವಿನಂತಿಸುವುದೇನೆಂದರೆ, EO ಗಳು ಮತ್ತು PDOಗಳಿಗೆ ಹೆಚ್ಚಿನ ಮಟ್ಟದ ತರಬೇತಿ ಕೊಡುವ ಅವಶ್ಯಕತೆಯಿದೆ. ಏಕೆಂದರೆ, ಅವರಿಗೆ ಏನೂ ಗೊತ್ತಿಲ್ಲ. ಇವತ್ತು ಅವರುಗಳ shortage ಇದೆ. ಆದರೆ, ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಇವತ್ತು ಮೈಸೂರಿನಲ್ಲಿ ನೀವು ಕೊಡುವಂತಹ training ಏನಿದೆ ಅವರಿಗೆ ಏನೂ ಗೊತ್ತಿಲ್ಲ. ಅಲ್ಲಿಗೆ ಅವರು ಹೋಗುತ್ತಾರೋ ಇಲ್ಲವೋ ಅನ್ನುವುದು ನನಗೆ ಸಂಶಯ. ಕೆಲವು PDOಗಳು ಕಾನೂನು ಪದವೀಧರರಿದ್ದಾರೆ. ಅವರು ಗ್ರಾಮೀಣಾಭಿವೃದ್ಧಿಯ ಬಗ್ಗೆ ಮಾತನಾಡುವುದಿಲ್ಲ. ಪಾಪ ಅಧ್ಯಕ್ಷರು ಇವತ್ತು ಮೀಸಲಾತಿ ವ್ಯವಸ್ಥೆಯಲ್ಲಿರುತ್ತಾರೆ. ಆತ ಕಾನೂನೇ ಮಾತನಾಡುತ್ತಾರೆ. ಕಾನೂನೇ

ಮಾತನಾಡುವುದು. ರೂಲ್ಸ್‌ನಲ್ಲಿ ಹೀಗಿದೆ ಎಂದು ಹೇಳುವುದನ್ನೂ ನಾನು ನೋಡಿದ್ದೇನೆ. ಈ ವ್ಯವಸ್ಥೆಯನ್ನು ಸರಿಮಾಡಬೇಕು. ಗ್ರಾಮೀಣಾಭಿವೃದ್ಧಿ ಇಲಾಖೆಗಳಿಗೆ ಏನು ಮಾಡಬೇಕು ಅದನ್ನು ಕೇಳಬೇಕಾದಂತಹದ್ದು ಇದೆ. ಅಲ್ಲಿಂದ EO ಗಳು ಕುಳಿತುಕೊಂಡು ಅದಕ್ಕೆ objection ಹಾಕುವುದು, ವಾಪಸ್ಸು ಹೋಗುವುದು. ಆಯಿತು ಮತ್ತೆ ಸರಿಮಾಡಿಕೊಂಡು ಬಂದರೆ ತಾಲ್ಲೂಕು ಪಂಚಾಯಿತಿ EO ಸರಿಮಾಡಿದರೆ ಮತ್ತೆ CEOರವರ ಒಪ್ಪಿಗೆ ಆಗಬೇಕು. ಅವರು ಒಪ್ಪಿಗೆ ಕೊಡುವುದು, ಅಲ್ಲಿನ ಅಧಿಕಾರಿಗಳಿಗೆ basic knowledge ಇರುವುದಿಲ್ಲ. ಈಗ ನಮ್ಮಲ್ಲಿ ಒಬ್ಬರು CEO ಹಾಕಿದ್ದಾರೆ. Probationary IAS Officer. ಈ Probationary IAS Officer ಅನ್ನು CEO ಎಂದು ತಂದು ಹಾಕಿದರೆ ಅವರು ಏನು ಮಾಡುತ್ತಾರೆ?

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ):- I have to intervene. ಗ್ರಾಮ ಸಭೆ ಏನು ಕ್ರಿಯಾ ಯೋಜನೆಯನ್ನು ರೂಪಿಸುತ್ತೆ, ಅದು ಆ norms ಒಳಗಿಲ್ಲದೇ ಹೋದರೆ ಮಾತ್ರ EO ಅಥವಾ CEO interference ಆಗಲಿಕ್ಕೆ ಆಗುತ್ತದೆಯೇ ಹೊರತಾಗಿ ಏನು decisions ಮಾಡಿರುತ್ತಾರೆ ಅದನ್ನು meddle ಮಾಡತಕ್ಕಂತಹ ಅಧಿಕಾರ ಇವತ್ತು ಇಲ್ಲ. ತೊಂದರೆ ಎಲ್ಲಿ ಬಂದಿರುವುದು ಎಂದರೆ, ನಾವು ಕಾರ್ಯಕರ್ತರುಗಳು ಯಾರಿದ್ದೇವೆ, ಭಾರತೀಯ ಜನತಾ ಪಕ್ಷವಾಗಲಿ, ಕಾಂಗ್ರೆಸ್ ಆಗಲಿ, ಜೆ.ಡಿ.(ಎಸ್) ಆಗಲಿ ನಮ್ಮವರು ಯಾರಿಗೂ ಕೂಡ ಇದರ ತಿಳುವಳಿಕೆಯೇ ಇಲ್ಲ. ನಾವು ನಮ್ಮ ಅಧಿಕಾರವನ್ನು assert ಮಾಡಿಕೊಳ್ಳುತ್ತಿಲ್ಲ. ಈಗ ಒಂದು ಕೆಲಸ ಮಾಡಿರುತ್ತಾರೆ. ಪುನಃ ಅದನ್ನೇ repeat ಮಾಡಿದರೆ ಅದಕ್ಕೆ ಬೇಕಾದರೆ EO objection ಹಾಕಲಿ. ಆ ಕೆಲಸಕ್ಕೆ ಅವರು ಇರುವುದು. If he doesn't do that, he fails in his duty. ನಾವು ನಮಗೆ ಏನು ಅಧಿಕಾರ ಅಂದರೆ ಗ್ರಾಮ ಪ್ರತಿನಿಧಿಗಳಿಗೆ ಏನು ಅಧಿಕಾರ ಪ್ರದತ್ತವಾಗಿ ಬಂದಿದೆ, ಅದನ್ನು ತಿಳಿ ಹೇಳುವುದರಲ್ಲಿಯೂ fail ಆಗಿದ್ದೇವೆ. ರಾಜಕೀಯ ಪಕ್ಷಗಳು ರಾಜಕೀಯ ಕಾರ್ಯಕರ್ತರನ್ನು ಈ ವಿಚಾರದಲ್ಲಿ ಅಂದರೆ ತಿಳುವಳಿಕಸ್ಥರನ್ನಾಗಿ ಮಾಡತಕ್ಕಂತಹ ವಿಚಾರದಲ್ಲಿ

ನಾವು ಪೂರ್ಣ ಯಶಸ್ಸನ್ನು ಸಾಧಿಸಿಲ್ಲ. Factually incorrect ಆಗಬಾರದು, ಅದಕ್ಕೆ I am trying to assist you.

ಶ್ರೀ ಕೆ.ಜಿ. ಬೋಪಯ್ಯ:- ಈಗ ರಮೇಶ್ ಕುಮಾರ್‌ರವರು ಹೇಳಿದ್ದನ್ನು ನಾನು ಒಪ್ಪುತ್ತೇವೆ. ಆದರೆ, ಈ ಗೈಡ್‌ಲೈನ್ಸ್ ನೀವು ಏನು ಮಾಡುತ್ತೀರಿ, ಅದು ಎಲ್ಲಾ ಕಡೆಗೆ ಒಂದೇ ರೀತಿಯಾದರೆ ಸಾಧ್ಯವೇ ಇಲ್ಲ.

ಅಧ್ಯಕ್ಷರು:- ಗೈಡ್‌ಲೈನ್ಸ್ ಮಾಡಿರುವುದು ಭಾರತ ಸರ್ಕಾರ ರ್ರೀ. ನಮ್ಮ ಸರ್ಕಾರ ಮಾಡಿದೆಯೇ?

ಶ್ರೀ ಕೆ.ಜಿ. ಬೋಪಯ್ಯ:- ಅದನ್ನೇ ನಾನು ಹೇಳುತ್ತಿರುವುದು.

ಅಧ್ಯಕ್ಷರು:- ಮತ್ತೆ ಅಲ್ಲಿ ಹೋಗ್ರಿ. ಪಾರ್ಲಿಮೆಂಟ್‌ನಲ್ಲಿ ಹೋಗಿ ಹೇಳಿಬನ್ನಿ.

ಶ್ರೀ ಕೆ.ಜಿ. ಬೋಪಯ್ಯ:- ಅದಕ್ಕೆ ನಾನು ಒತ್ತಾಯ ಮಾಡುತ್ತಿದ್ದೇನೆ. ಈ ಗೈಡ್‌ಲೈನ್ಸ್ ಬದಲಾವಣೆಯಾಗದೇ ಹೋದರೆ . ..

ಅಧ್ಯಕ್ಷರು:- ನಮ್ಮ ವ್ಯಾಪ್ತಿಯಲ್ಲಿರುವ ವಿಷಯದ ಬಗ್ಗೆ ಮಾತ್ರ ಚರ್ಚೆ ಮಾಡಿ, ಇದು ನಮ್ಮ ವ್ಯಾಪ್ತಿಯಲ್ಲಿಲ್ಲ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ):- ಗೈಡ್‌ಲೈನ್ಸ್ ಬದಲಾವಣೆಗೆ ಕಳುಹಿಸಬಹುದು ಮಾಡುತ್ತಾರೆ. 10% ಮಾತ್ರ ರಸ್ತೆ ಮಾಡಿಯೆಂದರೆ ಹೇಗೆ ಆಗುತ್ತದೆ? ಉದಾಹರಣೆಗೆ ಕೆರೆಗಳ ಪುನಶ್ಚೇತನ ಇದನ್ನು ಮಾಡದೇ ಬೇಕೆಂದಿದೆ. ಮಲೆನಾಡಿನ ಅನೇಕ ಭಾಗಳಲ್ಲಿ ಕೆರೆಗಳೇ ಇಲ್ಲ. ಎಲ್ಲಿಂದ ಕೆರೆಗಳನ್ನು ಮಾಡುವುದು? ಕೆರೆಗಳು ಇಲ್ಲದ ಪಂಚಾಯಿತಿಗಳೇ ಜಾಸ್ತಿಯಿವೆ. ಯಾವುದೋ ದೇವಸ್ಥಾನದಲ್ಲಿ ಕೆರೆಯಿದೆ.

ಅಧ್ಯಕ್ಷರು:- ಕೃಷಿ ಹೊಂಡ ಮಾಡಿ, ನೀರು ಹೊಂಡ ಮಾಡಿ.

ಶ್ರೀ ಕೆ.ಜಿ. ಬೋಪಯ್ಯ:- ಕೃಷಿ ಹೊಂಡ ಮಾಡುವ ಅಗತ್ಯವಿಲ್ಲ.

ಶ್ರೀ ಕೆ. ವೆಂಕಟೇಶ್:- ಮಾಡುವ ಅಗತ್ಯವಿದೆ.

ಶ್ರೀ ಕೆ.ಜಿ. ಬೋಪಯ್ಯ:- ನಿಮ್ಮ ಕಡೆಯಿರಬಹುದು, ಕೃಷಿ ಹೊಂಡ ಎಲ್ಲಿ ಅಗತ್ಯವಿದೆ ಅಲ್ಲಿ ಮಾಡಲಿ ಎಂದು ನಾನು ಹೇಳುತ್ತಿರುವುದು. ಆದರೆ ನಾವು ಕೃಷಿ ಹೊಂಡ ಮಾಡಬೇಕೆಂದರೆ ಸಾಧ್ಯವಿಲ್ಲ. ಹೆಚ್ಚೆಂದರೆ ಕಿಂಡಿ ಅಣೆಕಟ್ಟು ಅದೊಂದು ಮಾಡಬಹುದು. ಅದಕ್ಕೆ ಆಯಾಯ ಪಂಚಾಯಿತಿಗಳಲ್ಲಿ ಚರ್ಚೆ ಮಾಡಿ ಏನು ಮಾಡುತ್ತಾರೋ ಅದಕ್ಕೆ ಒಂದು ಅವಕಾಶವನ್ನು ಕೇಂದ್ರಕ್ಕೆ ಬರೆದು ಅನುಮತಿ ತೆಗೆದುಕೊಳ್ಳದೆ ಹೋದರೆ ಖಂಡಿತ ಉದ್ಯೋಗ ಖಾತರಿ ಯಶಸ್ವಿಯಾಗುವುದಿಲ್ಲ. ಕ್ರಿಯಾ ಯೋಜನೆ ಇದನ್ನು ಒಂದು ವರ್ಷಕ್ಕೆ ಒಂದೇ ಸಲ ಮಾಡಬೇಕು. ಆದರೆ ಅದು ಎಲ್ಲಿ ಆಗುತ್ತದೆ? 3-4 ಬಾರಿ ಗ್ರಾಮಸಭೆಗಳಾಗುತ್ತವೆ. ಪ್ರತಿ ಸಲ ಮಾಡುವುದಕ್ಕೆ ಅವಕಾಶವಿದೆಯೇ? ಇಲ್ಲ. ಉದ್ಯೋಗ ಖಾತರಿ ಯೋಜನೆಯಲ್ಲಿ job card ಎಂದರೆ ಬೆಳಿಗ್ಗೆ 8 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ಕೆಲಸವನ್ನು ಮಾಡಬೇಕೆಂದಿಲ್ಲ. ಯಾವುದೋ particular ಕೆಲಸಕ್ಕೆ ಉದ್ಯೋಗ ಖಾತರಿಯಲ್ಲಿ ಇವತ್ತು minimum wages ಏನಿದೆ ಅದನ್ನು ಲೆಕ್ಕಹಾಕಿ estimation Engineer ಗಳು ಮಾಡಲಿ. ಅಲ್ಲಿನ ಜನ ಊರಿನವರು ಯಾವಾಗಲಾದರೂ ಮಾಡಿಕೊಳ್ಳುತ್ತಾರೆ. ನಂತರ ಅವರಿಗೆ payment ಮಾಡಲಿ. 194 ರೂಪಾಯಿಗಳಿಗೆ ಬೆಳಿಗ್ಗೆಯಿಂದ ಸಂಜೆಯವರೆಗೆ ಕೆಲಸ ಮಾಡಬೇಕೆಂದರೆ ಯಾರೂ ಕೂಡ ಮಾಡುವುದಿಲ್ಲ. ಅವರಿಗೆ ಕೊಡಿ ಅವರು ಯಾವಾಗಲಾದರೂ ಮಾಡಿ ಮುಗಿಸುತ್ತಾರೆ. ಆದರೆ estimation ಗೆ ಇಷ್ಟು ಕೂಲಿ ಆಳು ಎಂದು ಮಾಡಿ ಅವರೇ ಮಾಡಿ ಮುಗಿಸುತ್ತಾರೆ. ಅದಕ್ಕೂ ಅವಕಾಶಗಳಿಲ್ಲ. ನ್ಯೂನತೆಗಳನ್ನು ತಾವು ದಯವಿಟ್ಟು ಸರಿಪಡಿಸಬೇಕು.

ಇವತ್ತು ಕುಡಿಯುವ ನೀರಿನ ವಿಷಯದಲ್ಲಿ ಏನಾಗಿದೆಯೆಂದರೆ, KEB ಮತ್ತು ಇವರಿಗೆ ಹೊಂದಾಣಿಕೆಯಿಲ್ಲ. Jack-well, pipeline ಹಾಕುವುದು ಜಿಲ್ಲಾ ಪಂಚಾಯಿತ್‌ನವರು, current line estimation ಮಾಡುವುದು ವಿದ್ಯುತ್ ಇಲಾಖೆಯವರು ಅವರು ಮಾಡುವುದೇ ಇಲ್ಲ. ಇದರಲ್ಲಿ ಅವರ ತಪ್ಪಿಲ್ಲ. ಅವರಲ್ಲಿ ಸಿಬ್ಬಂದಿಗಳಿಲ್ಲ. 2000 linemen ಗಳ requirement ಇದೆಯೆಂಬುದನ್ನು ಇವತ್ತು ಪತ್ರಿಕೆಯಲ್ಲಿ ನೋಡಿದೆ ಹೀಗಿರುವಾಗ ಅವರು

ಎಲ್ಲಿಂದ ಮಾಡುತ್ತಾರೆ? ಅದಕ್ಕೆ ನನ್ನ ಸಲಹೆ ಏನೆಂದರೆ, ಹೊಸ ಕುಡಿಯುವ ನೀರಿಗೆ ಒಂದು ವಿಭಾಗ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ನೀವು ಕೇವಲ ಇಂಜಿನಿಯರಿಂಗ್ ವಿಭಾಗ ಅಷ್ಟನ್ನೇ ಮಾಡಬಾರದು. ಅಲ್ಲಿಗೆ KEB Engineers ಕೂಡ ಮಾಡಿ ಈ estimation ನೀವು KEB ಗೆ ಬರೆದು ಅದು ಬರುವಷ್ಟರಲ್ಲಿ ನಾಲ್ಕು ವರ್ಷಗಳಾಗುತ್ತವೆ. ಕನಿಷ್ಠ 3–4 ಪಂಚಾಯಿತಿಗಳಿಗೆ ಒಬ್ಬ Assistant Engineer ಬೇಕಾಗುತ್ತದೆ. ಅದನ್ನು ಇವತ್ತು ಖಂಡಿತ ಮಾಡಲೇಬೇಕಾಗುತ್ತದೆ. ಈ ರೀತಿ ಆದಾಗ ಮಾತ್ರ ಯಶಸ್ವಿಯಾಗುತ್ತದೆ. ವಿಶೇಷವಾಗಿ ಮಲೆನಾಡಿನ ಭಾಗಗಳಲ್ಲಿ gravitational forceನಲ್ಲಿ ನೀರು ತರುವುದಕ್ಕೆ ಹೆಚ್ಚು ಒತ್ತಾಸೆಯನ್ನು ಕೊಡುವಂತಹ ಕೆಲಸವಾಗಬೇಕು. ಒಂದು gravity unit ಅನ್ನು ನೀವೇನಾದರೂ ತಂದರೆ, ನಮ್ಮ ಕಡೆಗಳಲ್ಲಿ ಮಾಡಿದ್ದಾರೆ 8–10 ಪಂಚಾಯಿತಿಗಳು ಒಂದು ರೂಪಾಯಿಗಳ current bill ಕಟ್ಟುವುದಿಲ್ಲ. ಅದನ್ನು extend ಮಾಡುವುದಕ್ಕೆ ಒಂದಿಷ್ಟು ಅರಣ್ಯದಲ್ಲಿ ಬರುತ್ತದೆ. ಕುಡಿಯುವ ನೀರು ಅರಣ್ಯದೊಳಗೆ ಬಂದರೂ ಅದಕ್ಕೆ ಅಡ್ಡಿಮಾಡಬಾರದೆಂದು ಗ್ರಾಮೀಣಾಭಿವೃದ್ಧಿ ಗೈಡ್‌ಲೈನ್ಸ್‌ನಲ್ಲಿದೆ. ವ್ಯವಸ್ಥೆಗಳು ಹೇಗಿದೆಯೆಂದು ಗೊತ್ತಿದೆ. ಪೈಪ್‌ಗಳನ್ನು ಮುರಿದು ಹಾಕುವುದು ಅಲ್ಲಿ ಏನಾದರೂ ಮಾಡಿದರೆ ಕೇಸ್ ಹಾಕುವ ಕೆಲಸ ಇವತ್ತು ನಡೆಯುತ್ತಿದೆ.

ಅಧ್ಯಕ್ಷರು:– Forest ನವರು ಇವತ್ತು ಮನುಷ್ಯರಾಗಿಲ್ಲ. ಮರವಾಗಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ:– ಮರವಾಗಿದ್ದರೆ ಪರವಾಗಿರಲಿಲ್ಲ. ಆದರೆ ಆನೆಗಳಾಗಿದ್ದಾರೆ. ಪೈಪ್‌ಗಳನ್ನೆಲ್ಲಾ ಒಡೆದು ಹಾಕುತ್ತಾರೆ. ಆನೆಗಳು ಪೈಪ್ ಮೆಟ್ಟಿ ಮುರಿಯುವುದು ಬಹಳ ಇದೆ. ಇವರದ್ದು ಆನೆಗಳ ರೀತಿ ವರ್ತನೆಯಾಗಿದೆ. ಈ ವಿಷಯವನ್ನು ನಂತರ ಮಾತನಾಡುತ್ತೇನೆ. ಈ ಗ್ರಾಮ ಪಂಚಾಯಿತಿಗಳಲ್ಲಿ ಇ–ಸ್ವತ್ತು ಎಂದಿದೆ ಫಾರಂ 9, 11, ಲೈಸೆನ್ಸ್ ಇದನ್ನೆಲ್ಲಾ ಕೊಡುವುದು ಕಂಪ್ಯೂಟರ್ ವ್ಯವಸ್ಥೆಯಲ್ಲಿ ಆದರೆ ಅದ್ಯಾವುದು ಅಳವಡಿಕೆಯಾಗಿಲ್ಲ. ಪಂಚಾಯಿತಿಯವರಿಗೆ ಇವತ್ತು ಒಂದು ಮನೆಯನ್ನು ಕಟ್ಟಬೇಕೆಂದರೆ ಲೈಸೆನ್ಸ್ ಕೊಡುವುದಕ್ಕಾಗುತ್ತಿಲ್ಲ. ಇ–ಸ್ವತ್ತು ಅನುಷ್ಠಾನ

ಮಾಡುವುದಕ್ಕೆ ಮೊದಲು ಒಂದು ಸುತ್ತೋಲೆಯನ್ನು ಹೊರಡಿಸಿದರೆ ನಿಮ್ಮ ಜವಾಬ್ದಾರಿ ಮುಗಿಯಿತೇ? ಈ ಸುತ್ತೋಲೆಯನ್ನು ಹೊರಡಿಸುವುದಕ್ಕೆ ಮುಂಚೆ infrastructure, training Computer Operatorಗೆ ಏನಾದರೂ ಕೊಡುತ್ತೀರಾ? ಏನಿಲ್ಲ ಇಲ್ಲಿ ಕುಳಿತುಕೊಂಡು ಒಂದು ಸುತ್ತೋಲೆಯನ್ನು ಹೊರಡಿಸುವುದು ಅದನ್ನು ಮಾಡದೆ ಹೋದರೆ show-cause notice ಕೊಡುವುದು. EO ಗಳ ಪರಿಸ್ಥಿತಿ ಏನಾಗುತ್ತದೆಂದು ಗೊತ್ತಿಲ್ಲ ಆದರೆ CEO ಗಳನ್ನು ದೇವರೇ ಕಾಪಾಡಬೇಕು. ಈ ರೀತಿಯಾದ ವ್ಯವಸ್ಥೆಯನ್ನು ಸಮಗ್ರವಾಗಿ ಸರಿಪಡಿಸದೆ ಹೋದರೆ ಕಷ್ಟವಾಗುತ್ತದೆ. ರಾಜೀವ್ ಗಾಂಧಿಯವರು ಒಂದು ಮಾತನ್ನು ಹೇಳಿದ್ದರು. ನಾನು ದೆಹಲಿಯಿಂದ ಒಂದು ರೂಪಾಯಿಯನ್ನು ಕಳುಹಿಸಿದರೆ ಅದು ದೆಹಲಿಯಿಂದ ಬೆಂಗಳೂರು, ಬೆಂಗಳೂರಿಂದ ಮಡಿಕೇರಿಗೆ ಬಂದು ನನ್ನ ಊರಿಗೆ ಬರುವಾಗ 20 ಪೈಸೆ ಬರುತ್ತದೆ ಅದನ್ನು ತಪ್ಪಿಸುವುದಕ್ಕೆ ಇದನ್ನು ಮಾಡಿದ್ದಾರೆ ಇದನ್ನು ತಪ್ಪಿಸುವಂತಹ ವ್ಯವಸ್ಥೆ ಆಗಬೇಕಾದರೆ ಸಮಗ್ರ ಬದಲಾವಣೆಯಾಗಬೇಕು. ಜನರ ಕೈಗೆ ಆಡಳಿತ ಕೊಡುವ ವ್ಯವಸ್ಥೆಯಲ್ಲಿ ಸಮಗ್ರ ಬದಲಾವಣೆಯನ್ನು ತರಬೇಕಾದರೆ ಒಂದಿಷ್ಟು ಬದಲಾವಣೆಗಳನ್ನು ತರಬೇಕು. PDO ಮತ್ತು ಕಾರ್ಯದರ್ಶಿ ಇವರಿಬ್ಬರನ್ನು ಇಟ್ಟುಕೊಳ್ಳದೆ ಕಾರ್ಯದರ್ಶಿ ಅಥವಾ PDO ಇಡಿ. ಇಬ್ಬರಿಂದಾಗಿ ಏನೂ ಕೆಲಸವಾಗುತ್ತಿಲ್ಲ. ಎರಡು ಬೇಡ. ಅಗತ್ಯವಿಲ್ಲ. ಕಾರ್ಯದರ್ಶಿ ಯಾರೆಂದು ನಿಮಗೆ ಗೊತ್ತಿದೆ. ಹಿಂದೆ Village Accountant ಗಳಾಗಿ ಕೆಲಸ ಮಾಡಿ ಅವರು ಯಾವ ರೀತಿ ಊರನ್ನು ಮುಳುಗಿಸುತ್ತಾರೆಂದು ಗೊತ್ತಿದೆ. ಅವರನ್ನು ಪಂಚಾಯಿತಿಗೆ ತರುವ ಕೆಲಸ ಬೇಡ. ಈ ವ್ಯವಸ್ಥೆಯನ್ನು ಮಾಡಿಯೆಂದು ಹೇಳುತ್ತಾ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು.

ಅಧ್ಯಕ್ಷರು:– ಎಲ್ಲರಿಗೂ ಐದೈದು ನಿಮಿಷ ಕಾಲಾವಕಾಶ ಅಷ್ಟೆ.

ಶ್ರೀ ಸಿ.ಎಸ್. ಶಿವಳ್ಳಿ (ಕುಂದಗೋಳ):– ಆರ್.ಡಿ.ಪಿ.ಆರ್ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತಾ, ನಮ್ಮ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಸಣ್ಣ ಸಣ್ಣ ಪಂಚಾಯಿತಿಗಳನ್ನು ಮಾಡಿರುವುದರಿಂದ

ಆಡಳಿತಾತ್ಮಕವಾಗಿ ಆ ಗ್ರಾಮೀಣ ಪ್ರದೇಶದ ಜನತೆಗೆ ಬಹಳ ಉತ್ತಮ ಸೌಲಭ್ಯ ಕೊಟ್ಟ ಹಾಗೆ ಆಗುತ್ತದೆಂಬ ಮಾತನ್ನು ಹೇಳುತ್ತಾ, ಈಗಿರುವಂತಹ ಜನಸಂಖ್ಯೆ ಆಧಾರಿತ ಪಂಚಾಯಿತಿಗಳನ್ನು ಕಡಿಮೆ ಜನಸಂಖ್ಯೆ ಮಾಡಿ ಆ ಪಂಚಾಯಿತಿಗಳನ್ನು ನಿರ್ಮಾಣ ಮಾಡಬೇಕೆಂಬ ಅಪೇಕ್ಷೆಯನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸುತ್ತೇನೆ. ಪಂಚಾಯತ್ ರಾಜ್ ಇಲಾಖೆಗೆ ಒಳಪಡುವಂತಹ ರಸ್ತೆಗಳು ಆ ರಸ್ತೆಗಳು ನಮ್ಮ ಹೊಲ, ನಮ್ಮ ರಸ್ತೆಯಿರಬಹುದು ಅಥವಾ ಜಿಲ್ಲಾ ಪಂಚಾಯತ್ ರಸ್ತೆಗಳಿರಬಹುದು ರಸ್ತೆಗಳನ್ನು ಮಾಡಿದ ನಂತರ ಅದಕ್ಕೆ ಸೇತುವೆಗಳು ಇರುವುದಿಲ್ಲ. ಕೆಲವು ಹಳ್ಳಗಳು ಮತ್ತು ಸರೋವರಗಳು ಬರುತ್ತವೆ ಅದಕ್ಕೆ ಸೇತುವೆ ಮಾಡುವುದರಿಂದ ಹಳ್ಳಿಯಿಂದ ಹಳ್ಳಿಗೆ ಹೋಗಬೇಕಾದರೆ ಅನುಕೂಲವಾಗುತ್ತದೆ ರಸ್ತೆ ಸಂಪರ್ಕಕ್ಕೆ ಆದ್ಯತೆ ಕೊಡಬೇಕೆಂಬ ವಿಷಯವನ್ನು ಕೂಡ ಪ್ರಸ್ತಾಪ ಮಾಡುತ್ತೇನೆ. ನಾಲ್ಕು ನಾಲ್ಕು ಪಂಚಾಯಿತಿಗಳಿಗೆ ನಮ್ಮಲ್ಲಿ ಒಬ್ಬೊಬ್ಬ PDO ಗಳಿದ್ದಾರೆ. ಇದರಿಂದ ಅಭಿವೃದ್ಧಿ ಕಾರ್ಯ ಕೂಡ ಕುಂಠಿತವಾಗುತ್ತಿದೆ.

ಅಧ್ಯಕ್ಷರು:– ಈ ವಿಷಯವನ್ನು ಹೇಳಿದ್ದಾರೆ ಹೇಳಿರುವ ವಿಷಯವನ್ನು repeat ಮಾಡದೆ ಹೊಸ ವಿಷಯವಿದ್ದರೆ ಹೇಳಿ.

ಶ್ರೀ ಸಿ.ಎಸ್. ಶಿವಳ್ಳಿ:– ಅದಕ್ಕೆ ಅವಕಾಶವನ್ನು ತಪ್ಪಿಸಿ ಹೆಚ್ಚು PDO ಗಳನ್ನು ಕೊಡಬೇಕು. ನಮ್ಮಲ್ಲಿ ಮಳೆಯಿಲ್ಲ, ಮಳೆಯಿಲ್ಲದ್ದರಿಂದ ನೀರಿನ ಕೊರತೆ ತುಂಬಾ ಆಗುತ್ತಿದೆ. ನಮ್ಮ ಯರಗುಪ್ಪಿ ಭಾಗದಲ್ಲಿ 14 ಹಳ್ಳಿಗಳಿಗೆ ಮಲಪ್ರಭಾ ಕಾಲುವೆಯಿಂದ ನೀರನ್ನು ತರುವ ವ್ಯವಸ್ಥೆ ಸುಮಾರು ಮೂರು ವರ್ಷಗಳಿಂದ ನಡೆಯುತ್ತಿದೆ ಇದು ಹೆಚ್.ಕೆ. ಪಾಟೀಲ್ ರವರಿಗೂ ಕೂಡ ಗೊತ್ತಿದೆ. ಈ ಕಾರ್ಯ ಇವತ್ತಿಗೂ ಕೂಡ ಪೂರ್ಣವಾಗಿಲ್ಲ. ಮಳೆ ಆಧಾರಿತ ಪ್ರದೇಶವನ್ನು ಹೊಂದಿರುವ ನಮಗೆ ಮಳೆಯಾದರೆ ಮಾತ್ರ ನಮಗೆ ನೀರಿನ ಸಂಪರ್ಕ ಸಿಗುತ್ತದೆ ಇಲ್ಲವಾದರೆ ಸಿಗುತ್ತಿಲ್ಲ. ಇವತ್ತು ಕೂಡ ಸುಮಾರು 20 ಹಳ್ಳಿಗಳಿಗೆ ಹುಬ್ಬಳ್ಳಿಯಿಂದ ನೀರಿನ ಟ್ಯಾಂಕರ್ ಬರುತ್ತಿದೆ. ಮಲಪ್ರಭಾ ಕಾಲುವೆಯಿಂದ ನೀರಿನ ಯೋಜನೆ ಇದೆ. ಅದು ಆದಷ್ಟು ಬೇಗ ಆಗಬೇಕು

ಮತ್ತು ಬರುವ ನೀರಿನ ವ್ಯವಸ್ಥೆ ಏನಾಗಿದೆಯೆಂದರೆ ಅಲ್ಲಿ ಎಮ್ಮೆಗಳು ಬಂದು ಮಲಗುವುದರಿಂದ ಆ ನೀರಿನ್ನು ಕುಡಿಯುವುದಕ್ಕಾಗುವುದಿಲ್ಲ. ಮಣ್ಣಿನ ಹೂಳನ್ನು ತೆಗೆದು security ಮಾಡಿ ರಕ್ಷಣೆ ಕೊಟ್ಟು ಅಲ್ಲಿಂದ ನೀರನ್ನು ಕೊಟ್ಟರೆ ಮಾತ್ರ ನಮಗೆ ಅನುಕೂಲವಾಗುತ್ತದೆ. ಇನ್ನೊಂದು ವಿಷಯವೆಂದರೆ, ಹಳ್ಳಗಳಿಗೆ ಮತ್ತು ಸರೋವರಗಳಿಗೆ ಬಾಂದಾರಾ ನಿರ್ಮಾಣ ಮಾಡುವುದರಿಂದ ನೀರಿನ ಸಂಗ್ರಹವಾಗಿ ಮುಂದೆ ನಮಗೆ ಕುಡಿಯುವ ನೀರಿಗೆ ಅನುಕೂಲವಾಗುತ್ತದೆ. ಬಾಂದಾರಾ ನಿರ್ಮಾಣ ಮಾಡದೆ ಹೋದರೆ ಮಳೆ ಆಗದ ಸಂದರ್ಭದಲ್ಲಿ ಹಳ್ಳ ಬತ್ತಿ, ಕೊಳ್ಳ ಬತ್ತಿ ನಮಗೆ ನೀರು ಸಿಗದಿರುವ ಸಂದರ್ಭ ಬರಬಾರದು ಎಂಬುದೇ ನಮ್ಮ ಆಸೆ ಅದಕ್ಕೋಸ್ಕರ ಬಾಂದಾರಾಗಳಿಗೆ ಹೆಚ್ಚಿನ ಒತ್ತನ್ನು ಕೊಡಬೇಕು. ಅಕಸ್ಮಾತ್ ಕುಡಿಯುವ ನೀರಿಗೆ ಹೆಚ್ಚಿನ ಅಭಾವವಾದರೆ ಮುಂದೊಂದು ದಿವಸ ಕುಡಿಯುವ ನೀರಿಗೋಸ್ಕರ ಹಾಹಾಕಾರವಾಗಬಹುದು. ಅದು ಆಗಬಾರದೆಂಬುದು ನಮ್ಮ ಆಸೆ. ಇವತ್ತು ಹಳ್ಳಗಳಿಗೆ ಬಾಂದಾರಾಗಳನ್ನು ಕಟ್ಟುವುದರಿಂದ ರೈತ ಕೂಡ ಸಮೃದ್ಧನಾಗಿರುತ್ತಾನೆ. ಇವತ್ತು ಮಳೆಯಿಲ್ಲ. ಹಳ್ಳಕ್ಕೆ ಬಾಂದಾರಾ ಇಲ್ಲ, ಕುಡಿಯುವ ನೀರಿನ ವ್ಯವಸ್ಥೆಯಿಲ್ಲ. ಇವತ್ತಿನ ದಿವಸ ರೈತ ಬಿತ್ತಿದಂಥ ಬೆಳೆಗಳು ಸಹ ನಮ್ಮ ಪ್ರದೇಶದಲ್ಲಿ ಒಣಗಿ ಹೋಗಿವೆ. ಅನ್ನ ಕೊಡುವಂಥ ರೈತನ ಪರಿಸ್ಥಿತಿ ಏನಾಗಿದೆ ಎಂದರೆ, ಆತ ಹೊಲಕ್ಕೆ ಹೋದರೆ ಕಣ್ಣೀರು ಹಾಕುವ ಪರಿಸ್ಥಿತಿ ಇದೆ. ಎಲ್ಲ ಬೆಳೆಗಳು ಒಣಗಿ ಹೋಗಿವೆ. ರಾಸಾಯನಿಕಗಳನ್ನು ಬಳಸಿ ಮೊದಲೇ ನಾವು ಭೂಮಿಯನ್ನು ವಿಷ ಮಾಡಿದ್ದೇವೆ. ಇವತ್ತಿನ ದಿವಸ ಮಳೆಯಿಲ್ಲದೆ ಬೆಳೆ ಕೂಡ ಬರದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೆ ಸರ್ಕಾರ ಮುಂಜಾಗ್ರತೆಯನ್ನು ತೆಗೆದುಕೊಳ್ಳಬೇಕೆನ್ನುವುದು ನಮ್ಮ ಅಪೇಕ್ಷೆಯಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಮಳೆ ನೀರಿನ ಕೊರತೆಯಿರಬಹುದು, ಅನ್ನದ ಕೊರತೆಯಿರಬಹುದು. "ಹೆತ್ತ ತಾಯಿಯ ಮೊಲೆ ಹಾಲು ವಿಷವಾದೊಡೆ ಹುಟ್ಟಿದ ಮಗು ಬದುಕುವುದುಂಟೇ? ಹೆತ್ತ ತಾಯಿ ಮುನಿದರೆ, ಉತ್ತಮರು ಹುಸಿ ನುಡಿದರೆ, ಉತ್ತರಿ ಮಳೆಯಾಗದಿದ್ದರೆ, ರೈತ ಒಕ್ಕದಿದ್ದರೆ, ಜಗವೆಲ್ಲಾ ಬಿಕ್ಕಿ ಸಾಯುವುದು

ಸರ್ವಜ್ಞ" ಎಂದು ಸರ್ವಜ್ಞ ತನ್ನ ವಚನದಲ್ಲಿ ಬಹಳ ಮಾರ್ಮಿಕವಾಗಿ ಹೇಳಿದ್ದಾನೆ. ಆ ಕಾಲ ಬರಬಾರದು ಎಂಬುದು ನಮ್ಮ ಆಸೆಯಾಗಿದೆ. ಸರ್ಕಾರ ಈ ಎಲ್ಲ ವಿಷಯಗಳನ್ನು ಮುಂದಿಟ್ಟುಕೊಂಡು ನಮಗೆ ಹೆಚ್ಚಿನ ಸೌಲಭ್ಯವನ್ನು ಕೊಡಬೇಕು. ನಮ್ಮಲ್ಲಿ ರೆಟ್ಟಿಗೇರಿ ಕೆರೆ ಇದೆ. ಅದರಲ್ಲಿ ವರದಾ ನದಿಯಿಂದ ನೀರುವ ತರುವಂಥ ಒಂದು ವ್ಯವಸ್ಥೆ ಟೆಂಡರ್‌ನಲ್ಲಿ ಸೇರ್ಪಡೆಯಾಗಿದೆ. ಮಾನ್ಯ ಬಸವರಾಜ ಬೊಮ್ಮಾಯಿಯವರ ಕ್ಷೇತ್ರವಾದ ಸವಣೂರು ತಾಲ್ಲೂಕಿನಿಂದ ನೀರು ತರುವಂಥ ಯೋಜನೆ ಟೆಂಡರ್‌ನಲ್ಲಿ ಬಂದಿದೆ. ಈ ರೆಟ್ಟಿಗೇರಿ ಕೆರೆ ಮೂಲಕ ಸುಮಾರು 20 ಹಳ್ಳಿಗಳಿಗೆ ಕುಡಿಯುವ ನೀರಿನ ಅವಶ್ಯಕತೆಯನ್ನು ಪೂರೈಸಬಹುದಾಗಿದೆ. ಆದ್ದರಿಂದ ಆದಷ್ಟು ಬೇಗನೆ ಈ ಬಗ್ಗೆ ಟೆಂಡರ್ ಅನ್ನು ಕರೆಯಬೇಕೆಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ):– ಮಾನ್ಯ ಅಧ್ಯಕ್ಷರೆ, ಪಂಚಾಯತ್ ರಾಜ್ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತುಂಬಾ ಧನ್ಯವಾದಗಳು. ಈ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಬಗ್ಗೆ ಮಹಾತ್ಮ ಗಾಂಧಿಯವರ ಕನಸು ಏನಿದೆ ಅದು ನಮ್ಮ ರಾಜ್ಯದಲ್ಲಿ ಸಮಗ್ರವಾಗಿ ನಡೆಯುತ್ತಾ ಬಂದಿದೆ. ಆದರೆ ಈ ಗ್ರಾಮೀಣಾಭಿವೃದ್ಧಿ ಬಗ್ಗೆ ಎಲ್ಲೋ ಒಂದು ಕಡೆ ನಮ್ಮಲ್ಲಿ ಕಾಳಜಿ ಕುಂದುತ್ತಾ ಇದೆ. ಈ ಸಂದರ್ಭದಲ್ಲಿ ನಾನು ಮಾನ್ಯ ಯಡಿಯೂರಪ್ಪನವರನ್ನು ನೆನಸಿಕೊಳ್ಳುವುದಕ್ಕೆ ಬಯಸುತ್ತೇನೆ. ಅವರು ಮುಖ್ಯಮಂತ್ರಿಯಾಗಿದ್ದಾಗ ಹಳ್ಳಿ ಹಳ್ಳಿಗೆ ರಸ್ತೆ ಮಾಡತಕ್ಕಂಥ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ನು ಜಾರಿ ಮಾಡಿದರು. ಮೊದಲು 20 ಕಿ.ಮೀ. ನಂತರ 30 ಕಿ.ಮೀ.ಗೆ ಕೊಟ್ಟರು ಕಳೆದ ಬಾರಿ ಈ ಸರ್ಕಾರ skip ಮಾಡಿತು, ಕೊಡಲಿಲ್ಲ. ಈ ಬಾರಿ ಕೇವಲ 20 ಕಿ.ಮೀ.ಗೆ ಕೊಟ್ಟಿದ್ದಾರೆ. ಅದು ಸಾಕಾಗುವುದಿಲ್ಲ. ಸುಮಾರು ಲಕ್ಷಾಂತರ ಕಿ.ಮೀ. ರಸ್ತೆ ಮಾಡುವಂಥ ಸಂದರ್ಭದಲ್ಲಿ ಬಹಳ ಅವಶ್ಯವಿರುತ್ತದೆ. ಆದ್ದರಿಂದ ದಯಮಾಡಿ, ಸನ್ಮಾನ್ಯ ಸಚಿವರು ಹೋದ ವರ್ಷದ ಬ್ಯಾಕ್‌ಲಾಗ್ ಅನ್ನು ಸೇರಿಸಿ ಈ ವರ್ಷದ್ದನ್ನೂ ಸೇರಿಸಿ ಕೊನೆಪಕ್ಷ 40 ಕಿ.ಮೀ. ಅನ್ನು ನಮ್ಮ ಊರು, ನಮ್ಮ ರಸ್ತೆಗೆ ಕೊಡಬೇಕೆಂದು ತಮ್ಮ ಮೂಲಕ ಸಚಿವರನ್ನು ಒತ್ತಾಯ

ಮಾಡುತ್ತೇನೆ. ಸನ್ಮಾನ್ಯ ಕುಮಾರಸ್ವಾಮಿಯವರು ಜಾರಿ ಮಾಡಿದಂಥ ಸುವರ್ಣಗ್ರಾಮ ಕಾರ್ಯಕ್ರಮ ಬಹಳ ಉತ್ತಮವಾದ ಕಾರ್ಯಕ್ರಮವಾಗಿದೆ. ಹಳ್ಳಿಯನ್ನು ಸ್ವಚ್ಛತೆಯಾಗಿ ಇಡಬೇಕು, ನೈರ್ಮಲ್ಯವನ್ನು ಕಾಪಾಡಿಕೊಳ್ಳಬೇಕೆಂಬ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಜಾರಿ ಮಾಡಿದರು. To prevent the epidemic diseases like Diphtheria, Cholera, Malaria, ಈ ರೋಗಗಳನ್ನು ತಡೆಗಟ್ಟುವುದಕ್ಕೆ ಊರನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕೆಂದು ಈ ಕಾರ್ಯಕ್ರಮವನ್ನು ಜಾರಿ ಮಾಡಿದ್ದಾರೆ. ಆದರೆ 29,600 ಗ್ರಾಮಗಳಿಗೆ ಕೇವಲ 5 ಗ್ರಾಮಗಳನ್ನು ಕೊಟ್ಟರೆ ಸಾಕಾಗುವುದಿಲ್ಲ. ಕಳೆದ ಬಾರಿ 5 ಗ್ರಾಮಗಳನ್ನು ಕೊಟ್ಟಿಲ್ಲ. ಗ್ರಾಮೀಣಾಭಿವೃದ್ಧಿ ಆಗಬೇಕೆಂದು ನಮ್ಮೆಲ್ಲರ ಉದ್ದೇಶವಾಗಿರುವುದರಿಂದ ಕೊನೆಪಕ್ಷ ಒಂದೊಂದು ಬಾರಿಗೆ 15 ರಿಂದ 20 ಗ್ರಾಮಗಳನ್ನು ತೆಗೆದುಕೊಂಡರೆ ಬಹಳ ಒಳ್ಳೆಯದು ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಉದ್ಯೋಗಖಾತ್ರಿ ಯೋಜನೆಯಲ್ಲಿ 100 ದಿವಸ ಕೆಲಸ ಕೊಡಿ ಎಂದು ಏನು ಹೇಳಿದ್ದಾರೆ. ಈಗ ಅದರ ಅವಶ್ಯಕತೆ ಇಲ್ಲ. ಕಾಂಗ್ರೆಸ್ಸಿನ ನಮ್ಮ ಅಧಿನಾಯಕಿ ಶ್ರೀಮತಿ ಸೋನಿಯಾ ಗಾಂಧಿಯವರ ಆಸೆಯಂತೆ Food Security Bill ಇವತ್ತು ಜಾರಿಯಾಗಿದೆ. ಜೊತೆಗೆ ನಾವು ಒಂದು ರೂಪಾಯಿ ಅಕ್ಕಿಯನ್ನು ಕೊಡುತ್ತೇವೆ. 100 ದಿವಸಗಳನ್ನು insist ಮಾಡುವಂಥದ್ದು ಅವಶ್ಯಕವಿಲ್ಲ. ದಯಮಾಡಿ, ಏನು 100 ಕ್ಕೆ 100% ಅನ್ನು ಗ್ರಾಮ ಪಂಚಾಯಿತಿಗೆ ಕೊಡುತ್ತೇವೆ ಅದನ್ನು divert ಮಾಡಬೇಕು. ಇದಕ್ಕಾಗಿ ಒಂದು amendment ಅನ್ನು ತಂದು divert ಮಾಡಿದರೆ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಗ್ರಾಮ ಪಂಚಾಯಿತಿಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ನನ್ನ ಅನಿಸಿಕೆಯಾಗಿದೆ. 100 ದಿವಸಗಳ ಕೆಲಸ ಕೊಡಬೇಕೆಂದು ಏನು ಇದೆ ಅದರಲ್ಲಿ ಬದಲಾವಣೆಯನ್ನು ತರಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಪಂಚಾಯಿತಿಗೆ ಹಣವನ್ನು ನೇರವಾಗಿ ಕೊಡುವಂಥದ್ದರಲ್ಲಿ ಸ್ವಲ್ಪ ಬದಲಾವಣೆಯನ್ನು ತರಬೇಕು. ಇವತ್ತು ಪ್ರದೇಶಾಭಿವೃದ್ಧಿ ಮಂಡಳಿಯನ್ನು ಮಾಡಿದ್ದಾರೆ. ನಾವು ಒಂದು office ಇಟ್ಟರೆ ಬಯಲು ಸೀಮೆಗೆ ಎಂದು

30 ಲಕ್ಷ ರೂ.ಗಳನ್ನು ಕೊಡುತ್ತಾರೆ. ಆದರೆ, ಅದರಿಂದ ಏನೂ ಉಪಯೋಗವಾಗುವುದಿಲ್ಲ. ಅಲ್ಲಿಗೆ ಒಬ್ಬ ಅಧಿಕಾರಿ, ಕಾರು, ಬಂಗಲೆ, ಸಿಬ್ಬಂದಿಗಳನ್ನೆಲ್ಲಾ ಇಟ್ಟುಕೊಂಡು ಕೇವಲ 30 ಲಕ್ಷ ರೂ.ಗಳನ್ನು ಪ್ರತಿ ಕ್ಷೇತ್ರಕ್ಕೆ ಕೊಡುವುದರಿಂದ ಆ ಕಚೇರಿಯ ಅವಶ್ಯಕತೆಯಿಲ್ಲ. ನೇರವಾಗಿ ಸರ್ಕಾರವೇ 50 ಲಕ್ಷ ರೂ.ಗಳನ್ನು ಕೊಡಬಹುದು. ಹಾಗಾಗಿ ಈ ರೀತಿ unnecessary ಯಾಗಿ waste ಮಾಡುವುದನ್ನು ನಿಲ್ಲಿಸಬೇಕು. ಅದರ ಬದಲು ಅಭಿವೃದ್ಧಿ ಮಾಡಬೇಕೆಂಬ ಕಾಳಜಿ ಇದ್ದರೆ ದಯಮಾಡಿ, ಅವರಿಗೆ ಹೆಚ್ಚು ಹಣವನ್ನು ಕೊಡಬೇಕು. GP ಗೆ 30%, TPಗೆ 25%, ನಾವು MLADFಗೆ 3 ಕೋಟಿ ರೂ.ಗಳನ್ನು ಕೇಳುತ್ತಿದ್ದೇವೆ. ಅದಕ್ಕೆ 10% raise ಮಾಡಬಹುದು. ಪ್ರದೇಶಾಭಿವೃದ್ಧಿ ಮಂಡಳಿಗೂ ಸಹ 20% ಹಣವನ್ನು divert ಮಾಡಿಕೊಟ್ಟರೆ ಅಭಿವೃದ್ಧಿ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ನನ್ನ ಅನಿಸಿಕೆ. ಕುಡಿಯುವ ನೀರಿನ ಬಗ್ಗೆ ಹೇಳವುದಾದರೆ, ಇದರ ಬಗ್ಗೆ ಬಹಳಷ್ಟು ಜನ ಮಾತನಾಡಿದ್ದೇವೆ. ಕೇವಲ ಬೋರ್‌ವೆಲ್ ಹಾಕುವುದರಿಂದ ಏನೂ ಸಾಧನೆ ಮಾಡಿದಂತೆ ಆಗುವುದಿಲ್ಲ. Surface Water ಗೆ ಹೆಚ್ಚಿನ ಒತ್ತನ್ನು ಕೊಡಬೇಕು. ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಬಗ್ಗೆ ನಮ್ಮ ಕ್ಷೇತ್ರದಲ್ಲಿ ಇನ್ನೂ 3 ಪ್ರಪೋಸಲ್ ಸರ್ಕಾರದಲ್ಲಿ ಪೆಂಡಿಂಗ್ ಇದೆ. ದಯಮಾಡಿ, ಮಾನ್ಯ ಸಚಿವರು ಇವುಗಳಿಗೆಲ್ಲಾ ಒಂದು ಸಭೆ ಕರೆದು, ಆದಷ್ಟು ಬೇಗನೆ ಅದನ್ನು ಅಪ್ರೂವಲ್ ಮಾಡಿಕೊಟ್ಟರೆ ಎಲ್ಲಾ ಗ್ರಾಮಗಳಿಗೆ ಸ್ವಲ್ಪ ನೀರನ್ನು ಕೊಡಬಹುದು. ನಮ್ಮ ಕಡೆಯಲ್ಲಿ ಹೇಮಾವತಿ ನೀರು ಹರಿದಿರುವುದರಿಂದ ಕೆರೆಗಳಲ್ಲಿ ನೀರಿದೆ. ಸಂಬಂಧಪಟ್ಟ ಕಾರ್ಯದರ್ಶಿಯವರೂ ಸಹ inspection ಮಾಡಿದ್ದಾರೆ. ಇಂಥ ಕಾರ್ಯಕ್ರಮಗಳನ್ನು ಜಾರಿ ಮಾಡುವುದರಿಂದ ಅನುಕೂಲವಾಗುತ್ತದೆ. ನಮ್ಮ ಗ್ರಾಮ ಪಂಚಾಯಿತಿಯಲ್ಲಿ ಕೆಲಸ ಮಾಡತಕ್ಕಂಥ ಬಿಲ್ ಕಲೆಕ್ಟರ್ ಇರಬಹುದು, ಸಣ್ಣಪುಟ್ಟ ಕೆಲಸ ಮಾಡತಕ್ಕಂಥವರು ಇರಬಹುದು, ಇವರಿಗೆ ಕೇವಲ 2 ಸಾವಿರದಿಂದ 3 ಸಾವಿರ ರೂ.ಗಳ ಸಂಬಳವನ್ನು ಕೊಡುತ್ತಾರೆ. ಅವರನ್ನು ಖಾಯಂಗೊಳಿಸುವುದಕ್ಕೂ ಆಗುವುದಿಲ್ಲ. ಅದಕ್ಕೆ ಕೊನೆಪಕ್ಷ ಸರ್ಕಾರ Employees Provident Fund

ಎಂದು ಸರ್ಕಾರ ಕಟ್ಟಿದ್ದರೆ ಬಹುಶಃ ಅವನು ದುರ್ಮರಣಕ್ಕೆ ಈಡಾದಾಗ ಎರಡೂವರೆಯಿಂದ ಮೂರು ಸಾವಿರಗಳವರೆಗೆ ಆತನ ಕುಟುಂಬಕ್ಕೆ ಪಿಂಚಣಿ ಬರುತ್ತದೆ. ದಯಮಾಡಿ, ಸರ್ಕಾರ ಅದರ ಬಗ್ಗೆ ಚಿಂತನೆ ಮಾಡಬೇಕು. ಕನಿಷ್ಠ ವೇತನವನ್ನು ಕೊಡಬೇಕೆಂದು ನಾವು ಎಲ್ಲಾ ಕಡೆ ಹೇಳುತ್ತೇವೆ. ಸರ್ಕಾರ Private Sector, Public Sector ಗಳಿಗೆ minimum wages ಅನ್ನು ಕೊಡಬೇಕೆಂದು ನಾವು insist ಮಾಡುತ್ತೇವೆ. ಕೇವಲ 2 ಸಾವಿರ, 3 ಸಾವಿರ ಕೊಡಬಾರದು. ದಯಮಾಡಿ, Minimum Wages Act ಜಾರಿ ಆಗುತ್ತಿರುವ ಸಂದರ್ಭದಲ್ಲಿ 4,500 ದಿಂದ 4,700 ರೂ.ಗಳನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. Private Sector ಅವರಿಗೆ ಕೊಟ್ಟಿದ್ದೀರಿ. ಆದರೆ Computer Operator ಗಳಿಗೆ ಕೇವಲ 3,500 ರೂ.ಗಳನ್ನು ಕೊಡುತ್ತಾರೆ. ಅದರಲ್ಲಿ Commission ಎಂದು 1,500 ರೂ.ಗಳನ್ನು ಹಿಡಿದುಕೊಳ್ಳುತ್ತಾರೆ. ಆಗ ಅವರು ಕೇವಲ 2,000 ರೂ.ಗಳಿಗೆ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ನನ್ನ ಅನಿಸಿಕೆ ಏನೆಂದರೆ, ಸರ್ಕಾರ on contract, ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿ ಕೊನೆಪಕ್ಷ 10,000 ರಿಂದ 15,000 ರೂ.ಗಳನ್ನು ಸಂಬಳ ಕೊಟ್ಟು 10 ವರ್ಷಗಳ ಕಾಲ ದುಡಿಸಿಕೊಂಡ ಮೇಲೆ ಅವರನ್ನು regularizer ಮಾಡುವುದು ಬಹಳ ಉತ್ತಮವಾದ ಚಿಂತನೆಯಾಗಿದೆ. ಎಲ್ಲಾ ಪಂಚಾಯಿತಿಯಲ್ಲಿ ಇಂಜಿನಿಯರ್ಸ್ ಇಲ್ಲ. ಹಿಂದೆ Centrally sponsored scheme ಗಳಿದ್ದವು. 3–3 ಜನ ಇಂಜಿನಿಯರ್ಸ್ ಅನ್ನು ತಾಲ್ಲೂಕು ಪಂಚಾಯಿತಿ office ನಲ್ಲಿ ಇಟ್ಟುಕೊಂಡಿದ್ದರು. ಅದನ್ನು ಈಗ AEE Office ಗೆ ZP ಗೆ ಕೊಟ್ಟಿದ್ದಾರೆ. ಅದು ಆಗಬಾರದು. ಆ ಮೂರು ಜನ ತಾಲ್ಲೂಕು ಪಂಚಾಯಿತಿಯಲ್ಲಿ ಇರಬೇಕು. NREG ಇರಬಹುದು ಯಾವುದೇ estimate ಅನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. Those three are centrally sponsored schemes. ಆದ್ದರಿಂದ ಅದರ ಬಗ್ಗೆ ಗಮನ ಹರಿಸಬೇಕು. ಎಲ್ಲಾ ಜಿಲ್ಲಾ ಪಂಚಾಯಿತಿಯಲ್ಲಿ post ಅನ್ನು ಭರ್ತಿ ಮಾಡಬೇಕು. ನಾವು ಬಹಳಷ್ಟು ಚರ್ಚೆ ಮಾಡಿದ್ದೇವೆ. ಕೆಲಸ ಮಾಡುವವರೇ ಇಲ್ಲ. ಸರ್ಕಾರ ಸುಮಾರು 146 scheme ಗಳನ್ನು ಕೊಟ್ಟಿದೆ. ಅದನ್ನು implement ಮಾಡುವವರು

ಯಾರು? ಅಲ್ಲಿ ಸಿಬ್ಬಂದಿ ಬೇಕಾಗುತ್ತದೆ. Engineers ಇಲ್ಲ. PDO ಗಳು ಇಲ್ಲ. EO ಗಳಿಲ್ಲ. ಹೀಗಾದರೆ scheme ಗಳು ಕೇವಲ ಪೇಪರ್‌ಗಳಲ್ಲಿ ಮಾತ್ರ ಉಳಿಯುತ್ತವೆ ಹೊರತು ಅವುಗಳು ಕಾರ್ಯಗತವಾಗುವುದಿಲ್ಲ. ಎಲ್ಲಾ post ಗಳನ್ನು ಭರ್ತಿ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ, ಹೊಸ ಹೊಸ ಬೋರೆವೆಲ್‌ಗಳನ್ನು ಕೊರೆಯುತ್ತಿರುತ್ತೇವೆ. ಹಳೆ ಮೋಟರ್ ಪಂಪ್‌ಗಳು ಎಲ್ಲಿ ಹೋಗಿವೆ ಎಂದು ಗೊತ್ತಾಗುವುದಿಲ್ಲ. ಬಿಲ್ ಕಲೆಕ್ಟರ್‌ಗಳೋ, ಸೆಕ್ರೆಟರಿಯೋ ಮಾರಿಕೊಳ್ಳುತ್ತಾರೆ. ಪ್ರತಿ ವರ್ಷ, ಪ್ರತಿ ತಿಂಗಳು ಕೋಟ್ಯಂತರ ರೂಪಾಯಿಗಳನ್ನು Task-Force ನಲ್ಲಿ ಅಪ್ರೂವ್ ಮಾಡಿಸುತ್ತೇವೆ. ಕೊನೆಗೆ ಆ ಹಣ ಇರುವುದಿಲ್ಲ. ಎಲ್ಲಿ misappropriation ಆಗಿದೆ ಅಲ್ಲಿ ಸಂಬಂಧಪಟ್ಟವರ ಮೇಲೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಯಾರು ಜವಾಬ್ದಾರರು ಆಗಿರುತ್ತಾರೆ ಅವರು ತೀರ್ಮಾನ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಜೊತೆಗೆ Land Army ಯಲ್ಲಿ ಕೆಲವು ಕಡೆ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಇಲ್ಲವೆಂದು ನಾನು ಹೇಳುವುದಿಲ್ಲ. ಇದು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತೀರ್ಮಾನವಾಗುತ್ತದೆ. ಅಧಿಕಾರಿಗಳಿಗೆ ಕೆಲಸ ಮಾಡುವ ಇಚ್ಛಾಶಕ್ತಿಯಿದ್ದರೆ ಖಂಡಿತವಾಗಿ ಒಳ್ಳೆಯ ಕೆಲಸವನ್ನು ಮಾಡುತ್ತಾರೆ. CEOಗಳನ್ನು, ಲೋಕಾಯುಕ್ತ trap ಆದವರನ್ನು, ಲೋಕಾಯುಕ್ತರಿಂದ ರೈಡ್ ಆದವರನ್ನು ದಯಮಾಡಿ ಹಾಕಬೇಡಿ. ಸುಮಾರು 434 ಜನ ಲೋಕಾಯುಕ್ತರಿಂದ trap ಆಗಿ, ರೈಡ್ ಆಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವಾಗ ಅಂಥವರನ್ನು CEO ಮಾಡಿದರೆ ನಾವು ಹೇಗೆ ಒಳ್ಳೆಯ ಆಡಳಿತವನ್ನು ಬಯಸುವುದಕ್ಕೆ ಆಗುತ್ತದೆ? ಇವು ಕೇವಲ ಭಾಷಣ, ಪೇಪರ್‌ಗಳಲ್ಲಿ ಉಳಿಯುತ್ತದೆ ಹೊರತು ಯಾವುದೇ ಕಾರ್ಯಗತವಾಗುವುದಿಲ್ಲ. ನನ್ನ earnest request ಇದೆ, ದಯಮಾಡಿ, ಮಾನ್ಯ ಸಭಾಧ್ಯಕ್ಷರೆ, ಲೋಕಾಯುಕ್ತ trap ಆಗಿರುವಂಥ ಭ್ರಷ್ಟ ಅಧಿಕಾರಿಗಳನ್ನು ದಯಮಾಡಿ executive postಗೆ ಹಾಕಬೇಡಿ. ವಿಧಾನಸೌಧದಲ್ಲಿ ಬಹಳಷ್ಟು ಹುದ್ದೆಗಳು ಖಾಲಿಯಿವೆ. Additional Secretary, Deputy Secretary ಹಂತದ ಹುದ್ದೆಗಳು

ಬಹಳಷ್ಟಿವೆ, ಇಂಥ ಹುದ್ದೆಗಳಿಗೆ post ಮಾಡಿ. ಇವರುಗಳು Retirement stageನಲ್ಲಿರುತ್ತಾರೆ or you can send them under 285, ಇಂಥವರನ್ನೆಲ್ಲಾ ಏಕೆ ಇಟ್ಟುಕೊಳ್ಳಬೇಕು? ಈ ರೀತಿಯಿರುವಂಥ ಅಧಿಕಾರಿಗಳನ್ನು ನೀವು ಮತ್ತೆ ಜಿಲ್ಲಾ ಪಂಚಾಯಿತಿಯ ಚೀಫ್ ಸೆಕ್ರೆಟರಿ ಹುದ್ದೆಗೆ ನಿಯೋಜಿಸಿದರೆ ಮತ್ತೆ ತಮ್ಮ ಕಮಿಷನ್ ವ್ಯಾಪಾರವನ್ನು ಬಿಡುವುದೇ ಇಲ್ಲ. ಹಾಗಾಗಿ ದಯಮಾಡಿ ಸ್ವಚ್ಛತೆಯಿಂದ ಕೂಡಿದ ಒಳ್ಳೆಯ ಆಡಳಿತ ಕೊಡಬೇಕಾದರೆ streamline ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಂಥ ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು:- ಕಾರವಾರದವರಿಗೆ ಮಾತನಾಡಲು ಅವಕಾಶ ಕೊಡೋಣ. 5 ನಿಮಿಷ ಸಮಯ ತೆಗೆದುಕೊಳ್ಳಿ. ಎಲ್ಲರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್ (ಯಲ್ಲಾಪುರ):- ಸನ್ಮಾನ್ಯ ಸಭಾಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡಲು ಅವಕಾಶ ಕೊಟ್ಟಂಥ ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತಾ ನಾನು ಬಹುತೇಕ ಪ್ರಸ್ತಾಪ ಮಾಡುವಂಥ ವಿಷಯದಲ್ಲಿ ಅಧ್ಯಕ್ಷರೂ ಸಹ ನಮ್ಮ ಬೆನ್ನೆಲುಬಿಗೆ ನಿಲ್ಲುತ್ತಾರೆಂದು ಭಾವಿಸಿಕೊಂಡಿದ್ದೇನೆ. ಕಾರಣ, ಮಲೆನಾಡನ್ನು ಈ ರಾಜ್ಯದ ಬೇರೆ ಪ್ರದೇಶಕ್ಕೆ ಹೋಲಿಸುವುದು ಸರಿಯಲ್ಲ. ಸನ್ಮಾನ್ಯ ಹೆಚ್.ಕೆ. ಪಾಟೀಲ್‌ರವರಿಗೆ ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೂ ಸಹ ಮನವಿ ಮಾಡಿದ್ದೇನೆ. 20 ಕಿ.ಮೀ. ರಸ್ತೆಯನ್ನು PMGSYನಲ್ಲಿ ಎಲ್ಲರಿಗೂ ಕೊಡುತ್ತಾರೆ. ಆದರೆ ನನ್ನ ಕ್ಷೇತ್ರ 3 ತಾಲ್ಲೂಕನ್ನು ಹೊಂದಿದೆ. 3 ತಾಲ್ಲೂಕಿಗೆ 20 ಕಿ.ಮೀ. ಕೊಡುತ್ತಾರೆ. ಆದರೆ ಕೆಲವು ಕ್ಷೇತ್ರದಲ್ಲಿ ಒಂದು ತಾಲ್ಲೂಕಿಗೆ ಇಬ್ಬರು ಎಂ.ಎಲ್.ಎ.ಗಳಿರುತ್ತಾರೆ. ಹಾಗಾಗಿ ಮಲೆನಾಡನ್ನು ಅಭಿವೃದ್ಧಿ ದೃಷ್ಟಿಕೋನದಿಂದ ನೋಡುವಾಗ ಮಲೆನಾಡಿಗೆ ಅಲ್ಲಿಯ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಅಭಿವೃದ್ಧಿಯನ್ನು ಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಇದು ಕೇವಲ PMGSY ಯೋಜನೆಗೆ ಮಾತ್ರವಲ್ಲ, ಇವತ್ತೇನು 'ಜೈಕಾ' ಎನ್ನುವ ಜಪಾನ್‌ನ ಸ್ಕೀಂನ್ನು adopt

ಮಾಡಿದ್ದೀರಿ, ಅದರಲ್ಲೂ ಸಹ ಸನ್ಮಾನ್ಯ RDPR ಮಂತ್ರಿಗಳಿಗೆ ಪ್ರಾರ್ಥನೆ ಮಾಡಿದ್ದೇವೆ. ಪ್ರತಿ ವಿಚಾರದಲ್ಲಿ ಮಲೆನಾಡನ್ನು ನೀವು ತಾಲ್ಲೂಕು ಶಾಹಿ ಯೋಜನೆ ಮಾಡಿ ಅಭಿವೃದ್ಧಿಯನ್ನು ಕೊಡಬೇಕು. ತಾಲ್ಲೂಕು ಶಾಹಿ ಯೋಚನೆ ಮಾಡದೆ ನೀವು ಕ್ಷೇತ್ರ ಶಾಹಿ ಯೋಚನೆ ಮಾಡಿದರೆ ನಮಗೆ ಅನ್ಯಾಯವಾಗುತ್ತದೆ. ನಾವು ಮತ್ತು ಶಿವಮೊಗ್ಗ ಜಿಲ್ಲೆಯವರಿಗೆ ವಿಶೇಷವಾಗಿ ಕೊಡಗು ಜಿಲ್ಲೆಯವರಿಗೆ ಪಕ್ಷಾತೀತವಾಗಿ ನಾವೆಲ್ಲರೂ ಇದನ್ನು ಬೆಂಬಲಿಸಬೇಕಾಗುತ್ತದೆ. ಕಾರಣ, ಮಲೆನಾಡನ್ನು ವಿಸ್ತೀರ್ಣದ ಆಧಾರದ ಮೇಲೆ ಯೋಚನೆ ಮಾಡಬೇಕು. ಮಲೆನಾಡನ್ನು ಜನಸಂಖ್ಯೆ ಆಧಾರದ ಮೇಲೆ ಯೋಚನೆ ಮಾಡಬಾರದು. ಆ ನಿಟ್ಟಿನಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಈ ಕ್ರಮವನ್ನು ಮಲೆನಾಡಿನ ಅಭಿವೃದ್ಧಿಗೆ ಕೊಡುವಾಗ ಈ ಕ್ರಮವನ್ನು ಯೋಚನೆ ಮಾಡಿ ಅಭಿವೃದ್ಧಿ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಸನ್ಮಾನ್ಯ ಅಧ್ಯಕ್ಷರೆ 11ಬಿ ಬಗ್ಗೆ ಸಾಕಷ್ಟು ದೊಡ್ಡ ಚರ್ಚೆಯಾಯಿತು. 11ಬಿ ಎನ್ನುವುದನ್ನು ಎಷ್ಟೇ ಪ್ರಯತ್ನ ಮಾಡಿದರೂ ಸಹ ನಮ್ಮ ಆರ್.ಡಿ.ಪಿ.ಆರ್. ಇಲಾಖೆಯ ಅಧಿಕಾರಿಗಳ ಕೈಯಲ್ಲಿ ತರುವುದಕ್ಕೆ ನಾವು ವಿಫಲರಾಗಿದ್ದೇವೆ. ಸನ್ಮಾನ್ಯ ಮಂತ್ರಿಗಳು ತಮ್ಮ ಮನೆಗೆ ಅಧಿಕಾರಿಗಳನ್ನು ಕರೆಯಿಸಿ ಸಾಕಷ್ಟು ವಿಚಾರಗಳನ್ನು ಚರ್ಚೆ ಮಾಡಿದ್ದಾರೆ. ಮಲೆನಾಡಿನಲ್ಲಿ 11ಬಿ ಎನ್ನುವುದು ಎಲ್ಲಿ ಅರಣ್ಯ ಇಲಾಖೆಯ ಜಾಗದಲ್ಲಿ ನಾವು ಮನೆಗಳನ್ನು ಕಟ್ಟಿಕೊಂಡಿದ್ದೇವೆ, ಎಷ್ಟೋ ಕಾಲದಿಂದ ಅರಣ್ಯ ಇಲಾಖೆಯ ಜಾಗದಲ್ಲಿ ಉತ್ತರ ಕನ್ನಡ, ಕೊಡಗು, ಶಿವಮೊಗ್ಗ ಕಡೆಗಳಲ್ಲೆಲ್ಲಾ ಮನೆಗಳನ್ನು ಕಟ್ಟಿಕೊಂಡಿದ್ದೇವೆ. ಅಣ್ಣ ಮತ್ತು ತಮ್ಮ ಇವತ್ತು ಮನೆ ಕಟ್ಟಿದ ಜಾಗದಲ್ಲಿ ಬೇರೆಯಾದರೆ ಮನೆ ಕಟ್ಟಿದಂಥ ಜಾಗದಲ್ಲಿ ಮನೆ ನಂಬರ್ ಕೊಡುವುದಕ್ಕೆ ಆಗುವುದಿಲ್ಲ. ಮನೆ ನಂಬರ್ ಇಲ್ಲ ಎನ್ನುವ ಒಂದೇ ಕಾರಣಕ್ಕಾಗಿ ಭಾಗ್ಯಲಕ್ಷ್ಮಿ ಯೋಜನೆಯ ಲಾಭ ಸಿಗುವುದಿಲ್ಲ. ಇಂಥ ಅನೇಕ ತೊಡಕುಗಳಿಂದ ಕಳೆದ 7–8 ತಿಂಗಳುಗಳಿಂದ ಇಡೀ ರಾಜ್ಯದಲ್ಲಿ 11ಬಿ ಸಮಸ್ಯೆಯಿಂದ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆ ಕಾರಣದಿಂದ ಸರ್ಕಾರ ಕೂಡಲೇ

ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಗೆ ನಮ್ಮ ಎಲ್ಲಾ ಪರಿಸ್ಥಿತಿಯನ್ನು ಅರ್ಥ ಮಾಡಿಕೊಟ್ಟಿದ್ದೇವೆ. ನಮ್ಮ ಜಿಲ್ಲೆಯಲ್ಲಿ ಅನೇಕ ಸರ್ಕಾರಿ ಕಛೇರಿಗಳು, ಅದು ಹೈಸ್ಕೂಲ್ ಇರಬಹುದು, ಕಾಲೇಜ್ ಇರಬಹುದು, ಅರಣ್ಯ ಇಲಾಖೆಯ ಬಿಲ್ಡಿಂಗ್ ಇರಬಹುದು ಅಥವಾ ಆಸ್ಪತ್ರೆಗಳಿರಬಹುದು ಇವೆಲ್ಲವೂ ಸಹ ಅರಣ್ಯ ಇಲಾಖೆಯ ಜಮೀನಿನಲ್ಲಿ ಅನೇಕ ವರ್ಷಗಳಿಂದ ಇರುವುದನ್ನು ತಾವು ಗಮನಿಸುತ್ತಿದ್ದೀರಿ. ಆ ಹಿನ್ನೆಲೆಯಲ್ಲಿ 11ಬಿ ಗೆ ಇರುವಂಥ ತೊಂದರೆಯನ್ನು ಅತಿ ಶೀಘ್ರದಲ್ಲಿ ನೀವು ಬಗೆಹರಿಸದೇ ಹೋದರೆ ನಾವು ಮುಖ ತೆಗೆದುಕೊಂಡು ಊರಿಗೆ ಹೋಗುವಂಥದ್ದು ಕಷ್ಟವಾಗುತ್ತದೆ. ಆ ಕಾರಣಕ್ಕಾಗಿ ಕೂಡಲೇ ಈ ಸಮಸ್ಯೆಗೆ ಪರಿಹಾರ ಕಂಡುಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಕೊನೆಯದಾಗಿ, ರಾಜೀವ್ ಗಾಂಧಿ ವಾಟರ್ ಸ್ಕೇಲ್ ಲಿಂಕ್ ಸ್ಕೀಂಅನ್ನು ಏನು ಮಾಡುತ್ತಿದ್ದೇವೆ, ಈ ಸ್ಕೀಂಅನ್ನು ಇನ್ನೂ ಹೆಚ್ಚು ಹೆಚ್ಚಾಗಿ ಉಪಯೋಗ ಮಾಡಬೇಕು. ಒಂದೊಂದು ಬೋರ್‌ವೆಲ್ ಕೊರೆದು 1 ಲಕ್ಷ ರೂಪಾಯಿಗಳ ಎಲೆಕ್ಟ್ರಿಕಲ್ ಬಿಲ್ ತುಂಬಿ ಪ್ರತಿ ದಿವಸವೂ ಹಾಳಾದಾಗ ಈ ಬೋರ್‌ವೆಲ್‌ಅನ್ನು ರಿಪೇರಿ ಮಾಡುವುದಕ್ಕಿಂತ ಹೆಚ್ಚೆಚ್ಚು ರಾಜೀವ್ ಗಾಂಧಿ ಮಲ್ಟಿ ವಿಲೇಜಸ್ ವಾಟರ್ ಸ್ಕೀಂಅನ್ನು ಮಾಡುವುದಕ್ಕೆ ಸರ್ಕಾರ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಇವತ್ತು ಮಲೆನಾಡಿನಲ್ಲಿಯೂ ಸಹ ಮಳೆಗಾಲ ಸಂಪೂರ್ಣ ನಿಂತು ಹೋಗಿರುವುದರಿಂದ ಈಗಾಗಲೇ ಬರುವ 3 ತಿಂಗಳ ನಂತರ ಆಗುವಂಥ ಕಷ್ಟಕ್ಕೆ ಸರ್ಕಾರ ಈಗಿಂದಲೇ ತನ್ನ ಕಾರ್ಯ ಯೋಜನೆಯನ್ನು ರೂಪಿಸಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿ ನನಗೆ ಅವಕಾಶ ಕೊಟ್ಟಂಥ ತಮಗೆ ವಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ.

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ):– ಮಾನ್ಯ ಅಧ್ಯಕ್ಷರೆ, ಬಹಳಷ್ಟು ಜನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ

ಬೇಡಿಕೆಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಆದರೆ, ನಾನು ಒಂದೆರಡು ಸಲಹೆಯನ್ನು ಕೊಡುತ್ತೇನೆ. ಮೊನ್ನೆ ಪಂಚಾಯತಿಗಳನ್ನು ಪುನರ್ ವಿಂಗಡಣೆ ಮಾಡಬೇಕೆನ್ನುವ ಅಭಿಪ್ರಾಯ ಬಂತು, ಇದಕ್ಕಾಗಿ ಸಮಿತಿಗಳನ್ನು ಮಾಡಿದ್ದಾರೆ. ಆದರೆ, ತಾವು ಗ್ರಾಮಗಳನ್ನು ಸರಿಪಡಿಸದೆ, ಗ್ರಾಮಗಳ ಪುನರ್ ವಿಂಗಡೆಯಾಗದೆ re-organize ಆಗದೆ ಪಂಚಾಯಿತಿಯನ್ನು ಹೇಗೆ ಸರಿಪಡಿಸುತ್ತೀರಿ? ನಮ್ಮ ಭಾಗದಲ್ಲಿ ಒಂದು ಪಂಚಾಯಿತಿ ಇದೆ. ಹೆಂಗವಳ್ಳಿ ಪಂಚಾಯಿತಿ ಎಂದು ಅದರ ಒಂದು ಭಾಗ ಬೆಳ್ವೆ ಪಂಚಾಯಿತಿಗೆ ತಾಗಿಕೊಂಡಿದೆ. ಒಂದು ನದಿಯನ್ನು ದಾಟಿ ಬರಬೇಕು. ಮತ್ತೊಂದು ಕೊಡಕನ್ಯಾನ ಎನ್ನುವ ಪಂಚಾಯಿತಿ ಇದೆ. ಇದನ್ನು ತಲುಪಬೇಕಾದರೆ ಸಾಧಾರಣ ಅರ್ಧ ಕಿ.ಮೀ. ನದಿಯನ್ನು ದಾಟಿ ಹೋಗಬೇಕು. ನಾನು ಹೇಳುವುದೇನೆಂದರೆ ಕಂದಾಯ ಇಲಾಖೆ ಮತ್ತು ಪಂಚಾಯತ್ ರಾಜ್ ಇಲಾಖೆ ಒಟ್ಟಾಗಿ ಸೇರಿಕೊಂಡು ಗ್ರಾಮಗಳನ್ನು ಸರಿಪಡಿಸಿದ ಮೇಲೆ ಪಂಚಾಯಿತಿಗಳನ್ನು ಸರಿಪಡಿಸಬೇಕಾಗುತ್ತದೆ. ತಮಗೆ ಗೊತ್ತಿರುವಂತೆ ಮುಖ್ಯಮಂತ್ರಿ ಗ್ರಾಮೀಣ ಸಡಕ್ ಯೋಜನೆ ಒಳ್ಳೆಯ ಕಾರ್ಯಕ್ರಮವಾಗಿದ್ದು, ಇದರ ಬಗ್ಗೆ ಬಹಳಷ್ಟು ಜನ ಹೇಳಿದರು. ನಮ್ಮ ಭಾಗದಲ್ಲಿ ಮಲೆನಾಡು ಪ್ರದೇಶದಲ್ಲಿ ರಸ್ತೆಗಳನ್ನು ಎಷ್ಟೇ ಡಾಂಬರೀಕರಣ ಮಾಡಿದರೂ 3 ವರ್ಷ, 4 ವರ್ಷಗಳವರೆಗೆ ಬಾಳಿಕೆ ಬರುವುದಿಲ್ಲ. ಮುಖ್ಯಮಂತ್ರಿ ಸಡಕ್ ಯೋಜನೆಯಡಿ 1 ಕಿ.ಮೀಗೆ 35 ಲಕ್ಷಗಳನ್ನು ಕೊಡುತ್ತಿದ್ದಾರೆ. ಅದನ್ನೇ 6 ಇಂಚುಗಳ ದಪ್ಪದ (Thickness) ಕಾಂಕ್ರೀಟೀಕರಣ ಮಾಡಿದರೆ 15% ಹೆಚ್ಚು ಬೇಕಾಗಬಹುದು. ನಮ್ಮ ಭಾಗದಲ್ಲಿ ಒಂದು ರಸ್ತೆಯಿತ್ತು, ಡಾಂಬರೀಕರಣಕ್ಕೆ soil condition ಇರಲಿಲ್ಲ, ಜೇಡಿಮಣ್ಣಿನಿಂದ ಕೂಡಿತ್ತು. ಈ ರಸ್ತೆಗೆ savings amountನಲ್ಲಿ ಕ್ರಾಂಕ್ರೀಟೀಕರಣ ಮಾಡಿಸಿದೆನು. ಡಾಂಬರೀಕರಣ ಮಾಡಿದರೆ ಹೆಚ್ಚೆಂದರೂ 4 ವರ್ಷ ಬಾಳಬಹುದು. ಆದರೆ, ಕಾಂಕ್ರೀಟೀಕರಣ ಮಾಡಿದರೆ 35 ವರ್ಷ ಬಾಳಬಹುದು. ಇಂಥ ವಿಷಯಗಳಿಗೆ 30 ವರ್ಷಗಳಲ್ಲಿ 5 ಬಾರಿ ಹಣ ತೊಡಗಿಸುವುದಕ್ಕಿಂತ ಒಂದು ಕಾಲಬದ್ಧ ಯೋಜನೆ ಹಾಕಿಕೊಳ್ಳಿ. ಸರ್ವ ಶಿಕ್ಷಣ ಅಭಿಯಾನ ಎನ್ನುವ ಒಂದು ಕಾಲಬದ್ಧ ಯೋಜನೆಯ ಹಾಗೇ

ಮುಂದೆ ಯಾವುದೇ ಸರ್ಕಾರ ಅಧಿಕಾರಕ್ಕೆ ಬರಬಹುದು, ಬೇರೆ ಸರ್ಕಾರ ಬರಬಹುದು ಅಥವಾ ಮತ್ತೆ ತಮ್ಮ ಸರ್ಕಾರವೇ ಮುಂದುವರೆಯಬಹುದು, ಆದರೆ, ಒಂದು ಕಾಲಬದ್ಧ ಯೋಜನೆಗಳನ್ನು ತಾವು ಹಾಕಿಕೊಂಡರೆ ಸ್ವಲ್ಪ ರಸ್ತೆಗಳಿಗೆ ಈ ಬಾರಿ ಕಾಂಕ್ರೀಟೀಕರಣ, ಮತ್ತೊಂದು ವರ್ಷ ಮತ್ತೊಂದು ರಸ್ತೆಗಳ ಕಾಂಕ್ರೀಟೀಕರಣ, ನಿಮಗೆ 30 ವರ್ಷಗಳಲ್ಲಿ 5 ಬಾರಿ ಹಣ ವೆಚ್ಚ ಮಾಡುವುದಕ್ಕಿಂತ ಒಂದು ಸಲ ಹಣ ಹಾಕಿದರೆ ಪರಿಪೂರ್ಣವಾಗುತ್ತದೆನ್ನುವುದು ನನ್ನ ಭಾವನೆ. ತಮಗೆ ಗೊತ್ತಿರುವಂತೆ ಕುಡಿಯುವ ನೀರಿನ ಯೋಜನೆಗಳಿಗೆ. ಇದು ಜಿಲ್ಲಾ ಪಂಚಾಯಿತಿಯ ಕಾರ್ಯಕ್ರಮದಡಿ ಬರುತ್ತದೆ. ಕಾಂಟ್ರ್ಯಾಕ್ಟ್ ಮಾಡುವವರಿಗೆ ಭಾರಿ ಲಾಭ ಉಂಟಾಗುತ್ತದೆಂದು ನೀರಿನ ಮೂಲವನ್ನು ನೋಡದೆ ಪೈಪ್‌ಲೈನ್‌ಅನ್ನು ಹಾಕಿಬಿಡುತ್ತಾರೆ. ಈ ವಿಚಾರವಾಗಿ ನಾನು ಹೇಳುವುದೇನೆಂದರೆ, ಪ್ರತಿ ಪಂಚಾಯಿತಿಯಲ್ಲಿ ಗ್ರಾಮವಾರು water sources ಅನ್ನು ಪ್ರಥಮವಾಗಿ ನೋಡಬೇಕೆಂದು ನನ್ನ ಭಾವನೆ. ತೈಲಗಳು ಭೂಮಿಯಡಿ ಎಷ್ಟು ಗ್ಯಾಲನ್ ಸಿಗುತ್ತದೆಂದು ಅಂದಾಜು ಹಾಕುತ್ತಾರೆ. ಆದ್ದರಿಂದ ಇದನ್ನು ಸರಿಮಾಡಬೇಕೆಂದು ಮನವಿ ಮಾಡುತ್ತಿದ್ದೇನೆ.

ನನ್ನದೊಂದು ಭಾವನೆಯೇನೆಂದರೆ 'ಕುಡಿಯುವ ನೀರು' ಎನ್ನುವಂಥ ಶಬ್ಧ ಸಮರ್ಪಕವಾಗಿಲ್ಲ. ನೀರು ಕುಡಿಯುವುದಕ್ಕೆ ಮಾತ್ರವಲ್ಲ, ಮನೆ ತೋಟಕ್ಕೆ ಬೇಕು, ಸ್ನಾನ ಮಾಡುವುದಕ್ಕೆ, ಶೌಚಾಲಯಕ್ಕೆ ನೀರು ಬೇಕು. ಆದ್ದರಿಂದ ಕುಡಿಯುವ ನೀರು ಎನ್ನುವ ಶಬ್ಧ ಸರಿಯಲ್ಲವೆಂದು ನನ್ನ ಭಾವನೆ. ಕುಡಿಯುವ ನೀರೆಂದರೆ ಬಾಟಲ್‌ನಲ್ಲಿ ಮಿನರಲ್ ವಾಟರ್ ಕೊಡುತ್ತಾರಲ್ಲ ಅದು ಆಗಬಹುದು. ರಸ್ತೆಗಳನ್ನು ಮಾಡುತ್ತೇವೆಂದು ಜಿಲ್ಲಾ ಪಂಚಾಯಿತಿ ರಸ್ತೆಗಳಿಗೆ 25 ಮೀಟರ್ ರಸ್ತೆ ಮಾಡುತ್ತೇವೆಂದು ಹೇಳಿದ್ದಾರೆ. ಬಿಲ್ಡಿಂಗ್ ಕಟ್ಟುವುದಕ್ಕೆ ಇಲ್ಲ. State Highwayಗೆ Center of the roadನಿಂದ ನಮ್ಮ ಪಟ್ಟಾ ಜಾಗದಿಂದ 6 ಮೀಟರ್‌ನಲ್ಲಿ ಬಿಲ್ಡಿಂಗ್ ಕಟ್ಟಬಹುದು. ಜಿಲ್ಲಾ ಪಂಚಾಯಿತಿ ರಸ್ತೆಗಳಿಗೆ 25 ಮೀಟರ್ ಕಟ್ಟುವುದಕ್ಕೆ ಇಲ್ಲ. ಬಿಲ್ಡಿಂಗ್ ಲೈನ್ ಇರುವುದೇ 25 ಮೀಟರ್, State Highway ಮುಖ್ಯವೇ ಅಥವಾ ಜಿಲ್ಲಾ

ಪಂಚಾಯಿತಿ ರಸ್ತೆ ಮುಖ್ಯವೇ? ತಾವು ಇದನ್ನು ಸರಿ ಮಾಡಬೇಕೆಂದು ನನ್ನ ಭಾವನೆ. PDOಗಳ ಬಗ್ಗೆ ಎಲ್ಲರೂ ಹೇಳಿದ್ದಾರೆ. ಆದಷ್ಟು ಬೇಗ ಇವರ ನೇಮಕವಾಗಬೇಕು ಮತ್ತು ಒಳ್ಳೆಯ ಕೆಲಸಗಳಾಗಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ರಾಜೀವ್ ರವರೆ, 5 ನಿಮಿಷ ಮಾತನಾಡಿ.

(ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಪರಿಷ್ಕರಿಸಿರುತ್ತಾರೆ)

ಶ್ರೀ ಪಿ. ರಾಜೀವ್ (ಕುಡಚಿ):– ಸನ್ಮಾನ್ಯ ಸಭಾಧ್ಯಕ್ಷರೆ, ಐದೇ ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಹಳ್ಳಿಗಳಿಗೆ ನೀರನ್ನು ಕೊಟ್ಟರು ಎಂದು ನಜೀರ್ ಸಾಬ್‌ರವರನ್ನು “ನೀರ್ ಸಾಬ್” ಎಂದು ಇವತ್ತಿಗೂ ಕರೆಯುತ್ತಾರೆ. ನನ್ನದೊಂದು ಆಸೆ ಇದೆ. ಹೆಚ್.ಕೆ. ಪಾಟೀಲ್‌ರವರನ್ನು “ಹಳ್ಳಿ ಕಟ್ಟಿದ ಪಾಟೀಲ್” ಎಂದು ಕರೆಸಿಕೊಳ್ಳುವಂಥ ತೀರ್ಮಾನವನ್ನು ಹೆಚ್.ಕೆ. ಪಾಟೀಲ್‌ರವರು ತೆಗೆದುಕೊಳ್ಳುತ್ತಾರೆಯೇ? ಇಂದು ಸಂಪನ್ಮೂಲದ ಕೊರತೆಯಿದೆ, ನಾವು ಎಲ್ಲಾ ಬೇಡಿಕೆಗಳನ್ನಿಟ್ಟರೂ ಅವರಿಂದ ಎಷ್ಟು ಸಾಧ್ಯವಿದೆಯೋ ಅಷ್ಟು ಮಾತ್ರ ಮಾಡುವುದಕ್ಕೆ ಆಗುತ್ತದೆ. ನಾನು ಕೆಲವೊಂದು ಸಲಹೆಗಳನ್ನು ಕೊಡುತ್ತೇನೆ. ನಮ್ಮ ಹಣ ಎಲ್ಲಿ ಸೋರಿಕೆಯಾಗುತ್ತಿದೆ, ಎಲ್ಲಿ ನಾವು ಈ ದುರುಪಯೋಗವನ್ನು ತಡೆಗಟ್ಟಬಹುದು ಎಂದು, ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಸನ್ಮಾನ್ಯ ಮಂತ್ರಿಗಳು ಅರ್ಹ ಫಲಾನುಭವಿಗಳ ಪಟ್ಟಿಯನ್ನು ಮಾಡುವುದಕ್ಕೆ ಒಂದು ಸೂಚನೆಯನ್ನು ಕೊಡಲಿ. ಯಾರಿಗೆ ಮನೆ ಇಲ್ಲ, ಯಾರಿಗೆ ನಿವೇಶನ ಇಲ್ಲ, ಅದನ್ನು ಪಟ್ಟಿ ಮಾಡುವುದಕ್ಕೆ ಒಂದು ಸೂಚನೆಯನ್ನು ಕೊಡಲಿ. ಆ ಅರ್ಹ ಫಲಾನುಭವಿಯ ಪಟ್ಟಿಯ responsibilityಯನ್ನು PDOಗೆ ಮತ್ತು Executive Officerಗೆ entrust ಮಾಡಲಿ. ಆಗ ಯಾರಿಗೇ ಮನೆ ಹಂಚಿಕೆ ಮಾಡಿದರೂ ಅದು ಅರ್ಹ ಫಲಾನುಭವಿಗೆ ಹೋಗುತ್ತದೆ. ಅಂಥದ್ದು ಆಗುವುದಿಲ್ಲ. NRDWP ಬಹುಹಳ್ಳಿ ಕುಡಿಯುವ ನೀರಿನ ಯೋಜನೆ ಹಳ್ಳ ಹಿಡಿದಿರುವಂಥ ಯೋಜನೆ. ಎ.ಸಿ. ರೂಮಿನಲ್ಲಿ ಕುಳಿತು ಪ್ಲ್ಯಾನ್ ಮಾಡುತ್ತಾರೆ. ಈ ಹಳ್ಳಿಯನ್ನು ಬಹು ಹಳ್ಳಿ

ಕುಡಿಯುವ ನೀರಿನ ಯೋಜನೆಯಲ್ಲಿ ಒಳಪಡಿಸಿದ್ದೇವೆಂದು, ಆನಂತರ ಕುಡಿಯುವ ನೀರಿಗಾಗಿ ಒಂದು ರೂಪಾಯಿಯನ್ನು ಖರ್ಚು ಮಾಡುವಂತೆ ಇಲ್ಲ. ಇದೊಂದು condition ಇದೆ. ಇವರು ಅಧಿಕಾರಿಗಳು ಪ್ಲ್ಯಾನ್ ಮಾಡುತ್ತಾರೆ. ಆ ಹಳ್ಳಿ ಜನವಸತಿ ಇರುವಂಥದ್ದು ಎಲ್ಲಾ ತೋಟಗಳಲ್ಲಿ ಇರುತ್ತವೆ.

ಮಾನ್ಯ ಅಧ್ಯಕ್ಷರೆ, ಇವರು officer ಮಾಡುತ್ತಾರೆ. ಆ ಹಳ್ಳಿ ಜನವಸತಿ ಇರುವಂತಹುದು. ಎಲ್ಲಾ ತೋಟಗಳಲ್ಲಿರುತ್ತವೆ. ಅಲ್ಲಿ fluoride ಯುಕ್ತ ನೀರನ್ನು ಕುಡಿಯುತ್ತಿದ್ದಾರೆ. ನಾವೇನಾದರೂ ನೀರಿನ ಸೌಲಭ್ಯ ಮಾಡಿ ಎಂದು ಕೇಳಲು ಹೋದರೆ computer on ಮಾಡಿ NRDWP ನೊಳಗೆ ನಿಮ್ಮ ಹಳ್ಳಿ ಸೇರಿ ಹೋಗಿರುವುದರಿಂದ ಕೊಡಲಾಗುವುದಿಲ್ಲವೆಂದು ತೋರಿಸುತ್ತಾರೆ. ಅಂದರೆ ಅಧಿಕಾರಿಗಳು ಹೊಸ ಹೊಸ habitations ಏನು create ಆಗುತ್ತಿವೆ, ಅದನ್ನು ಸರ್ಕಾರದ ಗಮನಕ್ಕೆ ತರುತ್ತಿಲ್ಲ. ಸನ್ಮಾನ್ಯ ಮಂತ್ರಿಗಳು ಇದಕ್ಕೆ ಸೂಕ್ತ ನಿರ್ದೇಶನ ಕೊಡಬೇಕು.. ELSR tankಗಳು, ಜಲ ಸಂಗ್ರಹಾಲಯಗಳ ಬಗ್ಗೆ ಇಡೀ ಕರ್ನಾಟಕದಿಂದ ಒಂದು ವರದಿಯನ್ನು ತರಿಸಿಕೊಳ್ಳಲಿ. ಎಷ್ಟು ಟ್ಯಾಂಕ್‌ಗಳು ಇಂದು ಉಪಯೋಗಿಸದಿರುವ conditionನಲ್ಲಿವೆ ಎಂಬುದು ಗೊತ್ತಾಗುತ್ತದೆ. ನಮ್ಮಲ್ಲಿ ಒಂದೊಂದು ಟ್ಯಾಂಕ್‌ಗಳಿಗೆ 25 ಲಕ್ಷ ರೂ. ಕೊಟ್ಟಿದ್ದಾರೆ. ಆ ಟ್ಯಾಂಕ್‌ಗೆ ಒಂದು ಹನಿ ನೀರು ಬಿದ್ದಿಲ್ಲ. ಒಂದು ದಿನ ಟ್ಯಾಂಕ್‌ನಿಂದ ಕುಡಿಯುವ ನೀರು supply ಆಗಿಲ್ಲ. ಏನು supply ಮಾಡುವ pipeline ಇವೆಯಲ್ಲ ಅಲ್ಲಿಯೇ hole ತೆಗೆದುಕೊಂಡು ನೀರು ಕುಡಿಯುತ್ತಿದ್ದಾರೆ. ಅಲ್ಲಿ ಟ್ಯಾಂಕ್ ಕಟ್ಟಿ ಇಂಜಿನಿಯರ್ ಮತ್ತು ಕಾಂಟ್ರ್ಯಾಕ್ಟರ್ ಬಿಲ್ ತೆಗೆದುಕೊಂಡರು. ನನ್ನ ಮತಕ್ಷೇತ್ರದಲ್ಲಿ ನನ್ನ ಗಮನಕ್ಕೆ ಬಂದಿರುವುದು ಶಿರಗೂರ, ಕಣದಾಳ, ಹಿಟ್ನಾಳ, ಸವಸುದ್ದಿ, ಕಪ್ಪಲಗುದ್ದಿ, ಇಷ್ಟು ಹಳ್ಳಿಗಳಲ್ಲಿ ದೊಡ್ಡದಾಗಿ ಟ್ಯಾಂಕ್ ಕಟ್ಟಿದ್ದಾರೆ. ಒಂದು ದಿನ ನೀರುವ ಏರಿಸಿಲ್ಲ.

ಅಧ್ಯಕ್ಷರು:– ಅದಕ್ಕೆ ಏನು ಮಾಡಬೇಕೆಂದು ಹೇಳಿ.

ಶ್ರೀ ಪಿ. ರಾಜೀವ್:- ಮಾನ್ಯ ಅಧ್ಯಕ್ಷರೆ, ಅವಕ್ಕೆ ನೀರನ್ನು ಏರಿಸಿದರೆ ಇಡೀ ಊರಿನವರು ನೀರು ಕುಡಿಯುತ್ತಾರೆ. ಹೊಸ ಪೈಪ್‌ಲೈನ್ ಹಾಕಬೇಕು. ಇವರಿಗೆ ರಾಜಕೀಯ ಒತ್ತಡ ಇದೆಯಂತೆ, ಅಲ್ಲಿ ಯಾರೋ ಲೀಡರ್ ನೀರನ್ನು hole ಮಾಡಿ pipeline ಹಾಕಿಕೊಳ್ಳುತ್ತಾನಂತೆ, ಅದನ್ನು ನಿಲ್ಲಿಸಲು ಈ ಆಡಳಿತ ವರ್ಗಕ್ಕೆ ಆಗುತ್ತಿಲ್ಲ. ಬೆಳಗಾವಿಯಲ್ಲಿ ಮೀಟಿಂಗ್ ತೆಗೆದುಕೊಳ್ಳುವಾಗ ಸನ್ಮಾನ್ಯ ಮಂತ್ರಿಗಳೇ ಬಂದು ಒಂದು ಬಾರಿ ಹೇಳಿದರು. ಕಣದಾಳದಲ್ಲಿ ಇರುವಂತಹ water tank problem ಅನ್ನು ಬಗೆಹರಿಸಿ ಎಂದು. 6 ತಿಂಗಳಿನಿಂದ ಇಲ್ಲಿಯವರೆಗೆ ಆ ಸಮಸ್ಯೆ ಬಗೆಹರಿಸಲು ಇವರಿಗೆ ಆಗಿಲ್ಲ. ಅದೇ ರೀತಿ UGD plans ನಗರಪ್ರದೇಶಗಳಿಗೆ ಮಾತ್ರ ಆಗಬಾರದು. ಹಳ್ಳಿಗಳನ್ನು ನಾವು ಸುಧಾರಿಸಬೇಕು. ಹಳ್ಳಿಗಳಲ್ಲಿ UGD plan ಮಾಡಲು ಸಾಧ್ಯತೆ ಇದೆಯೆ? ಅದಕ್ಕೆ ಸನ್ಮಾನ್ಯ ಸಚಿವರು ಒತ್ತನ್ನು ಕೊಡಬೇಕು. ಸನ್ಮಾನ್ಯ ಲಕ್ಷ್ಮಣ ಸವದಿಯವರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟರು. ನಾವು ಕೊಳವೆ ಬಾವಿಗಳನ್ನು ಕೊರೆಯುತ್ತೇವೆ. ನೀರು ಬೀಳಲಿಲ್ಲವೆಂದು ಕೊಳವೆ ಬಾವಿಗಳನ್ನು ಹಾಗೆಯೇ ಮುಚ್ಚಿ ಬಿಡುತ್ತೇವೆ. ಅದಕ್ಕೆ ಒಂದು scientific instrument ಅನ್ನು ಗ್ರಾಮ ಪಂಚಾಯಿತಿಯಿಂದ ಕೊಡಬೇಕು. ಯಾವುದೇ ಮಕ್ಕಳು ಕೊರೆದ ಬಾವಿಯಲ್ಲಿ ಬಿದ್ದು ಅನಾಹುತವಾಗಬಾರದು. ಆದರೆ, ಅದು rain harvesting source ಆಗಬೇಕು. ಮಳೆ ನೀರು ಕೊಯ್ಲು ಮಾಡುವ ಸಂಪನ್ಮೂಲವಾಗಿ ಅದನ್ನು ಬಳಸಿಕೊಳ್ಳುವುದಕ್ಕೆ, ಯಾವುದೇ ಅನಾಹುತ ಆಗದಂತೆ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಒಂದು 10 ಅಡಿಯೊಳಗೆ ಫಿಟ್ ಮಾಡಿ ಕೂರಿಸುವ ಒಂದು instrument ಅನ್ನು ನಾವು ಕೊಟ್ಟಿದ್ದೆ ಆದರೆ, ನಮ್ಮ ನೀರಿನ ಅಂತರ್ಜಲವನ್ನು ಹೆಚ್ಚು ಮಾಡಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ನಾವು ಇರುವ vacancyಯನ್ನು ನಾವು full ಮಾಡಲೇಬೇಕು. ಗ್ರಾಮ ಪಂಚಾಯಿತಿಗಳು ಸುಧಾರಣೆಯಾದಾಗ ಮಾತ್ರ ಆಗುತ್ತದೆ. ಅದಕ್ಕಾಗಿ ಪ್ರಭಾವಶಾಲಿಯಾಗಿ, ಅರ್ಥಗರ್ಭಿತವಾಗಿ ಗ್ರಾಮ ಸಭೆ ನಡೆಸುವಂತಹ ಆಲೋಚನೆ, ಅದನ್ನು ಶಾಸಕರಾಗಿ ನಾವೂ ಜವಾಬ್ದಾರಿ ತೆಗೆದುಕೊಳ್ಳಬೇಕು, ಅಧಿಕಾರಿಗಳು ಆ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಈಗ ಹೇಗಾಗಿದೆ ಎಂದರೆ, ಒತ್ತಡಕ್ಕಾಗಿ

ಮಣಿದು ಯಾರು ಅಧ್ಯಕ್ಷರು, ಯಾರು member ಅವರ relationಗಳಿಗೆ ಮನೆಗಳನ್ನು ಹಂಚುವಂತಹ ಕೆಲಸವಾಗುತ್ತಿದೆ. ಈ ನಿಟ್ಟಿನಲ್ಲಿ ಹೋದರೆ ನಾವು ಇನ್ನು 60 ವರ್ಷ ಮನೆಗಳನ್ನು ಹಂಚಿದರೂ ಕೂಡ ಹುಲ್ಲು ಗುಡಿಸಲಿನಲ್ಲಿರುವವರಿಗೆ ಮನೆಯನ್ನು ಕೊಡಲಾಗುವುದಿಲ್ಲ. ಇನ್ನು ಬಹಳ ದೊಡ್ಡ ಸಮಸ್ಯೆ ಇರುವುದು ಸಾರ್ವಜನಿಕ ಶೌಚಾಲಯಗಳು. ನಾನು ಎಸ್.ಸಿ/ಎಸ್.ಟಿ. ಕಾಲೋನಿಗಳಲ್ಲಿ ಓಡಾಡುತ್ತಿರುತ್ತೇನೆ. ಅವರ ಮನೆಗಳನ್ನು ನೋಡುತ್ತಿರುತ್ತೇನೆ. ಎಂತಹ ಪರಿಸ್ಥಿತಿಯಲ್ಲಿ ಅವರು ಬದುಕುತ್ತಾರೆಂದರೆ, 10 ಅಡಿ ಅಗಲ, 10 ಅಡಿ ಉದ್ದದ ಮನೆಯಲ್ಲಿಯೇ ಅವರ ಬೆಡ್ ರೂಮ್, ಅಡುಗೆ ಮನೆ, ವಿದ್ಯಾರ್ಥಿಗಳ ಅಭ್ಯಾಸದ ಕೊಠಡಿ ಇವೆಲ್ಲವೂ ಒಂದೊಂದು ಮೂಲೆಗೆ ಒಂದೊಂದು ಕೋಣೆಯ ಹೆಸರನ್ನು ಇಟ್ಟುಕೊಂಡಿರುತ್ತಾರೆ. ಅವರು ಎಲ್ಲಿಗೆ ಹೋಗಬೇಕು? Individual ಶೌಚಾಲಯ ಕಟ್ಟಿಕೊಳ್ಳುವುದಕ್ಕೆ ಆಗುವುದಿಲ್ಲ. ಸಾರ್ವಜನಿಕ ಶೌಚಾಲಯ ಕಟ್ಟುತ್ತಾರೆ, ಎರಡು ದಿನದ ಮೇಲೆ ಮೂರನೇ ದಿನಕ್ಕೆ ಅವುಗಳನ್ನು ಉಪಯೋಗಿಸಲು ಆಗುವುದಿಲ್ಲ. ನಾನು ಸಾರ್ವಜನಿಕ ಶೌಚಾಲಯ ಕಟ್ಟುತ್ತೇವೆ ಎಂದರೆ ಮನೆಯಲ್ಲಿ ಯಾವರೀತಿ ಸೌಲಭ್ಯ ಕೊಡಲಾಗುತ್ತದೆ, overhead tank ಇರಬೇಕು, ಕೊಳವೆ ಬಾವಿ ಇರಬೇಕು, ನೀರಿನ ಮೂಲವನ್ನು ಕೊಡಬೇಕು. ಅಂತಹ ಶೌಚಾಲಯಗಳ ನಿರ್ಮಾಣ ಮಾಡಿದರೆ ಮಾತ್ರ ಸಾರ್ವಜನಿಕ ಶೌಚಾಲಯಗಳು ಉಪಯೋಗ ಆಗುತ್ತವೆ ಎಂಬ ಮಾತನ್ನು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃಜ್ಞತೆಯನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು:- ಈಗ ಜೆ.ಟಿ. ಪಾಟೀಲ್ ರವರು.

ಶ್ರೀ ಜೆ.ಟಿ. ಪಾಟೀಲ್ (ಬೀಳಗಿ):- ಮಾನ್ಯ ಅಧ್ಯಕ್ಷರೆ, ನನಗೆ ಚರ್ಚೆಯಲ್ಲಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಈಗ ಗ್ರಾಮೀಣಾಭಿವೃದ್ಧಿ ಸಚಿವರು 15 ಯೋಜನೆಗಳನ್ನು ಹಾಕಿಕೊಂಡು ಏನು ಗ್ರಾಮಗಳ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದು ನಿಜವಾಗಿಯೂ ಉತ್ತಮವಾಗಿದೆ. ಆದರೆ, ಒಂದು ಮಾತು ನಾನು ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಹುಲಕೋಟಿ

ಗ್ರಾಮದಲ್ಲಿ ತಾವು ಏನೇನು ಅಭಿವೃದ್ಧಿ ಮಾಡಿದ್ದೀರಿ, ಅದನ್ನು ಇಡೀ ರಾಜ್ಯದ ಹಳ್ಳಿಗಳಿಗೆ ಮಾಡಿದರೆ ಉತ್ತಮ ಎಂಬ ಮಾತನ್ನು ಹೇಳಲಿಚ್ಛಿಸುತ್ತೇನೆ. ಬಸವರಾಜ ರಾಯರೆಡ್ಡಿ ಯವರು ಸ್ಮಶಾನದ ಬಗ್ಗೆ ಒಂದು ಮಾತನ್ನು ಹೇಳಿದರು. ಅವರು ಹೇಳಿದ ಮಾತು ನೂರಕ್ಕೆ ನೂರು ಸತ್ಯ. ಸ್ಮಶಾನ ಹೇಗಿದೆ ಎಂದರೆ, ಹೂದೋಟ ಇದೆ, ಟೆಲಿಫೋನ್ ಸೌಕರ್ಯ, ನೀರಿನ ಸೌಕರ್ಯ ಇದೆ. ಮುಸ್ಲಿಂ ಸಮುದಾಯಗಳನ್ನು ಒಳಗೊಂಡು ದಲಿತ ವರ್ಗದವರಿಗೆ ಸಹಿತ ಒಂದೇ ವೇದಿಕೆಯೊಳಗೆ ಅಂತ್ಯಕ್ರಿಯೆ ಮಾಡಲು ಅವಕಾಶವಿದೆ. ಅಷ್ಟೇ ಅಲ್ಲ ಇಂದು ಊರಿನಲ್ಲಿ ಯಾರಾದರೂ ತೀರಿಕೊಂಡರೆ ಫೋನ್ ಮುಖಾಂತರ message ಕೊಟ್ಟರೆ ಅಂತ್ಯಸಂಸ್ಕಾರ ಮಾಡುವುದಕ್ಕೆ ಏನೇನು ಮೂಲಭೂತ ಅವಶ್ಯಕತೆ ಇದೆ, ಎಲ್ಲಾ ಪೂರೈಕೆ ಮಾಡಿದ್ದಾರೆ. UGD ಮಾಡಿದ್ದಾರೆ, ಕಾಂಕ್ರೀಟ್ ರಸ್ತೆಗಳನ್ನು ಮಾಡಿದ್ದಾರೆ. ಇದನ್ನು ಪ್ರತಿಯೊಂದು ಗ್ರಾಮದಲ್ಲಿ ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಮಾಡಬೇಕೆಂದು ಒತ್ತಾಯಿಸುತ್ತೇನೆ. ಇನ್ನು ನಜೀರ್ ಸಾಬ್ ರವರು ಕುಡಿಯುವ ನೀರನ್ನು ಕೊಟ್ಟರೆ ಸನ್ಮಾನ್ಯ ಹೆಚ್.ಕೆ. ಪಾಟೀಲ್‌ರವರು ಶುದ್ಧ ಕುಡಿಯುವ ನೀರನ್ನು ಕೊಟ್ಟು ಇಂದು ಸಾಕಷ್ಟು ಪ್ರಚಾರ ಪ್ರಿಯರಾಗಿದ್ದಾರೆ. ಇನ್ನೂ ಹೆಚ್ಚಿನ ಶುದ್ಧ ಕುಡಿಯುವ ನೀರಿನ ಯೋಜನೆಗಳನ್ನು ಕೊಡಬೇಕೆಂದು ಒತ್ತಾಯಿಸಲು ನಾನು ಇಚ್ಛಿಸುತ್ತೇನೆ. ಸಾಮಾಜಿಕ ಪಿಡುಗು ಜೊತೆಗೆ ಸಾರ್ವಜನಿಕ ಶಾಪ ಎಂದರೆ ಶೌಚಾಲಯ. ನಮ್ಮೂರಿನಲ್ಲಿ 4 ವರ್ಷದಿಂದ ಬಯಲು ಶೌಚವನ್ನು ಮುಕ್ತ ಮಾಡಿದ್ದೇವೆ. ಇಡೀ ದಲಿತ ಕುಟುಂಬವನ್ನು ಒಳಗೊಂಡು ಪ್ರತಿಯೊಂದು ಮನೆಗಳಿಗೆ ಶೌಚಾಲಯಗಳನ್ನು ಕಟ್ಟಿಸಿಕೊಟ್ಟಿದ್ದೇವೆ. 15 ಸಾರ್ವಜನಿಕ ಶೌಚಾಲಯಗಳನ್ನು ಮಾಡಿದ್ದು, ನೀರಿನ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆ ಕಲ್ಪಿಸಿದ್ದೇವೆ. ಪಂಚಾಯಿತಿ ಮುಖಾಂತರ ಸ್ವಚ್ಛತೆ ಕಾರ್ಯಕ್ರಮವನ್ನು ಸಹ ಮಾಡಿದ್ದೇವೆ.

Mr SPEAKER:- Very good.

ಶ್ರೀ ಜೆ.ಟಿ. ಪಾಟೀಲ್:- ನಮ್ಮೂರಿನೊಳಗೆ ಆದಂತಹ ಈ ಬಯಲು ಶೌಚ ಮುಕ್ತ ಇನ್ನೊಂದು ಗ್ರಾಮಕ್ಕೆ ಏಕೆ ಆಗಬಾರದು ಎನ್ನುವಂತಹ ಪ್ರಶ್ನೆಯನ್ನು ಸನ್ಮಾನ್ಯ ಸಚಿವರಿಗೆ ಕೇಳುತ್ತೇನೆ. ಸಚಿವರು ಸಹ ನಮ್ಮ ಊರಿನ ಬಯಲು ಮುಕ್ತ ಶೌಚಾಲಯವನ್ನು ನೋಡಿದ್ದಾರೆ ಎಂಬ ಮಾತನ್ನು ಹೇಳಲಿಚ್ಛಿಸುತ್ತೇನೆ. ನಿನ್ನೆ ದಿನ ಸನ್ಮಾನ್ಯ ಕುಮಾರಸ್ವಾಮಿಯವರು 19 ಲಕ್ಷ ಶೌಚಾಲಯಗಳು ಕಳವು ಆಗಿದೆ, ಅವುಗಳಲ್ಲಿ ಅವ್ಯವಹಾರ ಆಗಿದೆ ಎಂಬ ಪ್ರಶ್ನೆಯನ್ನು ಸಚಿವರಲ್ಲಿ ಕೇಳಿದರು. ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಸಚಿವರಲ್ಲಿ ಒತ್ತಾಯಿಸುತ್ತೇನೆ. ಒಂದು ಸದನ ಸಮಿತಿ ನೇಮಿಸುವ ಮುಖಾಂತರ ಏನು 19 ಲಕ್ಷ ಶೌಚಾಲಯಗಳು ಕಳುವಾಗಿವೆ, ಇದನ್ನು ಇಡೀ ರಾಜ್ಯದ ಜನತೆಗೆ, ಈ ಸದನಕ್ಕೆ ಅದರ ಸತ್ಯಾ-ಸತ್ಯತೆಯನ್ನು ಹೊರಗೆ ತರಬೇಕೆನ್ನುವುದು ಒಂದು. ಹಿಂದಿನ ಸರ್ಕಾರದಲ್ಲಿ ಪ್ರತಿಯೊಂದು ಕ್ಷೇತ್ರಕ್ಕೆ 5 ಕೋಟಿ ರೂ.ಗಳನ್ನು ಕೆರೆ ಹೂಳು ಎತ್ತಲು ಕೊಟ್ಟಿದ್ದಾರೆ. ಅದರಲ್ಲಿಯೂ ಸಹ ಸಂಪೂರ್ಣ ಅವ್ಯವಹಾರವಾಗಿದ್ದು, ಅದಕ್ಕೂ ಸಹ ಸದನ ಸಮಿತಿ ಮಾಡುವ ಮುಖಾಂತರ ಏನು ಕೆರೆಗಳ ಅಭಿವೃದ್ಧಿಯಲ್ಲಿ ಅವ್ಯವಹಾರವಾಗಿದೆ, ಅದನ್ನು ಹೊರ ತರಬೇಕೆಂದು ಒತ್ತಾಯಿಸುತ್ತೇನೆ. ಸಿಬ್ಬಂದಿ ಕೊರತೆ ಇದೆ. ಇದನ್ನು ನೀಗಿಸದಿದ್ದರೆ ಎಷ್ಟೇ ಯೋಜನೆಗಳನ್ನು ತಂದರೂ ಸಹ ಸಫಲತೆಯಾಗಲು ಸಾಧ್ಯವಿಲ್ಲ. ಅದಕ್ಕಾಗಿ ದಯಮಾಡಿ ಬೇಗನೆ ಒಂದು ನಿರ್ದಿಷ್ಟ ಅವಧಿಯೊಳಗೆ ಸಿಬ್ಬಂದಿ ಕೊರತೆಯನ್ನು ನೀಗಿಸಬೇಕು. PMGSY ಮತ್ತು ನಬಾರ್ಡ್ ರಸ್ತೆ, ಇಂದು ರಾಜ್ಯದಲ್ಲಿ 58 ಸಾವಿರ ಏನು ಡಾಂಬರೀಕೃತ ರಸ್ತೆ ಇವೆ, ಅದರಲ್ಲಿ 16 ಸಾವಿರ ಕಿ.ಮೀ. PMGSY ಮತ್ತು ನಬಾರ್ಡ್ ಮುಖಾಂತರ ರಸ್ತೆಯಾಗಿದೆ. ಇವು 5 ವರ್ಷಗಳಿಗೂ ಮೇಲ್ಪಟ್ಟಿದ್ದು ರಸ್ತೆಗಳು ಅನಾಥವಾಗಿವೆ. ಈ ಸಂದರ್ಭದಲ್ಲಿ ನಾನು ಮುಖ್ಯಮಂತ್ರಿಗಳನ್ನು ಒತ್ತಾಯಿಸುತ್ತೇನೆ. ದಯಮಾಡಿ ಈ ಅನಾಥವಾಗಿರುವ ರಸ್ತೆಗಳನ್ನು ಇದರ ಅಭಿವೃದ್ಧಿಗೆ, ಮರು ಡಾಂಬರೀಕರಣಕ್ಕೆ ಮತ್ತು pot-holes ಗಳನ್ನು ತುಂಬುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ನಿಮ್ಮ ಮುಖಾಂತರ ಒತ್ತಾಯಿಸುತ್ತೇನೆ. ಇದರ ಜೊತೆಗೆ multi-village scheme

ಏನಿದೆ, ಇದರಲ್ಲಿ ಅನೇಕ ಕೊನೆಯ ಹಳ್ಳಿಗಳಿಗೆ ನೀರು ತಲುಪುತ್ತಿಲ್ಲ. ಅದಕ್ಕೆ ಮುಖ್ಯ pipeline ಮುಖಾಂತರ ಪ್ರತಿಯೊಂದು ಹಳ್ಳಿಗಳಿಗೆ ಪ್ರತ್ಯೇಕವಾಗಿ pipeline ಮಾಡುವ ಮುಖಾಂತರ ಪ್ರತಿಯೊಂದು ಹಳ್ಳಿಗಳಿಗೆ ನೀರು ಮುಟ್ಟುವಂತಹ ವ್ಯವಸ್ಥೆಯನ್ನು ಇಲಾಖೆ ಮಾಡಬೇಕಾಗಿದೆ ಎಂದು ಹೇಳಲಿಚ್ಛಿಸುತ್ತೇನೆ. ಇನ್ನು ನರೇಗಾ ಯೋಜನೆಯದು. ಸನ್ಮಾನ್ಯ ಕುಮಾರಸ್ವಾಮಿಯವರು ಪ್ರಸ್ತಾಪ ಮಾಡಿದರು. 800 ಕೋಟಿ ರೂ. ಮಾರ್ಚ್ ಒಂದೇ ತಿಂಗಳಿನಲ್ಲಿ 13 ದಿನಗಳಲ್ಲಿ ಖರ್ಚು ಬಿದ್ದಿದೆ. 600 ಕೋಟಿ ರೂ. ಅವ್ಯವಹಾರವಾಗಿದೆ ಎನ್ನುವ ವಿಚಾರವನ್ನು ಸದನದ ಗಮನಕ್ಕೆ ತಂದಿದ್ದಾರೆ. ಈ 600 ಕೋಟಿ ರೂ.ಗಳನ್ನು ಯಾವ ರೀತಿ ಹಾಕಿದ್ದಾರೆ, ಯಾರು ತಪ್ಪಿತಸ್ಥರು ಎನ್ನುವುದನ್ನು ಇಲಾಖೆ ಹಾಗೂ ಸನ್ಮಾನ್ಯ ಸಚಿವರು ಕಂಡು ಹಿಡಿದು ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ. ಇನ್ನು ಕೆಲವು Land Army ಕೆಲಸಗಳು. ಕೆಲಸಗಳನ್ನು ಕೈಗೆತ್ತಿಕೊಂಡಿದ್ದಾರೆ. ಅಪೂರ್ಣ ಮಾಡಿ ನಿಲ್ಲಿಸಿದ್ದಾರೆ. ಯಾವುದಾದರೂ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕಾದರೆ ಅದನ್ನು ಮುಗಿಸುವ ಕೆಲಸ Land Armyಯವರ ಜವಾಬ್ದಾರಿ. ಹಣಕಾಸು ಕಡಿಮೆ ಇದೆ ಎಂದು ಏನೇನೋ ಸಬೂಬು ಹೇಳಿ ಸಾಕಷ್ಟು ಕೆಲಸಗಳನ್ನು ನಿಲ್ಲಿಸಿದ್ದಾರೆ. ಅದನ್ನು ಸಹ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕೆಂಬ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಇವತ್ತು ಮುಖ್ಯವಾದ ಕೆಲಸವೇನೆಂದರೆ, ಪ್ರತಿಯೊಂದು ಗ್ರಾಮಗಳಲ್ಲಿ ಕೆರೆಗಳಿಗೆ ನೀರು ತುಂಬಿಸುವಂಥದ್ದು. ನನ್ನ ಒತ್ತಾಯವೇನೆಂದರೆ ಒಂದು ಹಳ್ಳಿಯಲ್ಲಿ ನಾಲ್ಕು ದಿಕ್ಕಿನಲ್ಲೂ ಕೆರೆಗಳನ್ನು ಮಾಡಿ, ಆ ಕೆರೆಗಳಿಗೆ ನೀರನ್ನು ತುಂಬಿಸಿದಾಗ ಎಂದೂ ಕೂಡ ಕುಡಿಯುವ ನೀರಿನ ಸಮಸ್ಯೆ ಬರುವುದಕ್ಕೆ ಸಾಧ್ಯವಿಲ್ಲ. Underground water ಜಾಸ್ತಿಯಾಗಿ ಅದರಿಂದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುತ್ತದೆ. ಇನ್ನೊಂದು ಸವದಿಯವರು ಹೇಳಿದಂತೆ, ಎಲ್ಲೆಲ್ಲಿ Bore-well fail ಆಗಿದ್ದಾವೆ, failed Borewellಗಳಿಗೆ ಮಳೆಗಾಲದಲ್ಲಿ ನೀರು ತುಂಬಿಸುವ ಕಾರ್ಯಕ್ರಮ ಇವತ್ತು compulsoryಯಾಗಿ ಇಲಾಖೆ ಮಾಡಬೇಕೆನ್ನುವುದನ್ನು ನಾನು ಒತ್ತಾಯ ಮಾಡುತ್ತೇನೆ. ಸನ್ಮಾನ್ಯ

ಕುಮಾರಸ್ವಾಮಿಯವರ ಕಾಲದಲ್ಲಿ 'ಗ್ರಾಮ ವಿಕಾಸ ಯೋಜನೆ' ಪ್ರಾರಂಭವಾಯಿತೆಂದು ಅನೇಕ ಜನ ಸದಸ್ಯರು ಹೇಳಿದರು, ಇದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ, ನಾನು ಮೊದಲನೇ ಸಾರಿ ಶಾಸಕನಿದ್ದಾಗ ಜೆ.ಹೆಚ್. ಪಟೇಲ್ ಅವರು ಮುಖ್ಯಮಂತ್ರಿಗಳಾಗಿದ್ದಾಗ ಸನ್ಮಾನ್ಯ ಎಂ.ಪಿ. ಪ್ರಕಾಶ್ ಅವರು RDPR ಸಚಿವರಿದ್ದಾಗ ನನ್ನ ಕ್ಷೇತ್ರಕ್ಕೆ ಸ್ವಚ್ಛ ಗ್ರಾಮ ಹೆಸರಿನಲ್ಲಿ ಒಂದು ಕೋಟಿ ರೂಪಾಯಿಗಳನ್ನು ಗ್ರಾಮೀಣ ಅಭಿವೃದ್ಧಿಗೆ ಕೊಟ್ಟಿದ್ದಾರೆನ್ನುವ ಮಾತನ್ನು ಸಹಿತ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪ್ರತಿ ವರ್ಷ ಕನಿಷ್ಠ 5 ಹಳ್ಳಿಗಳನ್ನಾದರೂ ಈ ಗ್ರಾಮ ವಿಕಾಸ ಯೋಜನೆಯಲ್ಲಿ ಕೈಗೆತ್ತಿಕೊಳ್ಳಬೇಕು ಎನ್ನುವ ವಿಚಾರವನ್ನು ಹೇಳುವುದರ ಮೂಲಕ ಇವತ್ತು ಅನೇಕ ವಿಚಾರಗಳನ್ನು ನಿಮ್ಮ ಜೊತೆ ಸದನದಲ್ಲಿ ಹಂಚಿಕೊಳ್ಳಬೇಕು ಎನ್ನುವ ಒತ್ತಾಸೆ ಇದ್ದರೂ ಕೂಡ ಸಮಯದ ಅಭಾವದ ಕಾರಣ, ನಿಮ್ಮ ಮಾತಿಗೆ ನಾನು ಬೆಲೆ ಕೊಟ್ಟು ಇವತ್ತು ಇಡೀ ಎಲ್ಲಾ ಇಲಾಖೆಗಳಲ್ಲಿ ಗ್ರಾಮೀಣ ಪಂಚಾಯತ್ ಇಲಾಖೆ ಬಹು ದೊಡ್ಡ ಇಲಾಖೆ. ಇವತ್ತು ಗ್ರಾಮಗಳು ಎಲ್ಲಿಯವರೆಗೆ ಅಭಿವೃದ್ಧಿಯಾಗುವುದಿಲ್ಲ ಅಲ್ಲಿಯವರೆಗೆ ಯಾವುದೇ ಯೋಜನೆ ಸಫಲವಾಗುವುದಿಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ. ಇವತ್ತು ಸಚಿವರಾದ ಮಾನ್ಯ ಹೆಚ್.ಕೆ. ಪಾಟೀಲರು ಸಮರ್ಥ ಸಚಿವರಾಗಿದ್ದಾರೆ, ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ನಿಮ್ಮ ಊರಿನ ಸ್ಮಶಾನದ ಬಗ್ಗೆ ಹೇಳಿದ್ದೇನೆ, ನಿಮ್ಮ ಊರಿನ ಯುಜಿಡಿ ಬಗ್ಗೆ ಹೇಳಿದ್ದೇನೆ, ನಿಮ್ಮ ಊರಿನ ಯುವಕ ಮಂಡಲ ಕಟ್ಟಡದ ಬಗ್ಗೆ ಹೇಳಿದ್ದೇನೆ. ನಿಮ್ಮ ಊರಿನಲ್ಲಿ ಏನೇನು ಮಾಡಿಕೊಂಡಿದ್ದೀರಿ, ಅದನ್ನು ರಾಜ್ಯದ ಎಲ್ಲಾ ಹಳ್ಳಿಗಳಿಗೂ ಮಾಡುವ ರೀತಿಯಲ್ಲಿ ನೀವು ಪ್ರಯತ್ನ ಮಾಡಬೇಕೆಂದು ಒತ್ತಾಯ ಮಾಡಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪ್ರಿಯಾಂಕ ಎಂ. ಖರ್ಗೆ [ಚಿತ್ತಾಪುರ]:– ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತಾ, ಈಗಾಗಲೇ ಸಾಕಷ್ಟು ಚರ್ಚೆ ಆಗಿದೆ, ಹೆಚ್ಚಿಗೆ ಏನೂ ಹೇಳುವುದಕ್ಕೆ ಬಯಸುವುದಿಲ್ಲ. ಆದರೂ ಕೂಡ ವಿಶೇಷವಾಗಿ ಗ್ರಾಮೀಣಾಭಿವೃದ್ಧಿ ಬಗ್ಗೆ

ಕಾಳಜಿ ವಹಿಸಬೇಕಾದರೆ, ಅಧಿಕಾರಿಗಳು ವಿಶೇಷವಾಗಿ ಬೇರು ಮಟ್ಟದಲ್ಲಿರುವ PDO ಮತ್ತು EO ಅವರಿಗೆ ವಿಶೇಷವಾಗಿ ಗಮನಹರಿಸಬೇಕಾಗುತ್ತದೆ. ಏಕೆಂದರೆ, ಇವತ್ತು PDO ಏನು ಮಾಡುತ್ತಿದ್ದಾರೆಂದರೆ, ಬೇರು ಮಟ್ಟದಲ್ಲಿ ರಾಜಕೀಯಕ್ಕೆ ಇಳಿದುಬಿಟ್ಟಿದ್ದಾರೆ. ಕಳೆದ 5–6 ವರ್ಷದಿಂದ ಒಂದೇ ಗ್ರಾಮದ ಒಂದೇ ಗ್ರಾಮ ಪಂಚಾಯಿತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಕಾರಣದಿಂದ ಇವತ್ತು ಅವರು ನಮ್ಮ ಹಿರಿಯರು ಹೇಳಿದಂತೆ PDO ದಿಂದ EO ತನಕ ರಾಜಕೀಯಕ್ಕೆ ಇಳಿದಿದ್ದಾರೆ, ಇವರನ್ನು shuffle ಮಾಡುವುದಕ್ಕೆ ನಮಗೆ ಅಧಿಕಾರವಿರುವುದಿಲ್ಲ. ಏನಿದ್ದರೂ ನಮ್ಮ ತಾಲ್ಲೂಕಿನಲ್ಲಿ ಮಾತ್ರ ನಾವು ಅವರನ್ನು shuffle ಮಾಡಬಹುದೇ ವಿನಹಃ ನಮಗೆ ಬೇರೆ ಯಾವುದೇ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಮತ್ತು EO ಬಗ್ಗೆ ಹೇಳುವುದಾದರೆ, ವಿಶೇಷವಾಗಿ ಗಮನಹರಿಸಿ ಇದನ್ನು separate cadre ಮಾಡಿದರೆ ಮಾತ್ರ ನಮಗೆ ಏನಾದರೂ ಅನೂಕೂಲವಾಗುತ್ತದೆ. ಏಕೆಂದರೆ ಇವತ್ತು Veterinaryಯಿಂದ ಇರಬಹುದು, Agricultureನಿಂದ ಇರಬಹುದು ಅಥವಾ ಬೇರೆ ಬೇರೆ ಇಲಾಖೆಗಳಿಂದ ಬಂದು ಅವರು ಅಲ್ಲಿ EO ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ಇಲಾಖೆಯ ಬಗ್ಗೆ ತಿಳಿದುಕೊಳ್ಳುವುದಕ್ಕೆ ಕನಿಷ್ಠಪಕ್ಷ 2–3 ವರ್ಷ ಬೇಕಾಗುತ್ತದೆ. ಆದುದರಿಂದ ನಾವು E.O ಆಗಲಿ, PDO ಆಗಲಿ ಅಥವಾ Bill collector ಆಗಲಿ ಅಧಿಕಾರಿಗಳಿಗೆ ಸರಿಯಾದ ತರಬೇತಿ ಕೊಡಲಾರದ ಕಾರಣ ಇವತ್ತು ಅವರೆಲ್ಲಾ ರಾಜಕೀಯಕ್ಕೆ ಇಳಿದ್ದಿದ್ದಾರೆ. ಅದಲ್ಲದೆ ಕುಡಿಯುವ ನೀರಿನ ಯೋಜನೆಗಳಂತು ಸಾಕಷ್ಟು ಮಾಡಿದ್ದೇವೆ, ಆದರೆ ಯಾವುದೇ scientific reasonಆಗಿ ನಾವು ಹೆಚ್ಚು ಮಾಡುವಂತಿಲ್ಲ ಕೆಲಸಗಳನ್ನು ತೆಗೆದುಕೊಳ್ಳುತ್ತಿಲ್ಲ, ಗ್ರಾಮೀಣಾಭಿವೃದ್ಧಿ ಮಂತ್ರಿಗಳಲ್ಲಿ ನನ್ನ ಮನವಿ ಏನೆಂದರೆ ಸ್ವಲ್ಪ ಹೆಚ್ಚು ಕಾಳಜಿ ವಹಿಸಿ ಹಿಂದಿನ ರೀತಿಯಲ್ಲಿ ನಮ್ಮ water table ಅನ್ನು ಹೆಚ್ಚು ಮಾಡಿಕೊಳ್ಳಬಹುದು, ವಿಶೇಷವಾಗಿ ಜನಜಾನುವಾರುಗಳಿಗೆ ಬರಗಾಲದಲ್ಲಿ ಕುಡಿಯುವುದಕ್ಕೆ ನೀರು ಇರುವುದಿಲ್ಲ. ಆದುದರಿಂದ ನಾವು ಈ rain water harvesting ಅನ್ನು ಬರೀ ಪಟ್ಟಣ ಪಂಚಾಯಿತಿಯ ಅಥವಾ ಸಿಟಿಯಲ್ಲಿ ಮಾಡಿದರೆ ಆಗುವುದಿಲ್ಲ. ನಾವು

ಹೆಚ್ಚಿನ ರೀತಿಯಲ್ಲಿ ಕೆರೆಗಳನ್ನು ಕೂಡ ಸೃಷ್ಟಿ ಮಾಡುವುದರ ಕಡೆಗೆ ಹೆಚ್ಚಿನ ಗಮನ ಕೊಡಬೇಕಾಗುತ್ತದೆ. ಅದಲ್ಲದೆ, ನಮ್ಮ ಈ ತಾಲ್ಲೂಕು ಅಭಿವೃದ್ಧಿಯಲ್ಲಿ ನಮಗೆ ಸಾಕಷ್ಟು ಮನೆಗಳ ತೊಂದರೆ ಇರಬಹುದು ಅಂದರೆ ನಾವು ಹೊಸ ಬಡಾವಾಣೆ ಮಾಡಬೇಕಾದರೆ we don't take the panchayat limit into consideration. ಇವತ್ತು ಸಾಕಷ್ಟು ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವಂಥ ಎಲ್ಲಾ ಲ್ಯಾಂಡ್‌ಗಳಲ್ಲಿ ಅಕ್ರಮವಾಗಿ ಬಡಾವಣೆಗಳು ಬರುತ್ತಿವೆ. ಆಸ್ತಿ ವಿವರಣೆಗಳನ್ನೂ ಕೂಡ ನಾವು ಸಂಗ್ರಹಿಸಿ ವಿಶೇಷವಾದ ಒಂದು land bank create ಮಾಡಬೇಕಾಗಿದೆ. ಇಲ್ಲದಿದ್ದರೆ ಏನಾಗುತ್ತದೆಂದರೆ, ನಮ್ಮ ಚಿತ್ತಾಪುರ ತಾಲ್ಲೂಕಿನಲ್ಲಿ ವಿಶೇಷವಾಗಿ ಸಾಕಷ್ಟು ಕಡೆ solar park ಆಗಲಿ ಅಥವಾ Industrial hubsಗಳಿಗಾಗಲಿ ಬರುತ್ತಿದ್ದರೂ ಕೂಡ ನಮಗೆ land bank ಸಿಗುತ್ತಿಲ್ಲ. ಕಾರಣ ನಮ್ಮ ಪಂಚಾಯಿತಿಗಳಲ್ಲಿ ಅವರ ಆಸ್ತಿ ವಿವರಣೆ ಸಿಗಲಾರದ ಕಾರಣ ಇವತ್ತು ಸಾಕಷ್ಟು ತೊಂದರೆಗಳನ್ನು ಎದುರಿಸುತ್ತಿದ್ದೇವೆ. ಆದುದರಿಂದ ವಿಶೇಷವಾಗಿ ಈ ನಮ್ಮ ಇಲಾಖೆಯಿಂದ ನಮ್ಮ ಆಸ್ತಿ ಸಂಗ್ರಹಿಸಿ ಒಂದು land bank ಪಟ್ಟಿ ಮಾಡಬೇಕೆಂದು ಕೂಡ ನಾನು ಮನವಿ ಮಾಡುತ್ತಿದ್ದೇನೆ. ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ, ಸಾಕಷ್ಟು ಪರಿಣಿತರು ಇಲ್ಲಿ ಈಗಾಗಲೇ ಮಾತನಾಡಿದ್ದಾರೆ, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು.

ಶ್ರೀ ಚಿಕ್ಕಮಾದು (ಹೆಚ್.ಡಿ. ಕೋಟೆ):- ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಏನೂ ಹೇಳುವುದಕ್ಕೆ ಹೋಗುವುದಿಲ್ಲ, ಈ ಸದನದ ಎಲ್ಲಾ ಹಿರಿಯ ಸದಸ್ಯರುಗಳು ವಿವರವಾಗಿ ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ ಪಂಚಾಯಿತಿ ವ್ಯವಸ್ಥೆಯಲ್ಲಿ ನಾನು ಇವತ್ತು ತಮ್ಮ ಮುಂದೆ ಬಂದು ಮಾತನಾಡುವುದಕ್ಕೆ ಅವಕಾಶವಾಗಿದ್ದಕ್ಕೆ ಕಾರಣ ದಿ: ನಜೀರ್ ಸಾಬ್ ಅವರು ನಜೀರ್ ಸಾಬ್ ಅವರು ತಂದಂಥಹ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ನಾನು ಪ್ರಥಮ ಬಾರಿಗೆ ಜಿಲ್ಲಾ ಪರಿಷತ್ತಿನ ಸದಸ್ಯನಾಗಿ ಅಧಿಕಾರ ಮುಗಿಯುವುದರೊಳಗೆ ಇಲ್ಲಿ ಶಾಸಕನಾಗಿ 1991ರಲ್ಲಿ ಈ ಸದನದಲ್ಲಿ ನಿಂತು ಮಾತನಾಡತಕ್ಕಂಥ ಶಕ್ತಿಗೆ ಈ ಪಂಚಾಯತ್ ರಾಜ್ ವ್ಯವಸ್ಥೆಯೇ ಮೂಲ

ಕಾರಣ. ಆದುದರಿಂದ ಈ ಪಂಚಾಯತ್ ರಾಜ್ ವ್ಯವಸ್ಥೆ ನಂತರದ ದಿನಗಳಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾದ ಹಾಗೂ ಮಾಜಿ ಪ್ರಧಾನ ಮಂತ್ರಿಗಳಾದ ದಿ: ರಾಜೀವ್ ಗಾಂಧಿಯವರು, ನಜೀರ್ ಸಾಬ್ ಅವರು ಕರ್ನಾಟಕದಲ್ಲಿ ತಂದಂಥಹ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಒಪ್ಪಿಕೊಂಡು ಇದನ್ನು ಸಂವಿಧಾನಬದ್ಧವಾಗಿ ತಿದ್ದುಪಡಿಯನ್ನು ತಂದು ಇಡೀ ರಾಷ್ಟ್ರದಲ್ಲೇ ಒಂದು ರೀತಿ ಒಂದೇ ರೂಪದ ವ್ಯವಸ್ಥೆ ಇರಬೇಕೆಂದು three-tier system ಅನ್ನು ಜಾರಿಗೆ ತಂದರು. ಈ ಮೂರು ಕೂಡ ಅತ್ಯವಶ್ಯಕ, ಒಂದು ರೀತಿಯಲ್ಲಿ ಗ್ರಾಮಗಳ ಅಭಿವೃದ್ಧಿಯ ಜೊತೆಗೆ ರಾಜಕೀಯ ಕ್ಷೇತ್ರಕ್ಕೆ ಬರತಕ್ಕಂಥ ಸಾವಿರಾರು ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡತಕ್ಕಂಥ ಒಂದು ಕ್ಷೇತ್ರ ಇದು. ಅವರು ಗ್ರಾಮ ಪಂಚಾಯಿತಿಯ ಸದಸ್ಯರಾಗಿ ಅಧ್ಯಕ್ಷರಾಗಿ, ತಾಲ್ಲೂಕು ಪಂಚಾಯಿತಿಯ ಸದಸ್ಯರಾಗಿ, ಅಧ್ಯಕ್ಷರಾಗಿ ಮತ್ತು ಜಿಲ್ಲಾ ಪಂಚಾಯಿತಿಯ ಸದಸ್ಯರಾಗಿ ಅದೊಂದು ಬೆಳವಣಿಗೆ. ಆ ದಿಕ್ಕಿನಲ್ಲಿ ಕೆಲಸ ಮಾಡಿದಂಥ ಅನೇಕರಿಗೆ ಇವತ್ತು ಆ ಭಾಗದಲ್ಲಿ ನಾವು ಹೇಳುವುದಾದರೆ, ಡಿ.ಕೆ. ಶಿವಕುಮಾರ್ ಅವರು ಜಿಲ್ಲಾ ಪಂಚಾಯಿತಿಯ ಸದಸ್ಯರಾಗಿ, ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿ ಇವತ್ತು ಈ ಸರ್ಕಾರದಲ್ಲಿ 6 ಸಾರಿ ಗೆದ್ದ ಸಚಿವರಾಗಿದ್ದಾರೆ. ಜಿ.ಟಿ. ದೇವೇಗೌಡರು, ನಾನು ಅವರು ಜಿಲ್ಲಾ ಪಂಚಾಯಿತಿಯ ಸದಸ್ಯರಾಗಿದ್ದಂಥವರು. ನಮ್ಮ ಪಕ್ಷದ ರೇವಣ್ಣನವರು ಜಿಲ್ಲಾ ಪಂಚಾಯಿತಿಯಿಂದ ಬಂದವರು. ಈ ರೀತಿ ಅಭಿವೃದ್ಧಿಯ ಜೊತೆ ಜೊತೆಯಲ್ಲೇ ಜನ ಪ್ರತಿನಿಧಿಗಳನ್ನೂ ಕೂಡ ಆಯ್ಕೆ ಮಾಡತಕ್ಕಂಥ ಒಂದು ಒಳ್ಳೆಯ ಉಪಯುಕ್ತವಾದಂಥ ಪಂಚಾಯತ್ ರಾಜ್ ವ್ಯವಸ್ಥೆಯಾಗಿದೆ. ಇದರಲ್ಲಿ ಈಗಿನ ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಬಹಳ ಪ್ರಮುಖವಾಗಿ ಇದನ್ನು ಮುಂದಕ್ಕೆ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದಾರೆ. ಇವತ್ತು 5600 ಗ್ರಾಮ ಪಂಚಾಯಿತಿಗಳೇನಿವೆಯೋ ಅವುಗಳು 1991ರ ಜನಗಣತಿಯ ಆಧಾರದ ಮೇಲೆ ಆದಂಥವು. ಇವತ್ತಿನ ಜನಸಂಖ್ಯೆ ದ್ವಿಗುಣವಾಗಿದೆ, ಆ ದ್ವಿಗುಣವನ್ನು ಗಮನಿಸಿದಂಥ ಮಾನ್ಯ ಸಚಿವರು ಈ ಪಂಚಾಯಿತಿಗಳನ್ನು 2011ರ ಜನಗಣತಿಯ ಅನುಗುಣವಾಗಿ ಒಂದು ಪಂಚಾಯಿತಿಯಲ್ಲಿ ಕನಿಷ್ಠ

5000 ದಿಂದ 7000 ಜನಸಂಖ್ಯೆ ಇರುವಂತೆ ಮಾಡಿದರೆ ಈಗ ಇರತಕ್ಕಂಥ ಪಂಚಾಯಿತಿ 5600 ರಿಂದ ಬಹುತೇಕ ಏಳೆಂಟು ಸಾವಿರವಾಗುವ ಸಾಧ್ಯತೆ ಇದೆ. ಇವತ್ತು ನಾವೆಲ್ಲಾ ಬಹುತೇಕ ಶಾಸಕರು, ಗ್ರಾಮೀಣದ ಬಗ್ಗೆ ಹೆಚ್ಚು ಒತ್ತು ಕೊಟ್ಟು ಅಭಿವೃದ್ಧಿಯಾಗಬೇಕೆಂದು ಹೇಳುವುದು ಸಹಜ. ಅಲ್ಲೂ ಕೂಡ ನಮ್ಮ ಹಸ್ತಕ್ಷೇಪ, ಇವತ್ತು ಸುವರ್ಣ ಗ್ರಾಮವನ್ನು ಮುಂದಿನ ದೃಷ್ಟಿಯನ್ನಿಟ್ಟುಕೊಂಡು ಮಹಾತ್ಮ ಗಾಂಧೀಜಿಯವರ ಕನಸನ್ನು ನನಸು ಮಾಡುವ ದೃಷ್ಟಿಯಲ್ಲಿ ಕುಮಾರ ಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ಅದನ್ನು ಬಹಳ ಗಂಭೀರವಾಗಿ ಪರಿಗಣಿಸಿ ಮುಂದಿನ ದೃಷ್ಟಿಕೋನದಿಂದ ತಂದಂಥದ್ದು. ಇವತ್ತು ನಿಜವಾಗಿಯೂ ಅದು ಸುವರ್ಣ ಗ್ರಾಮವನ್ನು ನೂರಕ್ಕೆ ನೂರಷ್ಟು ಅನುಷ್ಠಾನ ಮಾಡಿದರೆ ದೇಶದಲ್ಲಿ ಮಹಾತ್ಮ ಗಾಂಧೀಜಿಯವರ ಕನಸನ್ನು ನನಸು ಮಾಡಿದಂತಾಗುತ್ತದೆ. ಅದಕ್ಕೆ ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ಈಗ ಪಂಚಾಯಿತಿಗೆ 5–6 ಲಕ್ಷ ಅನುದಾನವನ್ನು ಕೊಡುತ್ತಿದ್ದೀರಿ. 5 ಲಕ್ಷದಲ್ಲಿ ಆ ಪಂಚಾಯಿತಿಯಲ್ಲಿರುವ ಸಿಬ್ಬಂದಿಗಳ ಸಂಬಳ ಅಲ್ಲಿ ಬರುವ ವಿದ್ಯುತ್ ಬಿಲ್ ಕಟ್ಟುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ನಾನು ಹೇಳುವುದೇನೆಂದರೆ ನಮ್ಮ ಶಾಸಕರ ನಿಧಿಯಲ್ಲಿ ಸುವರ್ಣ ಗ್ರಾಮವನ್ನು ಆಯ್ಕೆ ಮಾಡುವುದಕ್ಕೆ ಅಧಿಕಾರವನ್ನು ಕೊಟ್ಟಿದ್ದೀರಿ ಮತ್ತು ಬೇರೆ ಬೇರೆ ಯೋಜನೆಗಳನ್ನೂ ಕೂಡ ಕೊಟ್ಟಿದ್ದೀರಿ. ಪಂಚಾಯಿತಿ ಅಭಿವೃದ್ಧಿಯಾಗಬೇಕೆಂದರೆ ನನ್ನ ದೃಷ್ಟಿಯಲ್ಲಿ ಒಂದು ಪಂಚಾಯಿತಿಗೆ ಒಂದು ವರ್ಷಕ್ಕೆ ಕನಿಷ್ಠ ಒಂದು ಕೋಟಿ ರೂಪಾಯಿಗಳನ್ನು ನೀವು ಮೀಸಲಾಗಿಡಬೇಕು. ಅಂದರೆ ಒಂದು ವರ್ಷಕ್ಕೆ ` 5600 ಕೋಟಿ ಮೀಸಲಾಗಿಟ್ಟರೆ, ಒಂದು ಕೋಟಿ ಒಂದು ಪಂಚಾಯಿತಿಗೆ ಸಿಕ್ಕರೆ ಆ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಹಳ್ಳಿಗಳ ಅಭಿವೃದ್ಧಿ ಖಂಡಿತವಾಗಿ ಆಗುತ್ತದೆ. ಆ ಪಂಚಾಯಿತಿ ವ್ಯಾಪ್ತಿಯಲ್ಲಿ ಬರತಕ್ಕಂತಹ ಎಲ್ಲಾ ಹಳ್ಳಿಗಳ ಅಭಿವೃದ್ಧಿ ಖಂಡಿತ ಆಗುತ್ತದೆ. ಅದು ಶೌಚಾಲಯ ಇರಬಹುದು, ಯಾವುದೇ ಕೆಲಸ ಕಾಮಗಾರಿ ಇರಬಹುದು, ವಿದ್ಯುದೀಕರಣ ಇರಬಹುದು. 1972ನೇ ಇಸವಿಯಲ್ಲಿ ದಿವಂಗತ ದೇವರಾಜ ಅರಸುರವರು ಈ ರಾಜ್ಯದಲ್ಲಿ ಜನತಾ

ವಸತಿ ಯೋಜನೆಯನ್ನು ಜಾರಿಗೆ ತಂದಂತಹವರು. ಅವತ್ತಿನಿಂದ ಇವತ್ತಿನ ತನಕ ಬಹುತೇಕ ಜನತಾ ಕಾಲೋನಿಗಳಲ್ಲಿ ಆ ಗ್ರಾಮಗಳಲ್ಲಿ ವಿದ್ಯುದೀಕರಣ ಇಲ್ಲ, ರಸ್ತೆಗಳು ಇಲ್ಲ, ಚರಂಡಿಗಳು ಇಲ್ಲ. ನಾವೇನಾದರೂ ಶಾಸಕರು ಹೊಸ ಕಾಲೋನಿಗಳಿಗೆ ವಿದ್ಯುದೀಕರಣ ಮಾಡಬೇಕೆಂದು ಕೇಳಿದರೆ, ಎಷ್ಟು ಬೀದಿಗಳಿಗೆ ಬೇಕೆಂದು ನಿಮ್ಮ ಪಂಚಾಯಿತಿಯಲ್ಲಿ ಒಂದು ನಿರ್ಣಯ ಮಾಡಿ ಕೊಡಿ ಎಂದು ಹೇಳುತ್ತಾರೆ. Estimate ಮಾಡಿ ಕೊಟ್ಟ ಮೇಲೆ KEB ಯವರು ನಿಮ್ಮ ಪಂಚಾಯಿತಿಯಿಂದ ಹಣ ಕಟ್ಟಿಸಿ ಕೊಡಿ ಎಂದು ಹೇಳುತ್ತಾರೆ ಪಂಚಾಯಿತಿಗಳು ಒಂದೊಂದು ಹೊಸ ಕಾಲೋನಿಗಳಿಗೆ 20 ಲಕ್ಷ 30 ಲಕ್ಷ ರೂ.ವರೆಗೆ ದುಡ್ಡನ್ನು ಕಟ್ಟಬೇಕೆಂದು ಅವರು ತೀರ್ಮಾನ ಮಾಡುತ್ತಾರೆ. ಗ್ರಾಮ ಪಂಚಾಯಿತಿಗಳು ಅಭಿವೃದ್ಧಿಯನ್ನು ಕಾಣದೆ ಇರುವುದಕ್ಕೆ ಮುಖ್ಯ ಕಾರಣ ಪಂಚಾಯಿತಿಗಳಿಗೆ ಕಡಿಮೆ ಕೊಡುತ್ತಿರತಕ್ಕಂತಹ ಹಣ. ಇದನ್ನು ನಿಭಾಯಿಸಬೇಕು. PDO ಗಳು ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಮಾಡಿ ಪದವೀಧರರಿಗೆ ಅದರ ತರಬೇತಿ ಕೊಟ್ಟು ಪ್ರತ್ಯೇಕ ಮಾಡಿಕೊಂಡು ಹೋದಿರಿ. ಕೆಲವು ಕಡೆ ಕಾರ್ಯದರ್ಶಿಗಳೇನು ಹಿಂದೆ ಕಾರ್ಯನಿರ್ವಹಿಸುತ್ತಿದ್ದರೋ, ಒಂದೇ ಪಂಚಾಯತಿಯಲ್ಲಿ ಕೆಲವು ಕಡೆ ಕಾರ್ಯದರ್ಶಿ ಮತ್ತು PDO ಇಬ್ಬರೂ ಕೆಲಸ ಮಾಡುತ್ತಾರೆ. ಇಬ್ಬರ ಕಾರ್ಯವ್ಯಾಪ್ತಿಯಲ್ಲಿ ಅವರಿಬ್ಬರಿಗೂ ಜಿಜ್ಞಾಸೆ ಇರುತ್ತದೆ. ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ, ರಾಜ್ಯದಲ್ಲಿ ಎಷ್ಟು ಜನ ಕಾರ್ಯದರ್ಶಿಗಳಿದ್ದಾರೆ ಅವರಿಗೆ ಒಂದು ಪ್ರಮೋಷನ್ ಕೊಟ್ಟು PDO ಗಳಾಗಿ ಮಾಡಿ. PDO ಹುದ್ದೆಗಳು ಎಲ್ಲಿ ಖಾಲಿ ಇರುತ್ತವೆ ಅಲ್ಲಿ ವಿಶೇಷ ನೇಮಕಾತಿಗಳನ್ನು ಮಾಡಿ PDO ಗಳಿಗೆ ಕಟ್ಟುನಿಟ್ಟಿನ ಆದೇಶಗಳು ಹಾಗೂ ಕೆಲವು ಷರತ್ತುಗಳನ್ನು ಹಾಕಬೇಕು. ಯಾವುದೇ ಕಳಪೆ ಕಾಮಗಾರಿ ಆದರೆ, ಯಾವುದೇ ಫಲಾನುಭವಿಗಳ ಆಯ್ಕೆಯಲ್ಲಿ ಲೋಪದೋಷಗಳು ಕಂಡು ಬಂದರೆ ನಾವು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವುದನ್ನು ಷರತ್ತು ಹಾಕಿ ಆದೇಶ ಮಾಡಿ. ಅನೇಕ ಒತ್ತಡಗಳಿಂದ ನಿಜವಾದ ಫಲಾನುಭವಿಗಳಿಗೆ ಅಲ್ಲಿ ಅವಕಾಶ ಸಿಗುವುದಿಲ್ಲ. ಎಷ್ಟು ಜನ ಗ್ರಾಮ

ಸಭೆ ಮಾಡಿದ್ದೇವೆಂದು ನಿಮಗೂ ಗೊತ್ತು ನಮಗೂ ಗೊತ್ತು. ಖಂಡಿತವಾಗಿ ಆಗುವುದಿಲ್ಲ. ಗ್ರಾಮ ಸಭೆಗಳಲ್ಲಿ ನಿಜವಾದ ಫಲಾನುಭವಿಗಳನ್ನು ಆಯ್ಕೆ ಮಾಡುವುದಕ್ಕೆ ಖಂಡಿತ ಸಾಧ್ಯವಿಲ್ಲ. ಗ್ರಾಮ ಸಭೆಗಳಲ್ಲಿ ಅದಕ್ಕಿಂತ ಮುಖ್ಯವಾಗಿ ಗ್ರಾಮಸಭೆಗಳ ಜೊತೆಗೆ ಶಾಸಕರುಗಳಿಗೆ ಜವಾಬ್ದಾರಿಯನ್ನು ಕೊಟ್ಟು PDOಗಳಿಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟು ಫಲಾನುಭವಿಗಳ ಪಟ್ಟಿಯನ್ನು ಸರ್ವೇ ಮಾಡಿಸಿ ಹಂತ ಹಂತವಾಗಿ ಸರ್ಕಾರ ಒಂದೇ ಸಾರಿ ನಮಗೆ ಮನೆ ಕೊಡಿ ಎಂದು ಹೇಳುವುದಕ್ಕಾಗುವುದಿಲ್ಲ. ಹಿಂದಿನ ಸರ್ಕಾರದವರೂ ಕೂಡ ಒಂದೊಂದು ತಾಲ್ಲೂಕಿಗೆ ಸಾವಿರಾರು ಮನೆಗಳನ್ನು ಕೊಟ್ಟರು. ಅವು ಅನುಷ್ಠಾನ ಆಗಲಿಲ್ಲ. ಒಂದೊಂದು ಕ್ಷೇತ್ರಕ್ಕೆ 10,000 ಅಥವಾ 12,000 ದಂತೆ ಹಿಂದಿನ BJP ಸರ್ಕಾರದವರು ಕೊಟ್ಟರು. ಅವು ಯಾವು ಕೂಡ ಅನುಷ್ಠಾನವಾಗಲಿಲ್ಲ. ತಾವು ಒಂದು ಪಂಚಾಯಿತಿಗೆ 20 ಮನೆ ಕೊಡುತ್ತೀರಿ, ಒಂದು ಪಂಚಾಯಿತಿಯಲ್ಲಿ 10 ರಿಂದ 20 ಹಳ್ಳಿಗಳು ಬರುತ್ತವೆ. 20 ಬಸವ ವಸತಿ ಯೋಜನೆ ಮನೆಗಳಲ್ಲಿ ಎಷ್ಟು ಹಳ್ಳಿಗಳಿಗೆ ನಾವು ಮನೆ ಕೊಡುವುದಕ್ಕೆ ಸಾಧ್ಯವಾಗುತ್ತದೆ? ಗ್ರಾಮ ಸಭೆ ಮಾಡಿಯೂ 20 ಮನೆ ಕೊಡುವುದಕ್ಕೆ ಸಾಧ್ಯತೆ ಇಲ್ಲ. ಒಂದು ಪಂಚಾಯಿತಿಗೆ ಇಂದಿರಾ ಆವಾಸ್ ಯೋಜನೆ ಮತ್ತು ಬಸವ ಸಮಿತಿ ಯೋಜನೆ ಅಡಿಯಲ್ಲಿ ಕನಿಷ್ಠ 100 ಮನೆಗಳನ್ನು ಒಂದು ಪಂಚಾಯಿತಿಗೆ ಕೊಡುವ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಇದರಿಂದ ಪಂಚಾಯಿತಿ ಅಭಿವೃದ್ಧಿ ಕೆಲಸ ಆಗುತ್ತದೆ. ಹಾಡಿಗಳೂ ಪಂಚಾಯಿತಿ ವ್ಯಾಪ್ತಿಗೆ ಮೆಂಬರ್‌ಶಿಪ್ ಬರುತ್ತದೆ. ಹಾಡಿಗಳಿಗೆ ಎಂದು ಪ್ರತ್ಯೇಕವಾಗಿ ಇಲ್ಲ. ಹಾಡಿಗಳು ಏನು ಮಾಡುತ್ತಾರೆ, ಅಂದರೆ ಪಕ್ಕದ ಜನಸಂಖ್ಯೆಗೆ ಅನುಗುಣವಾಗಿ ವಾರ್ಡ್ ಆಗಿರುತ್ತದೆ. ಕೊನೆಯದಾಗಿ ಒಂದು ಮನವಿಯನ್ನು ಮಾನ್ಯ ಸಚಿವರಲ್ಲಿ ಸಲ್ಲಿಸುತ್ತೇನೆ. ಅವರಿಗೆ ಪೂರ್ಣ ಅರಿವು ಇದೆ. ಪಂಚಾಯಿತಿ ಗ್ರಾಮಗಳನ್ನು ಅಭಿವೃದ್ಧಿ ಮಾಡಬೇಕೆಂಬ ಚಿಂತನೆ ಇದೆ. ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಅಡಿಯಲ್ಲಿ ಒಂದೊಂದು ವಿಧಾನಸಭಾ ಕ್ಷೇತ್ರಕ್ಕೆ 20 ಕಿ.ಮೀ. ಕೊಡುತ್ತೀರಿ, ನಾನು ಕೈ ಮುಗಿದು ಕೇಳಿಕೊಳ್ಳುತ್ತೇನೆ 200 ರಿಂದ 300 ಕಿ.ಮೀ. ವ್ಯಾಪ್ತಿ ಬರುವ ವಿಧಾನಸಭಾ ಕ್ಷೇತ್ರದಲ್ಲಿ 20 ಕಿ.ಮೀ.

ಕೊಟ್ಟರೆ ಹೇಗೆ ಸಾಧ್ಯವಾಗುತ್ತದೆ? ಕನಿಷ್ಠ ಒಂದು ವರ್ಷಕ್ಕೆ 50 ಕಿ.ಮೀ. ರಸ್ತೆಯನ್ನು ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಅಡಿಯಲ್ಲಿ ಕೊಟ್ಟರೆ ಐದು ವರ್ಷಗಳಲ್ಲಿ 250 ಕಿ.ಮೀ. ಮಾಡಿಕೊಂಡು ಬರುವುದಕ್ಕೆ ಸಾಧ್ಯವಿದೆ. ದಯಮಾಡಿ ಅದರ ಬಗ್ಗೆ ಅನುದಾನ ಹೆಚ್ಚಿಗೆ ಮಾಡಿಕೊಡಬೇಕು. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರು ಒಂದು ಮಾತನ್ನು ಹೇಳಿದರು. ಅನ್ನ ಭಾಗ್ಯ ಯೋಜನೆಗೆ ನಮ್ಮ ವಿರೋಧ ಇಲ್ಲ. ವಿತರಣೆಯಲ್ಲಿ ಇರತಕ್ಕಂತಹ ಲೋಪದೋಷಗಳನ್ನು ಸರಿಪಡಿಸಿಕೊಳ್ಳಿ. ಅನ್ನ ಭಾಗ್ಯ ಯೋಜನೆಯಲ್ಲಿ ಒಂದು ವರ್ಷಕ್ಕೆ ಸರ್ಕಾರದಿಂದ ಕೊಡತಕ್ಕಂತಹ ಸಹಾಯಧನ 4350 ಕೋಟಿ ರೂ. ಎಂದು ನೀವು ಘೋಷಣೆ ಮಾಡಿದ್ದೀರಿ. ಅದಕ್ಕೆ ನಾವು ವಿರೋಧ ಮಾಡುವುದಿಲ್ಲ. ಆದರೆ ಯಾರಿಗೆ ತಲುಪಬೇಕು ಅವರಿಗೆ ತಲುಪುವ ಹಾಗೆ ಸೀಮಿತಗೊಳಿಸಿ. ಒಂದು ಕುಟುಂಬಕ್ಕೆ ಇಷ್ಟು ಎಂದು ಸೀಮಿತಗೊಳಿಸಿ ಆ ಉಳಿಕೆ ಹಣವನ್ನು ನೀವು ಇಲ್ಲಿ ಹಾಕಿಕೊಂಡರೆ ಖಂಡಿತವಾಗಿ ಗ್ರಾಮದ ಅಭಿವೃದ್ಧಿ ಮಾಡುವುಕದಕ್ಕೆ ಸಾಧ್ಯವಿದೆ ಎಂದು ಹೇಳಿ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಎರಡು ಗಂಟೆಯವರೆಗೆ ಚರ್ಚೆ ಮಾಡುವುದಕ್ಕೆ ಅವಕಾಶವಿದೆ. ಮಾನ್ಯ ಸಚಿವರಿಗೆ ಊಟದ ನಂತರ ಉತ್ತರ ಕೊಡುವಂತೆ ಹೇಳಿದ್ದೇನೆ ಅವರು ಒಪ್ಪಿಕೊಂಡಿದ್ದಾರೆ. ಎಲ್ಲರಿಗೂ ಒಂದು ಅವಕಾಶ ಕೊಟ್ಟು ಬಿಡೋಣ.

(ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಪರಿಷ್ಕರಿಸಿರುತ್ತಾರೆ.)

ಶ್ರೀ ಬಿ.ಆರ್. ಯಾವಗಲ್ (ನರಗುಂದ):– ಮಾನ್ಯ ಅಧ್ಯಕ್ಷರೆ, ತಾವು ಶಾಸಕರಾಗಿದ್ದಿರಿ, 1983ರವರೆಗೆ ತಾವು ಸಚಿವರಾಗಿದ್ದಿರಿ, ವಿಕೇಂದ್ರೀಕರಣ ವ್ಯವಸ್ಥೆ ಅಸ್ತಿತ್ವಕ್ಕೆ ಬರುವಾಗ ತಾವು ಅದರ ಪ್ರೇಕ್ಷಕರಾಗಿದ್ದಿರಿ. ತಾವು ಮೇಲಿನ ಮನೆಯಲ್ಲಿದ್ದಿರಿ. ಅಧ್ಯಕ್ಷರೆ, ಒಂದು ಪ್ರಶ್ನೆ ಬಂದಿತು. ಈ ಪಂಚಾಯತ್ ರಾಜ್ ಸಂಸ್ಥೆಗಳನ್ನು, ಇದರ ಅಧಿಕಾರವನ್ನು ಕಾಲಾಂತರದಲ್ಲಿ ಬಹಳ ನಿಶ್ಶಕ್ತಿ ಮಾಡಿದೆವು ಎನ್ನುವಂತಹ ಒಂದು ಅಭಿಪ್ರಾಯ ಬಂದಿತು. ನಿನ್ನೆ ಮಾನ್ಯ

ರಮೇಶ್‌ಕುಮಾರ್‌ರವರು ಹೇಳಿದ ಮಾತಿನ ನಾನು ಧ್ವನಿಗೂಡಿಸುತ್ತೇನೆ. ಅವರು ಹೇಳಿದರು ಹೌದು ಮಂಡಲ ಪಂಚಾಯಿತಿಗಳಿಗೆ ನಾಮಕರಣ ಮಾಡಿ ನಾವು ಕೆಲ ಮಟ್ಟಿಗೆ ಅದರ ಪಾವಿತ್ರ್ಯತೆ ಏನಿತ್ತು ಅದನ್ನು ಕಡಿಮೆ ಮಾಡಿದ್ದೇವೆಂದು ಹೇಳಿದ್ದರು. ಅದರ ಜೊತೆ ಇನ್ನೊಂದು ಮಾತನ್ನು ಸೇರಿಸುತ್ತೇನೆ. ಯಾವ ಉದ್ದೇಶದಿಂದ, ಯಾವ ಕಲ್ಪನೆ ಇಟ್ಟುಕೊಂಡು ಈ ಮಂಡಲ ಪಂಚಾಯಿತಿಗಳನ್ನು ಮಾಡಿದರು, ಜಿಲ್ಲಾ ಪರಿಷತ್ತುಗಳನ್ನು ಮಾಡಿದರು ಮತ್ತು ವಿಕೇಂದ್ರೀಕರಣ ವ್ಯವಸ್ಥೆಯನ್ನು ಮಾಡಿದರು ಹಲವಾರು ಅಧಿಕಾರಗಳು ಆ ಮಂಡಲ ಪಂಚಾಯತ್ ವ್ಯಾಪ್ತಿಗೆ ಮಂಡಲ ಪಂಚಾಯಿತಿಯಲ್ಲಿ ಬರುವಂತಹ ಕೆಲಸಕಾರ್ಯಗಳನ್ನು ಅದು ಯಾವುದೇ ಇಲಾಖೆ ಇರಲಿ, ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ, ಜಿಲ್ಲೆಯಲ್ಲಿ ಬರುವಂತಹ ಕೆಲಸಗಳನ್ನು ಮಾಡುವಂತಹ ಅಧಿಕಾರವನ್ನು ಆಗಿನ ಸನ್ನಿವೇಶದಲ್ಲಿ ನೀಡಿದ್ದರು. ಪಿ.ಆರ್. ನಾಯಕ್‌ರವರು ಆಗಿನ ಅಭಿವೃದ್ಧಿ ಕಮಿಷನರ್ ಆಗಿದ್ದರು. ನಂಜುಂಡಪ್ಪನವರು Planning Secretary ಆಗಿದ್ದರು. ಅನೇಕ ರಾಷ್ಟ್ರ ಮಟ್ಟದ ಹಿರಿಯರು ಮತ್ತು ಚಿಂತಕರು ಅದರಲ್ಲಿ ಭಾಗವಹಿಸಿದ್ದರು. ಅವರೆಲ್ಲಾ ಸೇರಿ ಈ ಇಲಾಖೆಗೆ ಈ ಅಧಿಕಾರವನ್ನು ಕೊಡಬೇಕೆಂದು ತೀರ್ಮಾನ ಮಾಡಿ ಅಧಿಕಾರವನ್ನು (devolution) ಕೊಡುವಂತಹ ಪ್ರಕ್ರಿಯೆಯನ್ನು ಮಾಡಿದರು. ಅಸ್ತಿತ್ವಕ್ಕೆ ಬಂದು ಅಧಿಕಾರ ಕೊಡುವಾಗ ಅದರ ಬಗ್ಗೆ ತಕರಾರು ಬಂದಿತು. ಇಷ್ಟು ಅಧಿಕಾರವನ್ನು ನಾವು ಹೇಗೆ ಇಲಾಖೆಯಿಂದ ಬಿಟ್ಟು ಕೊಡುವುದು ಎಂದು. ಆ ಕಾರಣದಿಂದ ಅನೇಕ ಅಧಿಕಾರಗಳನ್ನು ಹಾಗೂ ಕಾರ್ಯಕ್ರಮಗಳನ್ನು ವಾಪಸ್ ಪಡೆಯುವ ಕೆಲಸ ಆಯಿತು. ಆದಾಗ್ಯೂ ಅಧ್ಯಕ್ಷರೆ, ಅವತ್ತು ರಚನೆಯಾದ ಮಂಡಲ ಪಂಚಾಯಿತಿಗಳು ಮತ್ತು ಜಿಲ್ಲಾ ಪರಿಷತ್ತುಗಳು ಸರ್ಕಾರಗಳಾಗಿ ಅಭಿವೃದ್ಧಿ ಕೆಲಸದಲ್ಲಿ ಬಹಳ ಒಳ್ಳೆಯ ಕೆಲಸ ಮಾಡುವ ಸನ್ನಿವೇಶವನ್ನು ನಾವೆಲ್ಲರೂ ನೆನಪಿಸಿಕೊಳ್ಳಬಹುದು. ವ್ಯಾಪ್ತಿ ದೊಡ್ಡದಾಗಿತ್ತು. ಸುಮಾರು 10,000 ಜನಸಂಖ್ಯೆ ವ್ಯಾಪ್ತಿಯನ್ನು ಹೊಂದಿದಂತಹ ಆ ಒಂದು ಘಟಕ ಮಂಡಲ ಪಂಚಾಯಿತಿ. ಇದು ಒಂದು ಅಭಿವೃದ್ಧಿ ಘಟಕ ಆಗಲಿ ಎಂದು ಬಹಳ

ಆಸೆಯಿಂದ ಬದ್ಧತೆಯಿಂದ ಅವನ್ನೆಲ್ಲಾ ಮಾಡಿದ್ದರು. ಮಾನ್ಯ ನಜೀರ್‌ಸಾಬ್‌ರವರು ಒಂದು ಮಾತನ್ನು ಹೇಳುತ್ತಿದ್ದರು. ಹಿಂದೆ ಕೂಡ ನಾನು ಈ ಸದನದಲ್ಲಿ ಹೇಳಿದ್ದೇನೆ. ಅವರು ಇನ್ನೂ ಅನಾರೋಗ್ಯಕ್ಕೆ ಒಳಗಾಗಿರಲಿಲ್ಲ. 3,000 ಮಂಡಲ ಪಂಚಾಯಿತಿಗಳಿದ್ದವು ಮೂರು ಸಾವಿರ ಮಂಡಲ ಪಂಚಾಯಿತಿಗಳಿಗೆ ಭೇಟಿ ಕೊಡುವಂತಹ ಮಹದಾಸೆ ನನಗೆ ಇದೆ ಎಂದು. ಅವರ ಒಂದು ಕಲ್ಪನೆ ಮಾನ್ಯ ಹೆಗಡೆಯವರ ಕಲ್ಪನೆ ಆಗಿನ ಹಿರಿಯ ಸಚಿವರ ಹಾಗೂ ಶಾಸಕರ ಕಲ್ಪನೆ ನಮ್ಮ ಅಧಿಕಾರವನ್ನು ಬಿಟ್ಟು ಕೊಡುವ ಪ್ರಕ್ರಿಯೆಯಲ್ಲಿ ಬಹಳ ಸಂತೋಷದಿಂದ ಪಾಲ್ಗೊಂಡಿದ್ದರು. ಅವರ ಕಲ್ಪನೆ ಹಾಗಿತ್ತು. ಕಾಲಾಂತರದಲ್ಲಿ ಜಿಲ್ಲಾ ಪರಿಷತ್ತುಗಳು ಹೋಗಿ ಅಭಿವೃದ್ಧಿ ಘಟಕಗಳಾಗಿ ಮಂಡಲ ಪಂಚಾಯಿತಿಗಳೇ ಮುಂದುವರೆಯಲ್ಲಿ ಬೆಳೆಯಲಿ ಎನ್ನುವಂತಹ ಒಂದು ಆಸೆ ಇತ್ತು. ಹಾಗಾಗಿ ಇವತ್ತು ನಿನ್ನೆಯದಲ್ಲ ಕಾಲಾಂತರದಲ್ಲಿ ಏನೇನು ಪರಿವರ್ತನೆಗಳು ಆದವು, ಪ್ರಾಥಮಿಕ ಶಿಕ್ಷಣ ಇಲಾಖೆಯವರು, ಆರೋಗ್ಯ ಇಲಾಖೆಯವರು, ಅರಣ್ಯ ಇಲಾಖೆಯವರು, ತೋಟಗಾರಿಕೆ ಇಲಾಖೆಯವರು ಎಲ್ಲಾ ಅಧಿಕಾರಿಗಳನ್ನು ವಾಪಸ್ ತೆಗೆದುಕೊಳ್ಳುವಂಥದ್ದು ಆಗಿ, ಪಂಚಾಯಿತಿಗಳು ಸಣ್ಣ ಗಾತ್ರದ್ದು ಆಗಿ, ಇವತ್ತು ಪಂಚಾಯಿತಿಗಳು NREG ಕೆಲಸ ಕಾರ್ಯಗಳನ್ನು implement ಮಾಡುವಂತಹ ಏಜೆನ್ಸಿಯಾಗಿ ಪರಿವರ್ತನೆಯಾಗಿರುವುದನ್ನು ತಾವು ನೋಡುತ್ತಿದ್ದೀರಿ. ಆ ಕಾಲದಲ್ಲಿ ನಾನು ಒಬ್ಬ ಸಣ್ಣ ಸಚಿವನಾಗಿದ್ದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಈ ಒಂದು ಇಲಾಖೆ ಉದ್ದೇಶವನ್ನು ನಾವು ವಿಶ್ಲೇಷಣೆ ಮಾಡಿದರೆ ಮೂಲಭೂತವಾಗಿ ಹಳ್ಳಿಗಾಡಿನಲ್ಲಿ ವಿಶೇಷವಾಗಿ ಬಡವರು, ಪರಿಶಿಷ್ಟ ವರ್ಗದವರು, ಕೂಲಿಕಾರರು ಅವರನ್ನೆಲ್ಲಾ ಸೇರಿಸಿ ಅಭಿವೃದ್ಧಿಯನ್ನು ಮಾಡುವಂತಹ ದೊಡ್ಡ ಜವಾಬ್ದಾರಿಯನ್ನು ಹೊತ್ತಂತಹ ಒಂದು ಇಲಾಖೆ. ಸುಮಾರು 10,000 ಕೋಟಿ, ಇಲಾಖೆ ಮೂಲಕವೇ 9,000 ಚಿಲ್ಲರೆ ಕೋಟಿ ಹಣವನ್ನು ಖರ್ಚು ಮಾಡುತ್ತೀರಿ. ಹಳ್ಳಿಗಾಗಿ ರೈತರಿಗಾಗಿ ಸುಮಾರು 10,000 ಕೋಟಿ ನೀರಾವರಿ ಇಲಾಖೆಯಿಂದ ಖರ್ಚು ಮಾಡುತ್ತೀರಿ, ಕೃಷಿ ಇಲಾಖೆಯಿಂದ ಐದು ಸಾವಿರ ಕೋಟಿ ರೂ. ಖರ್ಚು ಮಾಡುತ್ತೀರಿ, ಪಶುಸಂಗೋಪನೆ ಇರಬಹುದು, ರೇಷ್ಮೆ

ಇರಬಹುದು, ಹಲವಾರು ಇಲಾಖೆಗಳ ಮೂಲಕ ಸುಮಾರು 30,000 ಕೋಟಿ ಅಷ್ಟು ಹಣವನ್ನು ಗ್ರಾಮೀಣಾಭಿವೃದ್ಧಿಗೆ ತಾವು ಖರ್ಚು ಮಾಡುತ್ತಿದ್ದೀರಿ. ಇವತ್ತು ನಾವು ಇದನ್ನು ಸರಿಯಾಗಿ ಒಂದು ಅಭಿವೃದ್ಧಿ ಘಟಕವಾಗಿ ಅದರ ಕೆಲಸ ಕಾರ್ಯಗಳನ್ನು ಮಾಡಬೇಕಾದರೆ ನಾವು ಇದ್ದಾಗ ಹಿನ್ನಡೆಯಿತು. ಪಂಚಾಯತ್ ರಾಜ್ ಸಂಸ್ಥೆಗಳು ಒಂದು ಘಟಕವಿತ್ತು. ಇದರಲ್ಲಿ Self Employment Programme ಎಂದು ಇತ್ತು. ಇನ್ನೊಂದು Area Development Programme ಎಂದು ಇತ್ತು. ಇದರ ಜೊತೆಗೆ ಇಂಧನ ಹಾಗೂ ಕುಡಿಯುವ ನೀರಿನ ಯೋಜನೆ ಹಾಗೂ ಇತರ ದೊಡ್ಡ ದೊಡ್ಡ ಕಾರ್ಯಕ್ರಮಗಳ ಉಸ್ತುವಾರಿಯನ್ನು ಈ ಇಲಾಖೆ ಮಾಡುತ್ತಿತ್ತು ಮತ್ತು ಜವಾಬ್ದಾರಿಯನ್ನು ಹಿಂದೆ ತೆಗೆದುಕೊಳ್ಳುತ್ತಿತ್ತು. ಇವತ್ತು ಮೂಲಭೂತವಾಗಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ಸಾಕಷ್ಟು ನಾವು ಅಭಿವೃದ್ಧಿಪಡಿಸಿದ್ದೇವೆ. ಅದರಲ್ಲಿ ಯಾವ ಸಂಶಯವೂ ಇಲ್ಲ. ಅದಕ್ಕೆ Special DC level ನವರು Chief Secretary ಆಗಿದ್ದಾರೆ. ಅದರ ಕೆಳಗಡೆ Panchayat Development Officer ಗಳಿದ್ದಾರೆ. Class II ಹುದ್ದೆಯಾದ Executive Officer ಗಳಿದ್ದಾರೆ. ಆದುದರಿಂದ ಇಂದು ಸಿಬ್ಬಂದಿ ಕೊರತೆಯಿದೆಯೆಂದು ನಾನು ಹೇಳುವುದಿಲ್ಲ. ಇವತ್ತು ಆ PDO ಗಳಿಗೆ ಸಹಾಯ ಮಾಡುವುದಕ್ಕೆ technical hands ಇದ್ದಾರೆ. ಅವರಿಗೆ ಮಾರ್ಗದರ್ಶನ ನೀಡಲು Secretary ಇದ್ದಾರೆ, clerk ಗಳಿದ್ದಾರೆ, waterman ಗಳಿದ್ದಾರೆ, Bill Collectors ಇದ್ದಾರೆ, ಹೀಗೆ ಎಲ್ಲಾ ಸಿಬ್ಬಂದಿಗಳಿದ್ದಾರೆ, ಯಾವುದೂ ಕೊರತೆಯಿಲ್ಲ. ಈ NREG ಯಂಥ ಯೋಜನೆಯನ್ನು ಜಾರಿಗೊಳಿಸುವುದಕ್ಕೆ ಕಾಯಕ ಬಂಧು ಎಂದು ಹೇಳಿ ಮತ್ತೆ ಇಪ್ಪತ್ತು ಜನರ ಮೇಲೆ ಒಬ್ಬರು ಇದ್ದಾರೆ. ಹೀಗಾಗಿ ಯಾವುದೇ ಸಿಬ್ಬಂದಿ ಕೊರತೆಯಿಲ್ಲ. ಆದರೆ ದುರ್ದೈವದಿಂದ ಇಷ್ಟೆಲ್ಲಾ ಇದ್ದರೂ ಇಲಾಖೆಯಲ್ಲಿ ಬಹಳಷ್ಟು ಗೊಂದಲವಿದೆ. ಯಾರು ಯಾವಾಗ ಏನು ಮಾಡಬೇಕು ಎಂದು ಹೇಳುವಂಥ ಒಂದು ಯೋಜನೆಯಾಗಲಿ, ಅದರೊಳಗೆ ಒಂದು ಪದ್ಧತಿಯಾಗಲಿ ಬೆಳೆದು ಬರದೇ ಇರುವಂಥ ಸನ್ನಿವೇಶವನ್ನು ನಾವು ನೋಡುತ್ತೇವೆ. ಇವತ್ತು ಉದಾಹರಣೆಗೆ ಒಂದು ಅಂದಾಜನ್ನು ಮಾಡಬಹುದು. ಆ ಅಂದಾಜು

ಮಾಡುವುದಕ್ಕೆ ಒಬ್ಬರು ಜೆ.ಇ. ಯೋ, ಎ.ಇ.ಇ. ಯವರೋ ಬರುತ್ತಾರೆ. ಅವರು ಇ.ಓ. ಗಳಿಗೆ submit ಮಾಡುತ್ತಾರೆ, ಅದಕ್ಕೆ PDO ಗಳ ಸಹಿ ಬೇಕು. ಅದನ್ನು ಮಾಡುವುದಕ್ಕೆ technical assistants ಇರುತ್ತಾರೆ. ಅವರೆಲ್ಲರೂ ಇದನ್ನು ತೆಗೆದುಕೊಂಡು ಕಡೆಗೆ CEO ಹತ್ತಿರ ಹೋಗುತ್ತಾರೆ. ಅಲ್ಲಿ ಹೋದಮೇಲೆ scrutiny ಏನು ಮಾಡುತ್ತಾರೋ ಗೊತ್ತಿಲ್ಲ. ಆದರೆ ಅದನ್ನು ad hoc of basic ಮೇಲೆ ಕ್ರಮಬದ್ಧವಾಗಿ ಮಾಡದಂಥದ್ದನ್ನು ನಾವು ನೋಡುತ್ತೇವೆ. ಆ ಒಂದು ಕೆಲಸವನ್ನು ಮಾಡುವುದರ ಜೊತೆಗೆ ಕೆಲಸ ಮಾಡುವವರಿಗೆ ಬದ್ಧತೆಯಿರಬೇಕು ಮತ್ತು ಗ್ರಾಮೀಣಾಭಿವೃದ್ಧಿಯಲ್ಲಿ ನಂಬಿಕೆಯನ್ನಿಟ್ಟುಕೊಂಡಿರಬೇಕು. ಬಹುತೇಕ ಈಗ ನೀವೇನು ಕೆ.ಪಿ.ಎಸ್.ಸಿ. ಮೂಲಕ PDO ಗಳನ್ನು select ಮಾಡಿದ್ದೀರೋ ಅವರಿಗೆ training ಕೊಟ್ಟರೆ ಅವರು ಒಳ್ಳೆಯ ಅಧಿಕಾರಿಗಳಾಗಿ ಹೊರಹೊಮ್ಮುವುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಮೇಲಧಿಕಾರಿಗಳನ್ನು ಇಂದು ನಾವು ನೋಡುತ್ತಿದ್ದೇವಲ್ಲ, E.O. ಗಳಿರುತ್ತಾರೆ, Engineer ಗಳಿರುತ್ತಾರೆ, ಪಶು ಸಂಗೋಪನಾ ಇಲಾಖೆಯಿಂದ ಬಂದವರಿರುತ್ತಾರೆ, ಕೆಲವರು ಮಾತ್ರ ಮೇಲಧಿಕಾರಿಗಳಾಗಿ ಇಲಾಖೆಯವರೇ ಇರಬಹುದು, ಇವರೆಲ್ಲರ ಮೂಲ ಧೋರಣೆಗಳಲ್ಲಿ, ಇವರಿಗೆ ಮೂಲಭೂತ ಕಲ್ಪನೆಗಳಲ್ಲಿ ಅಭಿವೃದ್ಧಿಪರವಾದಂಥ ಚಿಂತನೆಯಿರುವುದಿಲ್ಲ. ತಾವು CEO ಹತ್ತಿರ ಹೋಗುತ್ತೀರಿ. ಬಹುತೇಕ CEO ಮಟ್ಟದಲ್ಲಿ ಆ ಇಲಾಖೆಯಿಂದಲೇ ಬಡ್ತಿಯಾಗಿ ಬಂದು ಅನುಭವ ಪಡೆದ ತದನಂತರ ಮೇಲಿನ ಹುದ್ದೆಗಳಿಗೆ ಬಂದಿರುವವರು ಬಹಳ ಕಡಿಮೆಯಿರುತ್ತಾರೆ. ಅವರಲ್ಲೇ ಇರುವಂಥ ಕೆ.ಎ.ಎಸ್. ಮತ್ತು ಐ.ಎ.ಎಸ್. ಅಧಿಕಾರಿಗಳೇನಿರುತ್ತಾರೆ ಅವರುಗಳಿಗೆ ಆಡಳಿತ ಮಾಡುವಂಥ ವಿಷಯದಲ್ಲಿ ಅನುಭವವನ್ನು ಪಡೆದು ಅಂಥ ನೈಪುಣ್ಯತೆಯನ್ನು ಹೊಂದಿರುತ್ತಾರೆ. ಮುಖ್ಯವಾಗಿ ಆ ಇಲಾಖೆಗೆ ಹೋಗುವವರಿಗೆ ಅಲ್ಲಿಯೇ ಅವರು ತರಬೇತಿಯನ್ನು ಹೊಂದಬೇಕು. ಅಲ್ಲಿ ನೇಮಕಾತಿಯಾಗಿ ಆ ಕೆಲಸದಲ್ಲಿಯೇ ಅವರು ಮುಂದುವರೆದು ಗ್ರಾಮೀಣಾಭಿವೃದ್ಧಿಯ ಮೂಲ ಕಲ್ಪನೆ ಏನಿತ್ತೋ ಆ ರೀತಿಯಲ್ಲಿ ಅಭಿವೃದ್ಧಿಯನ್ನು ಮಾಡಿಕೊಳ್ಳುವಂಥ ಮತ್ತು ಅದನ್ನು ಈಡೇರಿಸುವಂಥ ಶಕ್ತಿ

ಮತ್ತು ಅನುಭವವಿರುವಂಥ ಶಕ್ತಿಯಾಗಬೇಕು. ಅದಕ್ಕಾಗಿ E.O.ಗಳನ್ನು ನೇರ ನೇಮಕಾತಿ ಮೂಲಕ ತೆಗೆದುಕೊಂಡು ಅವರನ್ನು ಅದೇ ಇಲಾಖೆಯಲ್ಲಿ ಮುಂದುವರೆಸುವಂಥ ಕೆಲಸವಾಗಬೇಕು. ಇನ್ನು ಈಗ ನಾವು ಅನೇಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಕಾರ್ಯಗತ ಮಾಡುತ್ತಿದ್ದೇವೆ. ವಿಶೇಷವಾಗಿ ಗ್ರಾಮೀಣ ಉದ್ಯೋಗ ಭರವಸೆ ಯೋಜನೆ. ಈ ಯೋಜನೆಯಲ್ಲಿ ಶೇಕಡ 60 ರಷ್ಟು Labour Component ಇದೆ, ಶೇಕಡ 40 ರಷ್ಟು material component ಎಂದು ಇದೆ. ದುರ್ದೈವದಿಂದ ಹೇಳಬೇಕೆಂದರೆ, ನಾವೆಲ್ಲಾ ಬಹಳ ದೊಡ್ಡ ದೊಡ್ಡ ಎಸ್ಟಿಮೇಟ್‌ಗಳನ್ನು ಮಾಡುತ್ತೇವೆ. ಉದಾಹರಣೆಗೆ ಹೇಳಬೇಕೆಂದರೆ ನನ್ನ ಮತಕ್ಷೇತ್ರದ ಸುಮಾರು 31 ರಿಂದ 32 ಪಂಚಾಯಿತಿಗಳಲ್ಲಿ ಒಂದೊಂದು ಪಂಚಾಯಿತಿಯಲ್ಲಿಯೂ ಸುಮಾರು ಒಂದೊಂದು ಕೋಟಿ ರೂ.ಗಳಷ್ಟು ಎಸ್ಟಿಮೇಟ್‌ಗಳನ್ನು ಮಾಡಿ ಕ್ರಿಯಾ ಯೋಜನೆ ತಯಾರಿಸಿದ್ದೇವೆ. ಬಹಳಷ್ಟು ಯೋಜನೆಗಳನ್ನು ತಯಾರು ಮಾಡಿಸಿದ್ದೆವು. ಒಂದು ಪಂಚಾಯಿತಿಯಲ್ಲಿ ಸುಮಾರು ಆರು ಕೋಟಿ ರೂ.ಗಳ ಎಸ್ಟಿಮೇಟ್‌ಅನ್ನು ಮಾಡಲಾಗಿತ್ತು. ಆದರೆ ಖರ್ಚಾಗಿದ್ದು ಎಷ್ಟು ಎಂದು ತಾವು ಕೇಳಿದರೆ, ಆರು ಕೋಟಿ ರೂ.ಗಳಷ್ಟು ಮಾಡಿದ್ದು, ಅದು ನಲವತ್ತು ಲಕ್ಷ ರೂ.ಗಳವರೆಗೂ ಕೂಡ ಹೋಗಲಿಲ್ಲ. ಕೆಲವೊಂದು ಕಡೆ ಬಹುತೇಕವಾಗಿ ಸರಾಸರಿ 30 ರಿಂದ 40 ಲಕ್ಷ ರೂ.ಗಳನ್ನು ಮಾತ್ರ ಖರ್ಚು ಮಾಡುವುದಕ್ಕೆ ಸಾಧ್ಯವಾಯಿತು. ಇದಕ್ಕೆ ಮೂಲಭೂತವಾಗಿ ಹಲವಾರು ಕಾರಣಗಳು ಅಡ್ಡಿ ಬರುತ್ತವೆ. ನಾವೇನು ಕ್ರಿಯಾ ಯೋಜನೆಗಳನ್ನು ಮಾಡುತ್ತೇವೋ ಅದರ ಉದ್ದೇಶ ಸಫಲವಾಗಬೇಕು. ಈಗ ಉದ್ಯೋಗ ಭರವಸೆ ಯೋಜನೆಯ ಉದ್ದೇಶವೇನೆಂದರೆ, ಕೃಷಿ ಕಾರ್ಮಿಕರಿಗೆ ಮತ್ತು ಹಳ್ಳಿಗಾಡಿನಲ್ಲಿರತಕ್ಕಂಥ ಜನರಿಗೆ ಉದ್ಯೋಗವಿಲ್ಲದಿದ್ದಾಗ ಅವರಿಗೆ ಕೆಲಸವನ್ನು ಕೊಡುವುದಕ್ಕಾಗಿ ಈ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಇದು ಮೊದಲೇ ಇತ್ತು, NREP (National Rural Employment Programme) ಎಂದು ಇತ್ತು, NREP (National Rural Employment Programme) ಎಂದು ಇತ್ತು. ಈಗ ಈ ಒಂದು ಕಾರ್ಯಕ್ರಮವಿದೆ. ಆದರೆ ದುರ್ದೈವದಿಂದ ಯಾವಾಗ ಅತಿ ಹೆಚ್ಚು

ಕೆಲಸ ಕೃಷಿ ಕಾರ್ಮಿಕರಿಗೆ ಇರುತ್ತದೋ, ಇದರಿಂದಾಗಿ ಯಾರೊಬ್ಬರು ಕೃಷಿ ಕಾರ್ಮಿಕರು ಆ ಸಂದರ್ಭದಲ್ಲಿ ಈ ಯೋಜನೆಯಲ್ಲಿ ಕೆಲಸ ಮಾಡುವುದಕ್ಕೆ ಸಿಗುವುದಿಲ್ಲವೋ ಅಂಥ ಸಂದರ್ಭದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ಹೋಗುತ್ತಾರೆ. ಮಾರ್ಚ್, ಏಪ್ರಿಲ್ ಅಥವಾ ಮೇ ತಿಂಗಳುಗಳಲ್ಲಿ ನಾವು ಈ ಯೋಜನೆಯನ್ನು ಅನುಷ್ಠಾನ ಮಾಡುವುದಿಲ್ಲ. ನಾವು ಯೋಜನೆಯನ್ನು ಅನುಷ್ಠಾನ ಮಾಡುವುದಕ್ಕೆ ಹೋಗುವುದು ನವೆಂಬರ್, ಡಿಸೆಂಬರ್, ಜನವರಿ ಅಥವಾ ಜೂನ್ ತಿಂಗಳಲ್ಲಿ ಮಾಡಿ ನಮ್ಮ ಟಾರ್ಗೆಟ್ ಮುಟ್ಟಬೇಕು. ನಾವೇನು ಕ್ರಿಯಾ ಯೋಜನೆಯಲ್ಲಿ ಟಾರ್ಗೆಟ್ ನಿಗದಿಪಡಿಸಿರುತ್ತೇವೋ ಅದನ್ನು ಮುಟ್ಟಿಸಬೇಕು. ನಾವು ಹೇಳುತ್ತೇವೆ, ಎಷ್ಟಪ್ಪಾ ನೀವು ಹೋಗಿ ಕೆಲಸ ಮಾಡಿಸಿ, ಜನರಿಗೆ ಕೆಲಸ ಕೊಡಿ ಎಂದು ನಾವು ಹೇಳುತ್ತೇವೆ. NMR ಹಾಕಿಸಿ, ಜನರಿಗೆ ಕೆಲಸ ಕೊಡಿ ಎಂದು ಹೇಳುತ್ತೇವೆ. ಕೃಷಿ ಕಾರ್ಮಿಕರು ಕೆಲಸಕ್ಕೆ ಬರುವುದಿಲ್ಲ, ಬೇರೆ ಕೆಲಸಗಾರರು ಬರುವುದಿಲ್ಲವೆಂದು ಹೇಳುತ್ತಾರೆ. ಇನ್ನು ಫೆಬ್ರವರಿಯಲ್ಲೋ ಅಥವಾ ಮಾರ್ಚ್‌ನಲ್ಲೋ ನಿಮ್ಮ ಅಕೌಂಟ್ಸ್ ಬಂದ್ ಮಾಡುತ್ತೀರಿ. ಅಷ್ಟರೊಳಗೆ ಏನು ಎರಡ್ಮೂರು ತಿಂಗಳುಗಳಲ್ಲಿ ಕೆಲಸವಾಗಿರುತ್ತದೋ ಅದಕ್ಕೆ ಹಣದ ಪೇಮೆಂಟ್ ಮಾರ್ಚ್‌ನಲ್ಲೋ ಅಥವಾ ಏಪ್ರಿಲ್‌ನಲ್ಲೋ ಆಗುತ್ತದೆ. ಮುಂದೆ ಎರಡ್ಮೂರು ತಿಂಗಳುಗಳು ಇವರು ಕೆಲಸವನ್ನೇ ಕೊಡುವುದಿಲ್ಲ. ಅಲ್ಲಿ ಕೆಲಸವನ್ನೂ ಕೊಡುವುದಿಲ್ಲ. ಇಲ್ಲಿ ಕೆಲಸವೂ ಆಗುವುದಿಲ್ಲ. ಹೀಗಾಗಿ ಆ ಹಣ ಖರ್ಚಾಗದೆ ಕೃಷಿ ಕಾರ್ಮಿಕರಿಗೆ ಸಿಗದೆ 60% ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಬಹುತೇಕ ಇದು ತಮಗೆಲ್ಲರಿಗೂ ಗೊತ್ತಿದೆ. ಅನೇಕ ಕಾರಣಗಳಿಂದ ಇವತ್ತು ಕೃಷಿ ಕಾರ್ಮಿಕರ ಕೊರತೆ ಹಳ್ಳಿಗಾಡಿನ ಪ್ರದೇಶದಲ್ಲಿದೆ. ಈ ಕೊರತೆಯ ಪರಿಣಾಮವೇ ಇದರ ಮೇಲಾಗಿದೆ. ಕೆಲಸ ಬೇಕು ಎಂದು ಬರುವವರು ಕೆಲಸ ಮಾಡುವುದಕ್ಕೆ ಅವರಿಗೆ ಎಷ್ಟರಮಟ್ಟಿಗೆ ಮನಸ್ಸಿರುತ್ತದೋ ಗೊತ್ತಿಲ್ಲ. ಅವರು ಬಂದವರು ನೀವು ಹಾಗೆಯೇ ನಮಗೆ ಸಂಬಳ ಕೊಟ್ಟುಬಿಡಿ ಎಂದು ಬರುತ್ತಾರೆ. ಏನು wages ಇರುತ್ತದೋ ಆ wages ಅನ್ನು ನಮಗೆ ಕೊಟ್ಟುಬಿಡಿ, ಅದರಲ್ಲಿ ಬೇಕಾದರೆ ನೀವು ಒಂದಷ್ಟು ತೆಗೆದುಕೊಳ್ಳಿ, ನಾವು

ಒಂದಷ್ಟು ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ನೀವು ಇಷ್ಟು ಕೆಲಸವನ್ನು ಮಾಡಲೇಬೇಕೆಂದು ನಿಮಯಗಳನ್ನು ತಾವೇನು ಕಡ್ಡಾಯ ಮಾಡಿದ್ದೀರಿ, ಆ ನಿಯಮಗಳ ಪ್ರಕಾರ ಕೆಲಸ ಮಾಡುವುದಕ್ಕೆ ಅವರು ತಯಾರಿರುವುದಿಲ್ಲ. ಒಂದು ಸಲಹೆಯನ್ನು ನಿಮಗೆ ಕೊಡುತ್ತೇನೆ. ನಮ್ಮ ಸ್ನೇಹಿತರೊಬ್ಬರು ಒಂದು ಕೋಟಿ ರೂ.ಗಳನ್ನು ಬ್ಲಾಕ್ ಡೆವಲಪ್‌ಮೆಂಟ್‌ಗಾಗಿ ಕೊಡಿ ಎಂದು ಹೇಳಿದರು. ನಾನು ಅದನ್ನು ನಂಬುತ್ತೇನೆ. ಇವತ್ತು ಅಭಿವೃದ್ಧಿಯಾಗಬೇಕೆಂದರೆ ದುಡ್ಡು ಬೇಕು. ಆ ದುಡ್ಡು ಯಾವ ಮೂಲದಿಂದ ಎನ್ನುವುದರಲ್ಲಿ, ಸಮಾಜ ಕಲ್ಯಾಣ ಇಲಾಖೆಯಿಂದ ಇಷ್ಟು, ಗ್ರಾಮೀಣಾಭಿವೃದ್ಧಿಯಿಂದ ಇಷ್ಟು, ಮತ್ತೊಂದು ಇಲಾಖೆಯಿಂದ ಇಷ್ಟು, ಪಿಡಬ್ಲ್ಯೂಡಿ ಇಲಾಖೆಯಿಂದ ಇಷ್ಟು, ಇವತ್ತೇನು 22.5% ಎಸ್‌ಸಿ/ಎಸ್‌ಟಿ ವರ್ಗಕ್ಕೆ ಖರ್ಚು ಮಾಡಬೇಕೆಂದು ಬರುವುದು, ಹೀಗೆ ಎಲ್ಲಾ ಸೇರಿ ಅಲ್ಲೊಂದು ಓಣಿಯಲ್ಲಿ ಇಷ್ಟು ಮಾಡುವುದು, ಇಲ್ಲೊಂದು ಓಣಿಯಲ್ಲಿ ಇಷ್ಟು ಮಾಡುವುದು, ಬೇರೆ ಬೇರೆ ಮಾಡುವುದು, ಹೀಗಾಗಿ ಅಪೂರ್ಣವಾಗಿ ಯಾವ ಗ್ರಾಮಗಳನ್ನು ಸರಿ ಮಾಡುವುದಕ್ಕೆ ಆಗುತ್ತಿಲ್ಲ. ಹೀಗಾಗಿ ಆ ಹಣವನ್ನು ನೇರವಾಗಿ ಕೊಡಬೇಕು, ಇಲ್ಲದಿದ್ದರೆ ಶೇ.40 ರಷ್ಟು ಹಣವನ್ನು ಉಪಯೋಗ ಮಾಡಿ. ನಾವೇನು ಶೇ. 40 ರಷ್ಟರ ಹಣದಲ್ಲಿ ಶೇ.75 ಭಾಗ ಕೇಂದ್ರ ಸರ್ಕಾರದ್ದು ಇರುತ್ತದೆ, ಶೇ.25 ಭಾಗ ರಾಜ್ಯ ಸರ್ಕಾರದ್ದು ಇರುತ್ತದೆ. ಆ 25% ಬರುವಾಗ ಇನ್ನೂ 50% ಕೂಡಿಸಿ ಶೇ.40 ರಷ್ಟು ಇರುವುದನ್ನು ತೆಗೆದುಕೊಂಡು ಇನ್ನಷ್ಟು ಜಾಸ್ತಿ ಕೆಲಸ ಮಾಡಿ, ಆ ಹಣವನ್ನು ಉಪಯೋಗ ಮಾಡಿ. ಸ್ವಲ್ಪ ಉದಾರವಾಗಿ ಆ ಕಾಂಕ್ರೀಟೋ, ಮತ್ತೊಂದು ಕೆಲಸವೋ, ಒಟ್ಟಾರೆ ಹಳ್ಳಿಗಳಲ್ಲಿ ಆಗಬೇಕಾದ ಕೆಲಸವನ್ನು ಮಾಡುವುದಕ್ಕೆ ತಾವೆಲ್ಲಾ ಅನುಮತಿ ನಿಯಮವನ್ನು ಪಾಲಿಸಬಹುದು. ಅದರ ಸದುಪಯೋಗವನ್ನು ಮಾಡಿಕೊಳ್ಳಬಹುದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಿಂದೆ ಎನ್‌ಆರ್‌ಇಪಿ ಯೋಜನೆ ಇತ್ತು. ಈ ಯೋಜನೆಯ ಹಣವನ್ನು ಸ್ಕೂಲ್ ಬಿಲ್ಡಿಂಗ್ ಕಟ್ಟುವುದಕ್ಕೂ ಕೂಡ ಹಿಂದೆ ಉಪಯೋಗ ಮಾಡುತ್ತಿದ್ದೆವು. ಸಣ್ಣ ಪ್ರಮಾಣದಲ್ಲಿ ನೀರಾವರಿ ಯೋಜನೆಗಳನ್ನು ಕೂಡ ಅನುಷ್ಠಾನ ಮಾಡುವುದಕ್ಕೆ ಹಣವನ್ನು ಉಪಯೋಗ ಮಾಡಿದ್ದೆವು. ಹೀಗೆ

ತಾವು ಕೂಡ ಇಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆನ್ನುವ ಮಾತನ್ನು ಹೇಳಬಯಸುತ್ತೇನೆ. ಇನ್ನೂ ಹಲವಾರು ಸಲಹೆಗಳನ್ನು ಕೊಡುವುದಿದೆ. ಆದರೆ ಸಮಯಾವಕಾಶವಿಲ್ಲದಿರುವುದರಿಂದ ಹೆಚ್ಚು ಹೇಳುವುದಕ್ಕಾಗುತ್ತಿಲ್ಲ. ಇವತ್ತು ವಿಶೇಷವಾಗಿ ಗ್ರಾಮಗಳಲ್ಲಿ ತಾವೇನು ಅಳತೆ ಹಾಕಿ ಆಸ್ತಿ ರೆಕಾರ್ಡ್‌ಗಳನ್ನು ಕೊಡುತ್ತಿದ್ದೀರಿ ಅದನ್ನು ಕಂಪ್ಯೂಟರ್ ಮೂಲಕ ಕೊಡುವಂಥ ಒಂದು ಆಜ್ಞೆಯನ್ನು, ನಿಯಮಗಳನ್ನು ಜಾರಿಗೆ ತಂದಿದ್ದೀರಿ. ಗ್ರಾಮಗಳಲ್ಲಿ ರೈತರಿಗೆ ಎಷ್ಟು ತೊಂದರೆಯಾಗುತ್ತಿದೆಯೆಂದರೆ; ಒಬ್ಬರು ಕೂಡ ಅವರ ರೆಕಾರ್ಡ್‌ಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಏಕೆಂದರೆ ಅದರ ಬಗ್ಗೆ ಸರ್ವೆಯನ್ನು ಮಾಡಿಲ್ಲ, ಅದರ ಬಗ್ಗೆ ದಾಖಲಾತಿಯೂ ಇಲ್ಲ. ತಹಶೀಲ್ದಾರ್ ಕಡೆ ಹೋದರೆ, ಪಿ.ಡಿ.ಓ. ಕಡೆ ಹೋಗು ಎನ್ನುತ್ತಾರೆ. ಪಿ.ಡಿ.ಓ. ಹತ್ತಿರ ಹೋದರೆ, ಇಲ್ಲಾ ನಮಗೆ ಸಿ.ಇ.ಓ. ರವರು ಹೇಳಬೇಕು ಎಂದು ಹೇಳುತ್ತಾರೆ. CEO ಅವರನ್ನು ಕೇಳಿದರೆ, ಅವರು ಸರ್ಕಾರದಿಂದ ಇನ್ನೂ ಬಂದಿಲ್ಲ, computer generate ಆಗುವುದಿಲ್ಲವೆಂದು ಹೇಳುತ್ತಾರೆ. ಇದನ್ನು ಸರಳೀಕರಣಗೊಳಿಸುವುದು ಬಹಳ ಆಗತ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದು ಅತಿ ತುರ್ತಾಗಿ ಮಾಡುವಂತಹ ಕೆಲಸವಾಗಿದೆ. ದಯವಿಟ್ಟು ಮಾನ್ಯ ಸಚಿವರು ಈ ಕೆಲಸವನ್ನು ಮಾಡಬೇಕು. ಮಾನ್ಯ ಸಚಿವರ ಗ್ರಾಮದ ಬಗ್ಗೆ ಮಾನ್ಯ ಜೆ.ಟಿ. ಪಾಟೀಲ್ ಮತ್ತು ಬಹಳಷ್ಟು ಮಾನ್ಯ ಸದಸ್ಯರುಗಳು ಹೇಳಿದರು. ಅದೊಂದು ಆದರ್ಶ ಗ್ರಾಮ, ನಿಜ. ಆ ರೀತಿ ಹಣವನ್ನು ಪೂಲ್ ಮಾಡಿ ಮಾಡಿಸುವಂತಹ ಕೆಲಸವಾಗಬೇಕು. ಅವರೆಲ್ಲ ಮಾಡಿಸಿದ್ದಾರೆ. ಊರಿಗೆ ಊರೆಲ್ಲ ಕಾಂಕ್ರೀಟ್‌ಕರಣವಾಗಿದೆ, ಸ್ಮಶಾನವಾಗಿದೆ, ಮತ್ತೊಂದಾಗಿದೆ ಎಂದು ಹೇಳಿದರು. ಅದು ಮಾನ್ಯ ಕೆ.ಹೆಚ್. ಪಾಟೀಲರ ಕಾಲದಿಂದ ಆಗಿ ಬಂದಿರುವುದು. ನಮ್ಮ ಕಲ್ಪನೆ, ನಮ್ಮ ಉದ್ದೇಶ ಈ ರೀತಿಯಾಗಿ ಬೆಳೆದು ಬರಬೇಕು. ವರ್ಷಾವರ್ಷ ಹತ್ತು ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿ ನಾವು ಇನ್ನೂ ಅವ್ಯವಸ್ಥೆಯಾಗದ ರೀತಿಯಲ್ಲಿ ಮಾಡುವುದಕ್ಕೆ ತಾವು ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಬೇಕು. ಅವನ್ನೆಲ್ಲಾ converse ಮಾಡಿ, ತಾವು ಎಲ್ಲಾ ಕಾರ್ಯಕ್ರಮಗಳನ್ನು ಸೇರಿ ಮಾಡೋಣ

ಎಂದು ಹೇಳುತ್ತೀರಿ. ಆ ಕೆಲಸವಾಗುತ್ತಿಲ್ಲ. ತಾವು ಆ ಕೆಲಸವನ್ನು ಮಾಡಬೇಕೆಂದು ಹೇಳಿ ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ತಿಮ್ಮರಾಯಪ್ಪನವರೆ, ತಾವು ಪ್ರಾರಂಭ ಮಾಡಿ ಐದು ನಿಮಿಷದಲ್ಲಿ ಮುಗಿಸಿ.

ಶ್ರೀ ಕೆ.ಎಂ. ತಿಮ್ಮರಾಯಪ್ಪ (ಪಾವಗಡ):– ಮಾನ್ಯ ಅಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ವಂದಿಸುತ್ತಾ ಈ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯಿತಿಗಳ ಆಡಳಿತವನ್ನು ನಿರ್ವಹಣೆ ಮಾಡುವಂತಹ ವಿಚಾರದಲ್ಲಿ ಸ್ಥಳೀಯ ಗ್ರಾಮ ಮಟ್ಟದಲ್ಲಿ ಕೆಲಸ ಮಾಡುವಂತಹ ನೌಕರರೇನಿದ್ದಾರೆ ಅವರು ಬದ್ಧತೆಯಿಂದ ಕೆಲಸ ಮಾಡುವುದಕ್ಕೆ ಸ್ಫೂರ್ತಿ ಬರುವಂತಹ ರೀತಿಯಲ್ಲಿ ಸರ್ಕಾರ ಅವರಿಗೆ ತರಬೇತಿಯನ್ನು ಕೊಟ್ಟು ಕೆಲಸ ಮಾಡಿಸುವಂತಹ ಒಂದು ವಿಧಾನವಾಗಬೇಕೆನ್ನುವುದು ನನ್ನ ಸಲಹೆ. ಕಾರಣವೇನೆಂದರೆ ಪಂಚಾಯಿತಿಯಲ್ಲಿ ಕೆಲಸ ಮಾಡುವವರು ಬಹಳಷ್ಟು ಬೇಜವಾಬ್ದಾರಿತನದಿಂದ ಕೆಲಸ ನಿರ್ವಹಿಸತಕ್ಕಂಥ ವಿಚಾರ ಇದುವರೆಗೂ ನಾವೆಲ್ಲರೂ ಕಂಡಿರುವಂತಹ ಸತ್ಯ. ಅಲ್ಲಿ ನೀರು ಮತ್ತು ನೈರ್ಮಲ್ಯ ವಿಚಾರದಲ್ಲಿ ಕಾಣುತ್ತಿದ್ದೇವೆ, ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಅನೇಕ ಜನ ಗುತ್ತಿಗೆ ನೌಕರರಿಗೆ ಕೊಡತಕ್ಕಂಥ ಸಂಬಳ ಸಾರಿಗೆ ಏನಿದೆ, ಅದು ಬಹಳಷ್ಟು ದಿನಗಳಿಂದ ಅವರ ಸೇವೆಗೆ ಸರಿಯಾದ ಸಂಬಳವನ್ನು ಕೊಡದಿರುವುದನ್ನು ಕೇವಲ ನನ್ನ ತಾಲ್ಲೂಕಿನಲ್ಲಿ ಅಲ್ಲ, ನನ್ನ ಜಿಲ್ಲೆಯಲ್ಲೂ ಕಾಣುತ್ತಿದ್ದೇನೆ. ಹತ್ತು ಅಥವಾ ಒಂದು ವರ್ಷದಿಂದ ಅವರಿಗೆ ಸಂಬಳವನ್ನು ಪಾವತಿ ಮಾಡದಿರುವಂತಹ ಅನೇಕ ಪಂಚಾಯಿತಿಗಳು ನಮ್ಮ ಗಮನಕ್ಕೆ ಈಗಾಗಲೇ ಬಂದಿವೆ. ಆ ದೃಷ್ಟಿಯಿಂದ ಅಲ್ಲಿ ಕೆಲಸ ಮಾಡಿಸುವುದಕ್ಕೆ ತುಂಬಾ ತೊಂದರೆಯಾಗುತ್ತಿದೆ. ಮಾನ್ಯ ಸಚಿವರು ಈ ನಿಟ್ಟಿನಲ್ಲಿ ಬಹಳ ಜಾಗೃತಿ ವಹಿಸಬೇಕಾಗುತ್ತದೆ.

ಕುಡಿಯುವ ನೀರು ವಿಚಾರದಲ್ಲಿ ಬಯಲು ಸೀಮೆ ಪ್ರದೇಶಗಳಾದ ತುಮಕೂರು, ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿರಬಹುದು, ಈ ಬಯಲುಸೀಮೆ ಪ್ರದೇಶದಲ್ಲಿ fluoride ಅಂಶ ಜಾಸ್ತಿ ಇದೆ. ಈಗಾಗಲೇ ನಮ್ಮ ತಾಲ್ಲೂಕಿನಲ್ಲಿ 1.5 ಪಿಪಿ ಯಿಂದ 3.5 ಪಿಪಿ ಯವರೆಗೆ fluoride ಅಂಶ ಜಾಸ್ತಿಯಾಗಿ ಅಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿರುವ ಹಿನ್ನೆಲೆಯಲ್ಲಿ ಮಾನ್ಯ ಸಚಿವರು ನಿನ್ನೆ ನಿಮಗೆ Ro plantಗಳನ್ನು ಹೆಚ್ಚಿಗೆ ಕೊಟ್ಟಿದ್ದೇವೆಂದು ಹೇಳಿ ನಮಗೆ ಮನದಟ್ಟು ಮಾಡಿದರು. ಆ Ro plantಗಳು ಏಕೆ ಹೆಚ್ಚಿಗೆ ಬಂದವು ಎಂದರೆ ಅಲ್ಲಿ ಅತೀ ಕಡಿಮೆ ಮಳೆ ಬೀಳುವುದಿದ್ದು, ಆ ಪ್ರದೇಶಗಳಲ್ಲಿ fluoride ಅಂಶ ಜಾಸ್ತಿಯಾಗಿ ಅನೇಕ ರೋಗರುಜಿನಗಳು ಬಂದು ಬಹಳ ಕಷ್ಟ ಅನುಭಸುತ್ತಿರುವಂತಹ ಜನರಿಗೆ ತಾತ್ಕಾಲಿಕವಾಗಿ ಕೊಟ್ಟಿರುವಂತಹ ಈ ಪ್ಲ್ಯಾಂಟ್‌ಗಳಿಂದ ನಮಗೆ ಉಪಯೋಗವಾಗುವುದು ಬಹಳ ಕಡಿಮೆ. ಆ ಕಾರಣಕ್ಕೋಸ್ಕರ ಶಾಶ್ವತವಾಗಿ ಯಾವುದಾದರೂ ನದಿ ಮೂಲಗಳಿಂದ ಯೋಜನೆಗಳನ್ನು ಸಿದ್ಧಪಡಿಸಬೇಕು ಎನ್ನುವ ವಿಚಾರವಿದೆ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ. ನದಿ ಮೂಲಗಳಿಂದ ಕೊಡತಕ್ಕಂಥ ಯೋಜನೆಯನ್ನು ತ್ವರಿತವಾಗಿ ಜಾರಿ ಮಾಡತಕ್ಕಂಥ ಕೆಲಸವನ್ನು ಮಾಡಬೇಕು. ನಮ್ಮ ಜಿಲ್ಲೆಯ ಅನೇಕ ಜನರು ಇವತ್ತು ನೀರಿಗೋಸ್ಕರ ದೊಡ್ಡ ಹೋರಾಟವನ್ನು ಮತ್ತು ತಾಲ್ಲೂಕಿನಲ್ಲಿ ಪಾದಯಾತ್ರೆಯನ್ನು ಮಾಡಿದ್ದಾರೆ. ಈಗಾಗಲೇ ಆ ಭಾಗದ ಜನರು ಜನಜಾಗೃತಿ ಮೂಡಿಸುವ ಮೂಲಕ ಕುಡಿಯುವ ನೀರಿನ ಅರಿವನ್ನು ಉಂಟು ಮಾಡುವ ಕೆಲಸವನ್ನು ಮಾಡಿದ್ದಾರೆ. ಕುಡಿಯುವ ನೀರನ್ನು ನಮಗೆ ಪ್ಲ್ಯಾಂಟ್‌ಗಳ ಮೂಲಕ ಕೊಡುತ್ತಿರುವುದರಲ್ಲಿ ಸರಿಯಾಗಿ ಸರ್ವಿಸ್ ಆಗುತ್ತಿಲ್ಲ. ಅದನ್ನು ಕೊಟ್ಟಿರುವಂತಹ ಯಾವ ಏಜೆನ್ಸಿಗಳಿದ್ದಾರೆ, ಅವರಿಗೆ ತಾಲ್ಲೂಕು ಮಟ್ಟದಲ್ಲಿ ಒಂದು ಕಛೇರಿ ತೆರೆದು, ಅಲ್ಲಿ technical ವ್ಯವಸ್ಥೆಯನ್ನು ಮಾಡುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಏಕೆಂದರೆ ಅಲ್ಲಿ ಮೆಷಿನ್‌ಗಳು ಕೆಟ್ಟುಹೋಗಿ ವಾರಗಟ್ಟಲೆ ದುರಸ್ತಿ ಮಾಡದೆ ನೀರನ್ನು ಕೊಡದಿರುವಂತಹ ಅನೇಕ ಪ್ರಕರಣಗಳು ನಮ್ಮ ಗಮನಕ್ಕೆ ಬಂದಿದೆ. ಈಗ ಹೊಸದಾಗಿ ಎರಡು ಸಾವಿರ ಪ್ಲ್ಯಾಂಟ್‌ಗಳನ್ನು ಕೊಡುವಂತಹ ವಿಚಾರ

ಸರ್ಕಾರದ ಮುಂದೆ ಇದೆ. ಇನ್ನು ಉಳಿಕೆಯಿರುವಂತಹ ಪ್ಲ್ಯಾಂಟ್‌ಗಳನ್ನು ಸರ್ಕಾರ ಸಮುದಾಯದ ವಂತಿಗೆಯನ್ನು ಸೇರಿಸಿ ಮಾಡುವಂತೆ ಈಗಾಗಲೇ ಒಂದು ಆದೇಶ ಹೊರಡಿಸಿದೆ. ಇದುವರೆಗೂ ಸರ್ಕಾರವೇ ನಿರ್ಮಾಣ ಮಾಡಿ ಈಗ ಸಮುದಾಯದ ಮುಖಾಂತರ ನಿರ್ಮಾಣ ಮಾಡಿ ಎಂದು ಹೇಳುವಂತಹ ವಿಚಾರ ಏನಿದೆ, ಅದರ ಬಗ್ಗೆ ಸಚಿವರು ಕೂಲಂಕಷವಾಗಿ ಪರಿಶೀಲಿಸಿ ಹಿಂದೆ ಕೊಟ್ಟದ್ದಂತಹ ಮಾದರಿಯಲ್ಲಿ ಈ ವರ್ಷ ಕೂಡ ಅನುಷ್ಠಾನ ಮಾಡಬೇಕೆಂದು ಮನವರಿಕೆಯನ್ನು ಮಾಡುತ್ತೇನೆ.

(ಈ ಹಂತದಲ್ಲಿ ಉಪಾಧ್ಯಕ್ಷರಾದ ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಈಗ ಕುಡಿಯುವ ನೀರಿಗೋಸ್ಕರ ಪಂಪ್, ಮೋಟಾರ್ ಮತ್ತು ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ಸಂಬಂಧಪಟ್ಟಂತೆ ಒಂದು ಹೊಸ ಆದೇಶವನ್ನು ಕೊಟ್ಟಿದ್ದಾರೆ. ದಿನಾಂಕ: 16.06.2014ರಲ್ಲಿ ಹೊರಡಿಸಿದಂತಹ ಆದೇಶವನ್ನು ಹಿಂಪಡೆದು ಬೋರ್‌ವೆಲ್ ಕೊರೆಸುವುದಕ್ಕೆ ಒಂದು ಪ್ರತ್ಯೇಕವಾದ ಆದೇಶವನ್ನು ಕೊಡಬೇಕಾಗುತ್ತದೆ. ಏಕೆಂದರೆ ಬೋರ್‌ವೆಲ್ ಕೊರೆದ ಮೇಲೆ ಬೇರೆ ಎಸ್ಟಿಮೇಟ್ ತಯಾರು ಮಾಡುವುದಕ್ಕೆ ಅನುಕೂಲವಾಗುತ್ತದೆ. ಯಾವ ಭಾಗದಲ್ಲಿ ಬೋರ್‌ವೆಲ್ ಪಾಯಿಂಟ್ ಸಿಗುತ್ತದೆಂದು ಗೊತ್ತಾಗುವುದಿಲ್ಲ. ಅದಕ್ಕೋಸ್ಕರ ಮೊದಲು ಬೋರ್‌ವೆಲ್ ಡ್ರಿಲ್ ಮಾಡಿ ನಂತರ ಅದಕ್ಕೆ ಸಂಬಂಧಪಟ್ಟ ಎಸ್ಟಿಮೇಟ್ ತಯಾರು ಮಾಡಿ ಟೆಂಡರ್ ಕರೆಯಬೇಕೆಂದು ಈ ಮೂಲಕ ತಮ್ಮಲ್ಲಿ ಮನವಿ ಮಾಡುತ್ತೇನೆ.

ಉಪಾಧ್ಯಕ್ಷರು:- ಇನ್ನು ಬಹಳ ಜನ ಮಾತನಾಡುವವರಿದ್ದಾರೆ, ತಾವು ಮುಗಿಸಿ.

ಶ್ರೀ ಕೆ.ಎಂ. ತಿಮ್ಮರಾಯಪ್ಪ:- NREGA ಯೋಜನೆಯ ವಿಚಾರದಲ್ಲಿ ನಮ್ಮ ಭಾಗದಲ್ಲಿ ಆಗಿರುವಂತಹ ಸಮಸ್ಯೆ ಬಗ್ಗೆ ಹೇಳುತ್ತೇನೆ. ಇದು ಬಹಳಷ್ಟು ಗಂಭೀರವಾದಂತಹ ವಿಚಾರ. 2008ರಲ್ಲಿ ತುಮಕೂರು ಜಿಲ್ಲೆಯಲ್ಲಿ

ಎನ್‌ಆರ್‌ಇಜಿ ಕಾಮಗಾರಿ ಮಾಡುವುದಕ್ಕೆ ಪ್ರಾರಂಭವಾಯಿತು. 2008ರಲ್ಲಿ ಯಾವುದೇ ಪ್ರೊಗ್ರೆಸ್ ಕಾಣುವುದಕ್ಕೆ ಸಾಧ್ಯವಾಗಲಿಲ್ಲ. ಅಧಿಕಾರಿಗಳ ಒತ್ತಡದ ಮೇರೆಗೆ ಮತ್ತು ಅಲ್ಲಿನ ಜನರ ಪ್ರೋತ್ಸಾಹದಿಂದ 2009 ಮತ್ತು 2014 ರಲ್ಲಿ ಈ ಕಾಮಗಾರಿಯನ್ನು ಪ್ರಾರಂಭ ಮಾಡಿದರು. ಆ ಕಾಮಗಾರಿಯಲ್ಲಿ ಅನೇಕ ಲೋಪದೋಷಗಳು ಕಂಡುಬಂದರೂ ಸಹ ಉತ್ತಮ ಕಾಮಗಾರಿಯಾಗಿದ್ದು, 2010–11ರಲ್ಲಿ ಆದಂತಹ ಬಹಳಷ್ಟು ಕಾಮಗಾರಿಗಳಿಗೆ ಹಣವನ್ನು ಕೊಡುವುದಕ್ಕೆ ಆಗಿಲ್ಲ. ಕಾರಣವೇನೆಂದರೆ ಆ ಒಂದು ಸಂದರ್ಭದಲ್ಲಿ ಅನೇಕ ಕಾಮಗಾರಿಗಳು ಎಂದರೆ ಶಾಲಾಕಾಲೇಜು ಬಿಲ್ಡಿಂಗ್‌ಗಳು, ಶಾಲಾ ಕಾಲೇಜು ಕಾಪೌಂಡ್‌ಗಳು, ದೊಡ್ಡ ದೊಡ್ಡ ಚರಂಡಿಗಳು, ಉತ್ತಮವಾದಂತಹ ಚೆಕ್ ಡ್ಯಾಂಗಳನ್ನು ನಿರ್ಮಾಣ ಮಾಡುವುದಕ್ಕೆ ಏಕಾಏಕಿ ತಡೆ ಕೊಟ್ಟಂತಹ ಸಂದರ್ಭದಲ್ಲಿ ಮತ್ತು ಜನರ ಮತ್ತು ಕೂಲಿಕಾರರರ ಒತ್ತಾಯದ ಮೇರೆಗೆ third party inspection ಎಂದು ಒಂದು ತಂಡವನ್ನು ಕಳುಹಿಸಿ, ಅವರ ಮೂಲಕ ಆ ಕಾಮಗಾರಿಗಳನ್ನು ಗುರುತಿಸಿ ಸುಮಾರು 16 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಆ ತಂಡ ಆದೇಶವನ್ನು ಕೊಟ್ಟಿತ್ತು. ಇದುವರೆಗೂ ಸಹ ಅವರು ಗುರುತಿಸಿದ ಕಾಮಗಾರಿಗಳಿಗೆ ಹಣ ಬಿಡುಗಡೆಯಾಗಿಲ್ಲ. ಅಲ್ಲಿ ಪರಿಸ್ಥಿತಿ ಹೇಗಿದೆ ಎಂದರೆ ಅಲ್ಲಿ ಕೆಲಸ ಮಾಡಿರುವಂತಹ ಬಡವರು ಮತ್ತು material supply ಮಾಡಿರುವವರ ಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಇವತ್ತು ಅದಕ್ಕೆ ಸಂಬಂಧಪಟ್ಟಂತೆ ಹೈಕೋರ್ಟ್‌ನಲ್ಲಿ ಮೊಕದ್ದಮೆಗಳು ದಾಖಲಾಗಿವೆ ಮತ್ತು 13 ಲಕ್ಷ ಹಣವನ್ನು ಕೂಡ ಬಿಡುಗಡೆ ಮಾಡಿದ್ದಾರೆ. ಅದರಲ್ಲಿ NMR component ಮಾತ್ರ ಕೊಟ್ಟು material component ಹಾಗೆ ಉಳಿಸಿಕೊಂಡಿದ್ದಾರೆ. ಅಲ್ಲಿ NMR ಮಾಡಿರುವಂತಹ ಕೂಲಿ ಕಾರ್ಮಿಕರಿರಬಹುದು, material supply ಮಾಡಿರುವಂತಹವರಿಗೆ ಹಣ ಬರಬೇಕಾಗಿದೆ. ನಮ್ಮ ಅಧಿಕಾರಿಗಳು ಕಾರ್ಡುದಾರರ ಬಗ್ಗೆ ಸರಿಯಾದ ಮಾಹಿತಿ ಇರಲಿಲ್ಲವೆಂದು ಹೇಳುತ್ತಿದ್ದಾರೆ, ಅವತ್ತು ಗ್ರಾಮ ಪಂಚಾಯಿತಿಯವರೇ ಕಾರ್ಡುದಾದರರಿಗೆ ಕಾರ್ಡುಗಳನ್ನು ಕೊಟ್ಟಿರುವುದು. ನಾವ್ಯಾರೂ ಕೂಡ ಕಾರ್ಡು ಕೊಡುವುದಕ್ಕೆ ಸಾಧ್ಯವಿಲ್ಲ. ಗ್ರಾಮ

ಪಂಚಾಯಿತಿ ಕೊಟ್ಟಿರುವಂತಹ ಕಾರ್ಡುದಾರರಿಗೆ ಅಂದು ಮಾಡಿರುವಂತಹ ಕೆಲಸಕ್ಕೆ ಹಣವನ್ನು ಬಿಡುಗಡೆ ಮಾಡಬೇಕು. ಈ ರೀತಿ ಅನೇಕ ಒಳ್ಳೊಳ್ಳೆಯ ಕಾಮಗಾರಿಗಳನ್ನು ಮಾಡಿಸಿರುವುದಕ್ಕೆ ಹಣವನ್ನು ಕೊಡದಿದ್ದರೆ ಅವರ ಪರಿಸ್ಥಿತಿ ಏನಾಗಬೇಕು? ಅದರ ಬಗ್ಗೆ ಇಲ್ಲಿ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ. ಆ ದೃಷ್ಟಿಯಿಂದ ಕಾಮಗಾರಿಯನ್ನು ಮಾಡಿರುವವರಿಗೆ ಹಣವನ್ನು ಕೊಡುವಂತಹ ಕೆಲಸವನ್ನು ಕೂಡಲೇ ಸರ್ಕಾರ ಮಾಡಬೇಕಾಗುತ್ತದೆ. ಕಳೆದ ಸಾಲಿನಲ್ಲಿ ಮಾಡಿರುವಂತಹ ಕಾಮಗಾರಿಗೆ ಕೇವಲ ನಮ್ಮ ತಾಲ್ಲೂಕಿನಲ್ಲಿ ಆರು ಕೋಟಿ ರೂಪಾಯಿಗೆ ಸೀಮಿತವಾಗಿ ಕೆಲಸವನ್ನು ಮಾಡಿದ್ದಾರೆ. ಅಲ್ಲಿ ಉತ್ತಮವಾದಂತಹ ಗುಣಮಟ್ಟದ ಕಾಮಗಾರಿಯನ್ನು ಮಾಡಿದರೂ ಸಹ ಸಂಬಂಧಪಟ್ಟಂತಹ ಇಲಾಖಾಧಿಕಾರಿಗಳು 25 ಸಾವಿರ man-days ಆಗಿರುವಂತಹ ಪಂಚಾಯಿತಿಗಳನ್ನು social audit ಎಂದು ಮಾಡಿಸಿ ನಮ್ಮ ತಾಲ್ಲೂಕಿನಲ್ಲಿ ಒಂದು ಪಂಚಾಯಿತಿಯನ್ನು ಗುರುತಿಸಿದ್ದಾರೆ. ಅಲ್ಲಿ ಉತ್ತಮವಾದಂತಹ ಕಾಮಗಾರಿ ಆಗಿದೆ. ಅದನ್ನು ಬಹಳ ಜನ ಬಂದು ನೋಡಿದ್ದಾರೆ. ಈಗಲೂ ಸಹ ತನಿಖೆ ಮಾಡಿ ನೋಡಿಸಬಹುದು. ಆ ಒಂದು ತಾಲ್ಲೂಕಿನಲ್ಲಿ ಕಾಮಗಾರಿ ಮಾಡಿರುವುದರಲ್ಲಿ 1 ಕೋಟಿ 72 ಲಕ್ಷ ರೂಪಾಯಿ ಹಣ ಪಾವತಿ ಆಗಿಲ್ಲ. ಹಣ ಪಾವತಿ ಮಾಡಿಸುವ ವಿಚಾರದಲ್ಲಿ ಸರ್ಕಾರಕ್ಕೆ ತಾವು ಸೂಚನೆಯನ್ನು ಕೊಡಬೇಕು. ಮಾನ್ಯ ಸಚಿವರು ಗಮನಹರಿಸಿ ಕೂಡಲೇ ಕಳೆದ ಸಾಲಿನ ಹಣವಾದ ಒಂದು ಕೋಟಿ 72 ಲಕ್ಷ ಹಣವನ್ನು ಬಿಡುಗಡೆ ಮಾಡಿಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ. 2010 ಮತ್ತು 2011 ರ ಎರಡು ಸಾಲಿನ ಕಾಮಗಾರಿ ಹಣವನ್ನು ಕೂಡಲೇ ಸರ್ಕಾರ ಬಿಡುಗಡೆ ಮಾಡಿಸಬೇಕೆಂದು ಮನವಿ ಮಾಡುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಂಕಳ ಸುಬ್ಬ ವೈದ್ಯ (ಭಟ್ಕಳ):- ಮಾನ್ಯ ಉಪಾಧ್ಯಕ್ಷರೆ, ಜೈಕಾದಲ್ಲಿ 18 ಕಿ.ಮೀ. ಸಿಎಂಜಿಎಸ್‌ವೈನಲ್ಲಿ 20 ಕಿ.ಮೀ ರಸ್ತೆಯನ್ನು ಕೊಟ್ಟಿದ್ದಾರೆ, ಬಹಳ ಸಂತೋಷ. ನಮ್ಮ ವಿಧಾನಸಭಾ ಕ್ಷೇತ್ರದ ಬಗ್ಗೆ ಹೇಳಬೇಕೆಂದರೆ, ಈಗಲೂ ಹತ್ತು ಪಂಚಾಯಿತಿ ವ್ಯಾಪ್ತಿಯಲ್ಲಿ, ಈ

ಪಂಚಾಯಿತಿಗಳಿಗೆ 6 ತಿಂಗಳಿಗೆ ಮಾತ್ರ ಬರಲು ಸಾಧ್ಯವಾಗುತ್ತದೆ. ಅಲ್ಲಿ ಸಂಪರ್ಕ ಸೇತುವೆ ಇಲ್ಲದೇ ಇರುವುದರಿಂದ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಜೈಕಾದಲ್ಲಿ ವರ್ಷಕ್ಕೆ ಒಂದೆರಡು ಬ್ರಿಡ್ಜ್‌ಗಳನ್ನು ಮತ್ತೆ ಅದೇ ರೀತಿಯಲ್ಲಿ ಸಿಎಂಜಿಎಸ್‌ವೈನಲ್ಲಿ ಒಂದೆರಡು ಬ್ರಿಡ್ಜ್‌ಗಳನ್ನು ತೆಗೆದುಕೊಳ್ಳುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ಇಲ್ಲವಾದರೆ ಆ ಜನರು ಪಂಚಾಯಿತಿಗೆ ಬರುವುದೇ 6 ತಿಂಗಳಿಗೆ. 6 ತಿಂಗಳು ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಅವರಿಗೆ ಮೂಲಭೂತ ಸೌಕರ್ಯವೆಂದರೆ ಬ್ರಿಡ್ಜ್ ಆಗಿರುತ್ತದೆ. ಅದೇ ರೀತಿಯಲ್ಲಿ ಹತ್ತು ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಈಗಲೂ ಒಂದೊಂದು ಮಜಿರೆಗೆ ಕರೆಂಟ್ ಇಲ್ಲ. ನಮ್ಮ ತಾಲ್ಲೂಕಿನಲ್ಲೇ ಕರೆಂಟ್ ಉತ್ಪಾದನೆ ಮಾಡಿ ಇಲ್ಲಿಗೆ ಕೊಡುತ್ತೇವೆ. ಅಲ್ಲಿ ಕರೆಂಟ್ ಇಲ್ಲ, ಹಾಗಾಗಿ ಆ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಕ್ಕೆ ಎಷ್ಟು ಕೊರತೆ ಇದೆಯೆಂಬುದನ್ನು ತಿಳಿದುಕೊಂಡು ಅನುದಾನ ಕೊಡಬೇಕು. ಇಡೀ ರಾಜ್ಯದಲ್ಲಿ 6,525 ಪಂಚಾಯಿತಿಗಳಿಗೆ 10 ಲಕ್ಷ ರೂ.ಗಳು, 15 ಲಕ್ಷ ರೂ.ಗಳನ್ನು ಕೊಡುವಂಥದ್ದು ಆಗಬಾರದು. ಅಲ್ಲಿ ಬೇಕಾಗುವಂಥ ಕೆಲಸಕ್ಕೆ ಅನುಗುಣವಾಗಿ ಅನುದಾನವನ್ನು ಒದಗಿಸಿಕೊಡಬೇಕೇ ವಿನಃ ಆ ರೀತಿಯಾಗಿ ಕೊಟ್ಟರೆ ಆ ಪಂಚಾಯಿತಿಗಳಿಗೆ ನ್ಯಾಯ ಕೊಟ್ಟಹಾಗೆ ಆಗುವುದಿಲ್ಲ. ಆ ಹಳ್ಳಿಗೆ 66 ವರ್ಷಗಳಾದರೂ ಸಂಪರ್ಕವಿಲ್ಲವೆಂದರೆ, ಅವರೇ ಮರವನ್ನು ಕಡಿದು ತೂಗುಯ್ಯಾಲೆಯನ್ನು ಮಾಡಿಕೊಂಡು ಅದರ ಮೇಲೆ ಹೋಗುವಂಥ ಕೆಲಸ ಮಾಡುತ್ತಾರೆ. ಅವರಿಗೆ ಯಾವುದೇ ಬಸ್‌ಗಳಾಗಲಿ, ಯಾವುದೇ ಸಂಪರ್ಕಗಳಿರುವುದಿಲ್ಲ. ಅಲ್ಲಿ ಒಂದು ಬ್ರಿಡ್ಜ್ ಬಿದ್ದು 3 ವರ್ಷಗಳಾಯಿತು, ಅದನ್ನು ಸರ್ಕಾರದ ಗಮನಕ್ಕೆ ತಂದರೂ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಅದಕ್ಕಾಗಿ ಜೈಕಾದಲ್ಲಿ ಮತ್ತು ಸಿಎಂಜಿಎಸ್‌ವೈದಲ್ಲಿ ಪ್ರತಿ ವರ್ಷ ಎರಡೆರಡು ಬ್ರಿಡ್ಜ್‌ಗಳನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಅದೇ ರೀತಿಯಲ್ಲಿ ಪಂಚಾಯಿತಿಗಳ ವಿಷಯವನ್ನು ಮಾತನಾಡಬೇಕೆಂದರೆ, ಬಹಳ ಬೇಸರವಾಗುತ್ತದೆ. ಅದು ಗ್ರಾಮ ಪಂಚಾಯಿತಿಗಳಿರಬಹುದು, ತಾಲ್ಲೂಕು ಪಂಚಾಯಿತಿಗಳಿರಬಹುದು, ಜಿಲ್ಲಾ

ಪಂಚಾಯಿತಿಗಳಿರಬಹುದು. ಈ ಮಾತನ್ನು ಏಕೆ ಹೇಳುತ್ತೇನೆಂದರೆ, ಒಬ್ಬ ಸದಸ್ಯರಿಗೆ ತಿಂಗಳಿಗೆ 250 ರೂ.ಗಳ ಗೌರವಧನವನ್ನು ಕೊಡುವುದು, ಅಂದರೆ ಒಂದು ದಿವಸಕ್ಕೆ 8 ರೂ.ಗಳಾಗುತ್ತದೆ. ಇದು ಬಹಳ ಬೇಜಾರು ಆಗುವ ವಿಷಯವಾಗಿದೆ. ಅದೇ ರೀತಿಯಲ್ಲಿ ಉಪಾಧ್ಯಕ್ಷರಿಗೆ 300 ರೂ.ಗಳನ್ನು ಕೊಡುತ್ತಾರೆ, ಒಂದು ದಿವಸಕ್ಕೆ 10 ರೂ.ಗಳಾಗುತ್ತದೆ, ಮತ್ತೆ ಅಧ್ಯಕ್ಷರಿಗೆ 500 ರೂ.ಗಳಂತೆ ಕೊಟ್ಟರೆ ಒಂದು ದಿವಸಕ್ಕೆ 17 ರೂ.ಗಳಾಗುತ್ತದೆ. ಇದು ಒಂದು ರೀತಿಯಲ್ಲಿ ಹೇಳುವುದಕ್ಕೂ ನಾಚಿಕೆಯಾಗುತ್ತದೆ. ಒಂದು ವ್ಯವಸ್ಥೆಯನ್ನು ಮಾಡಿದ ಮೇಲೆ ಅದು 5 ವರ್ಷಗಳವರೆಗೆ ಅಥವಾ ಎರಡೂವರೆ ವರ್ಷಗಳವರೆಗೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುತ್ತಾರೆ, ಅವರಿಗೆ 500 ರೂ.ಗಳನ್ನು ಕೊಟ್ಟರೆ ಏನು ಮಾಡುವುದಕ್ಕೆ ಸಾಧ್ಯ? ಒಬ್ಬ ಪಿ.ಡಿ.ಒ. ಅಥವಾ ಒಬ್ಬ ಸೆಕ್ರೆಟರಿಗೆ ಅಥವಾ ಒಬ್ಬ ಅಟೆಂಡರ್‌ಗೆ ಇಷ್ಟು ಪಗಾರವೆಂದು ಇರುತ್ತದೆ. ಒಬ್ಬ ದಿನಗೂಲಿ ಕಾರ್ಮಿಕನಿಗೆ ಒಂದು salary ಇರುತ್ತದೆ. ಅದೇ ತಾಲ್ಲೂಕು ಪಂಚಾಯಿತಿಗೆ ಬಂದರೆ ಅಧ್ಯಕ್ಷರಿಗೆ ಒಂದು ದಿವಸಕ್ಕೆ 75 ರೂ.ಗಳೆಂದರೆ 2,250 ರೂ.ಗಳ salary ಇದೆ, ಉಪಾಧ್ಯಕ್ಷರಿಗೆ 1,500 ರೂ.ಗಳೆಂದರೆ ಒಂದು ದಿವಸಕ್ಕೆ 50 ರೂ.ಗಳಂತೆ ಇದೆ. ಇದರ ಜೊತೆಗೆ ಸದಸ್ಯರಿಗೆ 750 ರೂ.ಗಳಂತೆ ಅಂದರೆ ಒಂದು ದಿವಸಕ್ಕೆ 25 ರೂ.ಗಳಂತೆ ಇದೆ. ಇದು ಒಂದು ರೀತಿಯಲ್ಲಿ ನಾಚಿಕೆಯಾಗುವಂಥದ್ದು, ಏಕೆಂದರೆ, ಅವರು ಜನರ ಸಲುವಾಗಿ ಹಣವನ್ನು ಕಳೆದುಕೊಂಡು ಆಯ್ಕೆಯಾಗಿ, ಜನರಿಗೋಸ್ಕರ ದುಡಿಯುವವರಿಗೆ ಒಂದು ಮಾನದಂಡ ಇರಬೇಕು. ಅವರಿಗೆ ಉದ್ಯೋಗ ಖಾತ್ರಿ salaryಯನ್ನಾದರೂ ಕೊಡಬೇಕು, ಅಷ್ಟು ಇಲ್ಲವೆಂದರೆ ಇದು ಒಂದು ರೀತಿಯಲ್ಲಿ ಬೇಜಾರಾಗುವಂಥ ಸಂಗತಿಯಾಗಿದೆ. ಇದರ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು.

ಅದೇ ರೀತಿಯಲ್ಲಿ ಜಿಲ್ಲಾ ಪಂಚಾಯಿತಿಗಳನ್ನು ತೆಗೆದುಕೊಂಡರೆ ಅಧ್ಯಕ್ಷರಿಗೆ ಗೌರವಧನ 3,000 ರೂ.ಗಳನ್ನು ಕೊಡುತ್ತಾರೆ, ಅಂದರೆ ಒಂದು ದಿವಸಕ್ಕೆ 100 ರೂ.ಗಳಂತೆ ಆಗುತ್ತದೆ. ಉಪಾಧ್ಯಕ್ಷರಿಗೆ 2,250 ರೂ.ಗಳಂತೆ ಒಂದು ದಿವಸಕ್ಕೆ 75 ರೂ.ಗಳಂತೆ ಕೊಡುತ್ತಾರೆ. ಸದಸ್ಯರಿಗೆ ಗೌರವಧನ 1,500

ರೂ.ಗಳನ್ನು ಕೊಡುತ್ತಾರೆ, ದಿನಕ್ಕೆ 50 ರೂ.ಗಳಾಗುತ್ತದೆ. ಅವರಿಗೆ ಒಂದು ಸಭೆಗೆ ಹೋಗಬೇಕೆಂದರೆ ಒಂದು ಕಿ.ಮೀ.ಗೆ 2 ರೂ.ಗಳನ್ನು ಕೊಡುತ್ತಾರೆ. ಅವರು 250–300 ಕಿ.ಮೀ.ಗಳವರೆಗೂ ಹೋಗಬೇಕಾಗುತ್ತದೆ. ಅವರು ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ, ಅವರಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಪ್ರೋತ್ಸಾಹ ಕೊಡಬೇಕಾಗುತ್ತದೆ. ಒಬ್ಬ ಪಿ.ಡಿ.ಓ.ಗೆ 25,000 ರೂ.ಗಳ ಪಗಾರ ಇದೆ. ಒಬ್ಬ ಅಟೆಂಡರ್‌ಗೆ 14,000 ರೂ.ಗಳ salary ಇದೆ. ಇದು ಬೇಜಾರು ಆಗುವಂಥ ವಿಷಯವಾಗಿದೆ.

ಉಪಾಧ್ಯಕ್ಷರು:– ತಾವು conclude ಮಾಡಿ.

ಶ್ರೀ ಮಂಕಳ ಸುಬ್ಬ ವೈದ್ಯ:– ಮಾನ್ಯ ಉಪಾಧ್ಯಕ್ಷರೆ, ಅವರಿಗೆ ಹೆಚ್ಚಿನ ಸಹಕಾರ ಕೊಡಬೇಕು. ಇನ್ನು ನೀರಿನ ವಿಷಯವಾಗಿ ಹೇಳುವುದಾದರೆ, ಒಂದು ವಿಧಾನಸಭಾ ಕ್ಷೇತ್ರಕ್ಕೆ ಜಿಲ್ಲಾಪಂಚಾಯತ್ through 25 ರಿಂದ 30 ಕೋಟಿ ರೂ.ಗಳು ಬರುತ್ತಿದೆ. ಅದು ಕ್ರಿಯಾ ಯೋಜನೆಯನ್ನು satellite ಆಧಾರದ ಮೇಲೆ ಮಾಡುತ್ತಿದ್ದಾರೆ. ಅದು 0.25, 0.50 ರೀತಿಯಲ್ಲಿ ಮಾಡುತ್ತಿದ್ದಾರೆ. ಅದು ಎಲ್ಲೋ A.C.roomನಲ್ಲಿ ಕುಳಿತುಕೊಂಡು 5 ವರ್ಷಗಳ project ಅನ್ನು ready ಮಾಡಿ, computerಗೆ ಹಾಕಿ ಇಟ್ಟಿದ್ದಾರೆ, ಆ ರೀತಿಯಾಗಬಾರದು. ಅದು ಆಗುವುದರಿಂದ 3 ವರ್ಷ, 4 ವರ್ಷಗಳು ಇಲ್ಲಿ ಕಾಮಗಾರಿ ಟೆಂಡರ್ ಆಗುವುದಕ್ಕೆ ಸಾಧ್ಯವಾಗಲಿಲ್ಲ. ಹಾಗಾಗಿ ಅದನ್ನು ಜನ ಪ್ರತಿನಿಧಿಗಳ ಕ್ರಿಯಾ ಯೋಜನೆಯನ್ನು ಮಾಡಬೇಕು. ಈಗ computerನಲ್ಲಿರುವಂಥದ್ದನ್ನು delete ಮಾಡಿ ಪುನಃ ಹೊಸದಾಗಿ ಕ್ರಿಯಾ ಯೋಜನೆಯನ್ನು ಮಾಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ಎಸ್. ಪಾಟೀಲ್ (ರೋಣ):– ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಬೇಡಿಕೆ ಬಗ್ಗೆ ಅನೇಕ ಸಲಹೆಗಳನ್ನು ಸದನದ ಎಲ್ಲಾ ಹಿರಿಯ ಸದಸ್ಯರು ತಮ್ಮ ತಮ್ಮ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಹೆಚ್ಚಿಗೆ

ಮಾತನಾಡುವುದಕ್ಕೆ ಹೋಗುವುದಿಲ್ಲ. ಒಂದು ಕಡೆ 73ನೇ ಸಂವಿಧಾನದ ತಿದ್ದುಪಡಿಯಾದ ಮೇಲೆ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು, ಅದರಲ್ಲಿ ವಿಶೇಷವಾಗಿ ಗ್ರಾಮ ಪಂಚಾಯಿತಿಯ ಕಾರ್ಯವನ್ನು ಮಾಡುವುದಕ್ಕೆ ಗ್ರಾಮಸಭೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದಾರೆ. ಇವತ್ತಿನ ವಾಸ್ತವ ಸ್ಥಿತಿಯನ್ನು ನಾವೆಲ್ಲಾ ನೋಡಿದಾಗ ಸರ್ಕಾರ ಏನು ಚಿಂತನೆ ಮಾಡಿದೆ, ಅಧಿಕಾರ ವಿಕೇಂದ್ರೀಕರಣ ಮಾಡಿದ ಮೇಲೆ ಅಲ್ಲಿ ಆಗುವಂಥ ಒಂದು ವ್ಯವಸ್ಥೆಯನ್ನು ನೋಡಿದಾಗ, ಏಕೋ ಒಂದು ಸರಿಯಾದ ದಾರಿಯಲ್ಲಿ ಈ ಗ್ರಾಮಸಭೆಗಳು ಸಹ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲವೆಂಬ ವಿಚಾರಕ್ಕೂ ಕೂಡ ಬಂದಂಥ ಅನೇಕ ಸಂದರ್ಭದಲ್ಲಿ ಇವತ್ತು ಗ್ರಾಮಸಭೆಗಳ ವಿಚಾರವಾಗಿ ಒಂದೆರಡು ವಿಚಾರಗಳನ್ನು ನಾನು ಹೇಳಲಿಚ್ಛಿಸುತ್ತಿದ್ದೇನೆ. ಬಹುಶಃ ಈ ಗ್ರಾಮಸಭೆಗಳಿಗೆ ಸರಿಯಾದ ಸಮಯವನ್ನು ನಿಗದಿ ಮಾಡಿಲ್ಲ. ಈ ಗ್ರಾಮ ಸಭೆಗಳು ಅಧಿಕಾರಿಗಳು ಯಾವಾಗ ಬರುತ್ತಾರೆ, ಆಗ ಈ ಗ್ರಾಮ ಸಭೆಗಳನ್ನು ನಡೆಸುವಂಥ ಒಂದು ವ್ಯವಸ್ಥೆ ಇದೆ. ಅದಕ್ಕೆ ನನ್ನ ವಿಚಾರದಲ್ಲಿ ಏನಿದೆಯೆಂದರೆ, ಈ ಗ್ರಾಮಸಭೆಗಳನ್ನು ಸಾಯಂಕಾಲ ನಡೆದರೆ ಒಳ್ಳೆಯದೆಂದು ನನ್ನ ಅಭಿಪ್ರಾಯವಾಗಿದೆ. ಏಕೆಂದರೆ, ಅಲ್ಲಿರುವಂಥ ಜನರ participation ಬಹಳ ಮುಖ್ಯ, ಏಕೆಂದರೆ, ಬೆಳಗಿನ ಜಾವ ಎಲ್ಲಾ ರೈತರು, ರೈತ ಕಾರ್ಮಿಕರು ಎಲ್ಲರೂ ತಮ್ಮ ತಮ್ಮ ಕೆಲಸಗಳಿಗೆ ಹೋಗಿರುತ್ತಾರೆ. ಅವರು ಬರಬೇಕಾದರೆ 4–5 ಗಂಟೆಗಳಾಗುತ್ತದೆ. ಈ ಗ್ರಾಮಸಭೆಗಳಲ್ಲಿ ಎಂಥವರು ಭಾಗವಹಿಸಬೇಕು? ಗ್ರಾಮದಲ್ಲಿರುವಂಥ ಜವಾಬ್ದಾರಿಯುತ ವ್ಯಕ್ತಿಗಳು, ಯಾರು ಯೋಜನೆಗಳನ್ನು ರೂಪಿಸಬೇಕೆಂಬ ವಿಚಾರಗಳಿರುತ್ತವೆ. ಅಂಥವರು ಭಾಗವಹಿಸಿದರೆ, ಆ ಗ್ರಾಮಸಭೆಗಳಿಗೆ ಒಂದು ಮಹತ್ವವಿರುತ್ತದೆ. ಆದರೆ ಬೆಳಿಗ್ಗೆ 10.30 ಗಂಟೆಗೆ, 11.00 ಗಂಟೆಗೆ ಊರಿನಲ್ಲಿ ಯಾವುದೇ ಕೆಲಸ–ಕಾರ್ಯಗಳಿಗೆ ಹೋಗದೇ ಇರುವಂಥ ವ್ಯಕ್ತಿಗಳು ಮಾತ್ರ ಆ ಗ್ರಾಮಸಭೆಗಳಲ್ಲಿ ಭಾಗವಹಿಸುತ್ತಾರೆ. ಬಹುಶಃ ಕಾನೂನಿನಲ್ಲೂ ಸಹ ಈ ಗ್ರಾಮಸಭೆಗಳನ್ನು ಸಾಯಂಕಾಲದ ವೇಳೆಯಲ್ಲೇ ನಡೆಯಬೇಕೆಂಬ ಪ್ರಸ್ತಾಪವಿರುವಂಥ ಸಂದರ್ಭವೂ ಕೂಡ ಇದೆ. ಅದಕ್ಕೆ ವಿಚಾರ ಮಾಡಬೇಕು, ಮತ್ತೆ

ಗ್ರಾಮಸಭೆಗಳು ಇವತ್ತು ಕೇರಳ ರಾಜ್ಯದಲ್ಲಿ ಏನು ಮಾಡುತ್ತಾರೆಂದರೆ, ಗ್ರಾಮ ಪಂಚಾಯಿತಿಯಲ್ಲಿ ಆಗಬೇಕಾಗಿರುವಂಥ ಯೋಜನೆಗಳನ್ನು ಗ್ರಾಮಸಭೆಗಳಲ್ಲಿ ನಿರ್ಧಾರ ಮಾಡುತ್ತಾರೆ. ಗ್ರಾಮದಲ್ಲಿರುವಂಥ ಜನರು ಈ ವರ್ಷ ಗ್ರಾಮ ಪಂಚಾಯಿತಿಯಲ್ಲಿ ಯಾವ್ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆನ್ನುವ ನಿರ್ಧಾರಗಳಿಗೆ ಗ್ರಾಮಸಭೆಗಳನ್ನು ಮಾಡುತ್ತಾರೆ. ಪಂಚಾಯಿತಿಯವರು ಏನು ನಿರ್ಧಾರ ಮಾಡುತ್ತಾರೆ, ಅದನ್ನೇ ಇಡೀ ವರ್ಷ ಆ ಕಾರ್ಯಗಳನ್ನು ಮಾಡುವಂಥದ್ದನ್ನು ಕೂಡ ಕೇರಳ ರಾಜ್ಯದಲ್ಲಿ ಒಂದು ಪದ್ಧತಿ ಮಾಡಿಕೊಂಡು ಬರುತ್ತಿದ್ದಾರೆ. ಇವತ್ತು ಅಂಥದ್ದನ್ನು ಅಳವಡಿಸಿದರೆ ಮಾತ್ರ ಆಗುತ್ತದೆ, ನಾನು ಇನ್ನು ಮುಂದೆ ಹೋಗಿ ಹೇಳುವುದೇನೆಂದರೆ, ಇವತ್ತು ಈ ಗ್ರಾಮಸಭೆಗಳಿಗೆ ಅಷ್ಟು ಮಹತ್ವ ಕೊಟ್ಟಿದ್ದೇವೆ. ಬಹುಶಃ ಇವತ್ತಿನ ದಿವಸ ಜಿಲ್ಲಾ ಮಂತ್ರಿಗಳು, ಶಾಸಕರು ಇಂಥ ಗ್ರಾಮಸಭೆಗಳಲ್ಲಿ ಭಾಗವಹಿಸಬೇಕು. ಇವರು ವರ್ಷಕ್ಕೊಮ್ಮೆ ಕ್ರಿಯಾ ಯೋಜನೆಯನ್ನು ಏನು ಮಾಡುತ್ತಾರೆ. ಈ ಕ್ರಿಯಾ ಯೋಜನೆಯನ್ನು ಮಾಡುವಂಥ ಸಂದರ್ಭದಲ್ಲಿ ಇವರೆಲ್ಲಾ ಭಾಗವಹಿಸಿದರೆ ಇದಕ್ಕೆ ಹೆಚ್ಚಿನ ಮಹತ್ವ ಬರುತ್ತದೆ. ಅವತ್ತು ಸಭೆಗೆ ಬಂದು ಒಂದು ನಿರ್ಧಾರವನ್ನು ಮಾಡಿ, ಒಂದು ಕ್ರಿಯಾ ಯೋಜನೆಯನ್ನು ಮಾಡಿ, ಅದರ ಪ್ರಕಾರ ಇಡೀ ವರ್ಷ ಆ ಕಾರ್ಯಕ್ರಮವನ್ನು ನಡೆಸಿಕೊಂಡು ಹೋಗುವಂಥ ಒಂದು ವ್ಯವಸ್ಥೆ ಆದರೆ ಅದಕ್ಕೆ ಬಹಳ ಮಹತ್ವ ಬರುತ್ತದೆ ಮತ್ತು ಸರ್ಕಾರ ಕೊಟ್ಟಂಥ ಅನುದಾನ ಕೂಡ ಸರಿಯಾಗಿ ಬಳಕೆಯಾಗುತ್ತದೆಂಬ ವಿಚಾರವನ್ನು ನಾನು ಹೇಳಲಿಚ್ಛಿಸುತ್ತೇನೆ. ಅದಕ್ಕೆ ಈ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯಿತಿಗಳು ಇಲ್ಲಿಯವರೆಗೆ ಸಾಕಷ್ಟು ಅನುದಾನವನ್ನು ಕೊಡುವ ಬಗ್ಗೆ ಮಾನ್ಯ ಬಸವರಾಜ ರಾಯರೆಡ್ಡಿಯವರು ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಒಂದು ಕೋಟಿ ರೂ.ಗಳು ಬರುತ್ತದೆಂಬ ವಿಚಾರವನ್ನು ಪ್ರಸ್ತಾಪ ಮಾಡಿದರು. ಆದರೆ ನಮ್ಮ ರಾಜ್ಯ ಸರ್ಕಾರದಿಂದ ಅದಕ್ಕೆ ಬರುವಂಥ ಅನುದಾನವೆಷ್ಟು? ಬಹಳವೆಂದರೆ, ಒಂದೊಂದು ಗ್ರಾಮ ಪಂಚಾಯಿತಿಗೆ 10-12 ಲಕ್ಷವನ್ನು ಜನಸಂಖ್ಯೆಯ ಆಧಾರದ ಮೇಲೆ ಕೊಡುವಂಥ ವ್ಯವಸ್ಥೆ ಒಂದು ಕಡೆ ಇದೆ. 13ನೇ ಹಣಕಾಸು ಯೋಜನೆಯಲ್ಲಿ ಬರುವಂಥ ಅನುದಾನ ಒಂದು ಕಡೆ ಇದೆ. ಈ

ಸಂದರ್ಭದಲ್ಲಿ ನಾನು ಏನು ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ, ಕೇರಳದಲ್ಲಿ ಏನು ವ್ಯವಸ್ಥೆ ಇದೆಯೆಂದರೆ, ತಮ್ಮ ಆಯವ್ಯಯದಲ್ಲಿರುವ ಹಣದಲ್ಲಿ ಶೇಕಡ 33ರಷ್ಟು ದುಡ್ಡನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವ್ಯವಸ್ಥೆಗೆ ಇಡುವಂಥ ಪರಿಸ್ಥಿತಿ ಇದೆ. ನಾವು ಇದನ್ನು ಒಂದು ಕಡೆ ಚಿಂತನೆ ಮಾಡಬೇಕು. ಸನ್ಮಾನ್ಯ ರಾಜೀವ್ ಗಾಂಧಿಯವರು ಕಂಡಂಥ ಕನಸು ಮತ್ತು ಅದನ್ನು ಬಲವರ್ಧನೆ ಮಾಡಬೇಕಾದಂಥ ಸಂದರ್ಭದಲ್ಲಿ, ಯು.ಪಿ.ಎ. ಸರ್ಕಾರ ಆಡಳಿತ ಮಾಡುವಂಥ ಸಂದರ್ಭದಲ್ಲಿ ರೈತರಿಗೆ ಮತ್ತು ರೈತ ಕಾರ್ಮಿಕರಿಗೆ ಬೇಸಿಗೆ ಕಾಲದಲ್ಲಿ ಉದ್ಯೋಗ ಕೊಡಬೇಕು ಎನ್ನುವ ಉದ್ದೇಶದಿಂದ N.R.E.G.A (ನರೇಗಾ) ಯೋಜನೆಯನ್ನು ಈ ರಾಜ್ಯದಲ್ಲಿ ತಂದರು. ಆದರೆ ಬದಲಾದ ಪರಿಸ್ಥಿತಿಯಲ್ಲಿ, ಕೇಂದ್ರದಲ್ಲಿರುವಂಥ ಸರ್ಕಾರ ಮುಂದೆ ಈ ಯೋಜನೆಯನ್ನು ಮುಂದುವರೆಸಿಕೊಂಡು ಹೋಗುತ್ತದೋ, ಇಲ್ಲವೋ ಗೊತ್ತಿಲ್ಲ. ಅದಕ್ಕೆ ಕಡಿವಾಣ ಹಾಕುವಂಥ ವ್ಯವಸ್ಥೆ ಕೂಡ ಇರುವಂಥ ಸಂದರ್ಭವಿದೆ. ಏಕೆಂದರೆ, ನಮಗೆ ಬರತಕ್ಕಂಥ ದೊಡ್ಡನ್ನು ಕೇಂದ್ರ ಸರ್ಕಾರದವರು ಇದುವರೆಗೆ ಬಿಡುಗಡೆ ಮಾಡಿಲ್ಲ. ಯಾವುದೇ ಒಂದು ವಿಚಾರವನ್ನಿಟ್ಟುಕೊಂಡು ಅನುದಾನವನ್ನು ಬಡುಗಡೆ ಮಾಡದಿರುವುದು ಸಂಶಯಾಸ್ಪದಕ್ಕೆ ಕಾರಣವಾಗುತ್ತದೆ. ನಾನು ತಮ್ಮ ಮುಖಾಂತರ ಸನ್ಮಾನ್ಯ ಸಚಿವರಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ಇವುಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು, ರಾಜ್ಯ ಸರ್ಕಾರದಿಂದಲೇ ಹೆಚ್ಚಿನ ದುಡ್ಡನ್ನು ಕೊಡುವಂತಾಗಬೇಕು. ಕಳೆದ ಎಂಟು ವರ್ಷಗಳಿಂದ ಸಾಕಷ್ಟು ದುಡ್ಡು ಗ್ರಾಮ ಪಂಚಾಯಿತಿಗಳಿಗೆ ಬಂದಿದೆ. ನಾಳೆ ಏನಾದರೂ ತೊಂದರೆ ಬಂದರೂ ಆ ಒಂದು ವ್ಯವಸ್ಥೆ ಮುಂದೆಯೂ ನಿಲ್ಲಬಾರದು ಗ್ರಾಮ ಪಂಚಾಯಿತಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕೆಲಸ ಮಾಡಲು ದುಡ್ಡನ್ನು ನಿಗದಿ ಮಾಡುವಂತ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು, P.M.G.S.Y. ಮತ್ತು C.M.G.S.Y. ಈ ಯೋಜನೆಗಳಲ್ಲಿ ರಸ್ತೆಗಳನ್ನು ಮಾಡಲು ಇಲಾಖೆಯವರು ಈಗಾಗಲೇ ಒಂದು ನಕಾಶೆಯನ್ನು ಮಾಡಿಬಿಟ್ಟಿದ್ದಾರೆ. ಕೆಲವು ಸದಸ್ಯರು ಮಾತನಾಡುವಾಗ ಒಳ್ಳೆಯ ಸಲಹೆಗಳನ್ನು

ಕೊಟ್ಟರು ಅನೇಕ ಒಳರಸ್ತೆಗಳು ಆ ನಕಾಶೆಯಲ್ಲಿಲ್ಲ. ನಕಾಶೆಯಲ್ಲಿರುವಂಥ ರಸ್ತೆಗಳಿಗಷ್ಟೇ ಪ್ರಾಮುಖ್ಯತೆ ನೀಡುವ ವಿಚಾರ ಅಭಿಯಂತರರಲ್ಲಿದೆ. ಆದ್ದರಿಂದ, ಅವುಗಳನ್ನೆಲ್ಲ ಸೇರಿಸಿ ಹೊಸ ನಕಾಶೆಯನ್ನು ಮಾಡಬೇಕು. ಬೇರೆಬೇರೆ ಗ್ರಾಮಗಳನ್ನು ಕೂಡಿಸತಕ್ಕಂಥ ಪ್ರಾಮುಖ್ಯವಾದಂಥ ರಸ್ತೆಗಳನ್ನು ಜೋಡಿಸತಕ್ಕಂಥ ವ್ಯವಸ್ಥೆ ಕೂಡ ಆಗಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಇನ್ನು, ಗ್ರಾಮ ಪಂಚಾಯಿತಿ ಚುನಾವಣೆ ವ್ಯವಸ್ಥೆ ಏನಾಗಿದೆಯೆಂದರೆ, ಪಂಚಾಯಿತಿ ಅಧ್ಯಕ್ಷರಿಗೆ ಕೊಟ್ಟಂಥ 30 ತಿಂಗಳ ಅವಧಿ ಪೂರ್ತಿ ಅವರು ಇರುವುದಿಲ್ಲ. 10–15 ತಿಂಗಳಿಗೊಮ್ಮೆ ಬದಲಾವಣೆ ಆಗತಕ್ಕಂಥ ವ್ಯವಸ್ಥೆಯಿದೆ. Horse trading ಎಂದು ನಾವೇನು ಇಲ್ಲಿ ಮಾತನಾಡುತ್ತೇವೆ, ಅದು ಅಲ್ಲಿ ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತದೆ. ಇವತ್ತು ಒಬ್ಬರು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಬೇಕಾದರೆ ಸುಮಾರು 15 ರಿಂದ 25 ಲಕ್ಷ ರೂಪಾಯಿಗಳವರೆಗೆ ಖರ್ಚು ಮಾಡುತ್ತಾರೆ. ಮತ್ತೆ ಅವರು ಆ ದುಡ್ಡನ್ನು ಎಲ್ಲಿಂದ ವಾಪಸ್ಸು ತೆಗೆದುಕೊಳ್ಳಬೇಕು? ಅದೇ ಗ್ರಾಮ ಪಂಚಾಯಿತಿಯಿಂದಲೇ ತೆಗೆದುಕೊಳ್ಳುವ ವ್ಯವಸ್ಥೆಯಾಗಿದೆ. ಅದಕ್ಕೆ ನನ್ನ ಒಂದು ವಿಚಾರ ಏನಿದೆ ಎಂದರೆ, ಈಗ ಗ್ರಾಮ ಪಂಚಾಯಿತಿ ಮಟ್ಟದಲ್ಲಿರುವ ಅಧ್ಯಕ್ಷರ ಚುನಾವಣೆಯನ್ನು ನೇರ ಚುನಾವಣೆ ಮಾಡುವಂಥ ವ್ಯವಸ್ಥೆಯಾದರೆ ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಭಾವಿಸುತ್ತಿದ್ದೇನೆ.

ಇಷ್ಟು ವಿಚಾರಗಳನ್ನು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಅರ್ಪಿಸಿ ನನ್ನ ಎರಡು ಮಾಡತುಗಳನ್ನು ಮುಗಿಸುತ್ತಿದ್ದೇನೆ.

ಶ್ರೀ ಬಿ.ಎ. ಮೊಹಿಯುದ್ದೀನ್ ಬಾವಾ (ಮಂಗಳೂರು ನಗರ–ಉತ್ತರ):– ಮಾನ್ಯ ಉಪಾಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲಿಗೆ ನಾನು ಅಧ್ಯಕ್ಷರಿಗೆ ವಂದಿಸುತ್ತೇನೆ. ನನ್ನ

ಕ್ಷೇತ್ರವಾದ ಮಂಗಳೂರು–ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಮುಖ್ಯವಾಗಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರಿನ ಸಮಸ್ಯೆ, ದಾರಿದೀಪದ ವ್ಯವಸ್ಥೆ ಮತ್ತು ರಸ್ತೆಯ ತೊಂದರೆಗಳು ಬಹಳಷ್ಟಿವೆ. ಮಂಗಳೂರು ಎಂದರೆ ಇಡೀ ರಾಜ್ಯದ ಜನತೆ ಯಾವ ರೀತಿ ಭಾವಿಸುತ್ತಾರೆ ಎಂದರೆ ಅಲ್ಲಿ ಅರಬ್ಬಿ ಸಮುದ್ರವಿದೆ, ಕುಡಿಯುವ ನೀರಿನ ತೊಂದರೆಯಿಲ್ಲ ಎನ್ನುವ ಭಾವನೆ ಅನೇಕ ಭಾಗದ ಜನರ ಮನಸ್ಸಿನಲ್ಲಿದೆ. ನನ್ನ ಕ್ಷೇತ್ರದಲ್ಲಿ ಹತ್ತು ಪಂಚಾಯಿತಿಗಳು ಬರುತ್ತವೆ, ಎಲ್ಲ ಪಂಚಾಯಿತಿಗಳಲ್ಲೂ ಕುಡಿಯುವ ನೀರಿನ ಸಮಸ್ಯೆಯಿದ್ದು, ಅಲ್ಲಿನ ಜನತೆ ಬಹಳಷ್ಟು ತೊಂದರೆಯಲ್ಲಿದ್ದಾರೆ. ಕುಡಿಯುವ ನೀರಿನಂಥ ಮೂಲಭೂತ ಸೌಕರ್ಯವನ್ನು ಮಾಡಿಕೊಡುವಂಥ ವ್ಯವಸ್ಥೆಗೆ ನಮ್ಮ ಮುಖ್ಯಮಂತ್ರಿಗಳು ಅಧಿಕಾರವನ್ನು ವಹಿಸಿಕೊಂಡಂಥ ಸಂದರ್ಭದಲ್ಲಿ ವಿಶೇಷವಾಗಿ ಎಲ್ಲರಿಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ ಎಂದು ತಿಳಿಸಿದ್ದಾರೆ. ಕೋಲಾರದಲ್ಲಿ ಕುಡಿಯುವ ನೀರಿಗೆ ತೊಂದರೆ ಇರುವಂಥ ಈ ಸಂದರ್ಭದಲ್ಲಿ, ಮಂಗಳೂರಿನ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಯಾವ ರೀತಿ ಇದೆ ಎಂದರೆ ಅಲ್ಲಿ ಬೋರ್‌ವೆಲ್ ಹಾಕಿದರೂ ಅದರಲ್ಲಿ ನೀರು ಬರದಂಥ ಸಂದರ್ಭಗಳಿವೆ. ತುಂಬೆ ಡ್ಯಾಂನಿಂದ ಮಂಗಳೂರು ನಗರ ಪ್ರದೇಶಕ್ಕೆ ನೀರನ್ನು ಕಳುಹಿಸುವಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ಆ ಭಾಗದಲ್ಲಿರುವಂಥ ಕೆಲವು ಗ್ರಾಮಗಳು ನನ್ನ ಕ್ಷೇತ್ರದಲ್ಲಿ ಬರುತ್ತಿದ್ದು, ಆ ಗ್ರಾಮಗಳ ಮುಖಾಂತರ ಪೈಪ್‌ಲೈನ್‌ನಲ್ಲಿ ಮಂಗಳೂರು ನಗರಕ್ಕೆ ನೀರು ಹೋಗುತ್ತಿದೆ. ಆ ಗ್ರಾಮಗಳಲ್ಲಿ ಹಳೆಯ 2 ಎಂ.ಜಿ. ಎನ್ನುವ ಪೈಪ್‌ಲೈನಿನ ವ್ಯವಸ್ಥೆಯಿದೆ. ಎರಡು ಕಡೆಗಳಲ್ಲಿ, ಬಹುಗ್ರಾಮ ಕುಡಿಯುವ ಯೋಜನೆಯಲ್ಲಿ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿ ಮೂರು ವರ್ಷಗಳಾಗಿವೆ. ಆದರೆ, ಸರ್ವೆ ಕಾರ್ಯಕ್ರಮ, ಅದು, ಇದು ಎಂದು ಹೇಳಿ ಅಧಿಕಾರಿಗಳು ವರ್ಷಗಳನ್ನು ತಳ್ಳುತ್ತಿದ್ದಾರೆಯೇ ಹೊರತು, ಯಾವುದೇ ಒಂದು ಶಾಶ್ವತ ಪರಿಹಾರ ಕಾರ್ಯ ಇದುವರೆಗೆ ಆಗಿಲ್ಲ. ಮುಖ್ಯವಾಗಿ ನಾನು ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಮಂಗಳೂರು ನಗರಕ್ಕೆ ನೀರು ಪೂರೈಸುವ ತುಂಬೆ ಡ್ಯಾಂ ಏನಿದೆ, ನಮ್ಮ ಜಿಲ್ಲೆಯಲ್ಲಿ ಅದೇ ರೀತಿ ಬೇರೆ

ಬೃಹತ್ ಕಾರ್ಯಕ್ರಮಗಳಿವೆ. ಶಂಭೂರು ಡ್ಯಾಂನಿಂದ ಎಂ.ಆರ್.ಪಿ.ಎಲ್.ಗೆ ನೀರಿನ ವ್ಯವಸ್ಥೆಯಿದ್ದು, ಅದು ನಮ್ಮ ಗ್ರಾಮಗಳ ಮುಖಾಂತರ ಹೋಗುತ್ತಿದೆ. ನಮ್ಮ ಕ್ಷೇತ್ರದಲ್ಲಿನ ಗ್ರಾಮಗಳಲ್ಲಿ 2 ಎಂ.ಜಿ. ಸ್ಕೀಂನಲ್ಲಿ ಪೈಪ್‌ಲೈನ್ ಅಳವಡಿಕೆ ಮಾಡಿ ಆಗಿದೆ. ಆದರೆ ಆ ಪೈಪಿನ ಮೂಲಕ ನೀರು ಹೋಗುತ್ತಿಲ್ಲ. ಇನ್ನೊಂದು ದೊಡ್ಡ ಪೈಪಿನ ಮೂಲಕ ನಗರಕ್ಕೆ ನೀರು ಹೋಗುತ್ತಿದೆ. ಆ 2 ಎಂ.ಜಿ. ಪೈಪ್‌ಲೈನ್ ಮೂಲಕ ನನ್ನ ಕ್ಷೇತ್ರದ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರನ್ನು ಕೊಡುವಂಥ ವ್ಯವಸ್ಥೆಯನ್ನು ದಯವಿಟ್ಟು ಗ್ರಾಮೀಣಾಭಿವೃದ್ಧಿ ಸಚಿವರು ಮಾಡಿಕೊಡಬೇಕು ಎಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ, ನಮ್ಮ ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪ ಮೊಯಿಲಿಯವರು ಈ ಭಾಗಕ್ಕೆ ಬಂದು ಯಾವ ರೀತಿ ಈ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರವನ್ನು ಮಾಡಬೇಕೆಂದಿದ್ದಾರೆ, ಅದೇ ರೀತಿ ನಮ್ಮ ಭಾಗವೂ ಸಹ ಕುಡಿಯುವ ನೀರಿನ ವ್ಯವಸ್ಥೆಯಿಲ್ಲದೇ ಕೊರಗುತ್ತಿದ್ದು, ಸಾಕಷ್ಟು ಮಳೆಯಿಲ್ಲದೇ ಮುಂದಿನ ವರ್ಷ ಕುಡಿಯುವ ನೀರಿನ ಸಮಸ್ಯೆ ಎಲ್ಲಿಗೆ ಹೋಗುತ್ತದೋ ಎಂದು ಜನತೆ ಚಿಂತಾಕ್ರಾಂತರಾಗಿದ್ದಾರೆ. ಎಂ.ಆರ್.ಪಿ.ಎಲ್. ಕಾರ್ಖಾನೆಗೆ ನಮ್ಮ ಗ್ರಾಮಗಳ ಮೂಲಕ ನೀರಿನ ಪೈಪ್‌ಲೈನ್ ಹೋಗಿರುವ ಸಂದರ್ಭದಲ್ಲಿ, ಅಲ್ಲಿನ ಜನರಿಗೂ ಅವರ ಹಕ್ಕನ್ನು ಕೊಡುವಂಥ ಕೆಲಸವನ್ನು ಮಾಡಬೇಕು. ಮಂತ್ರಿಗಳಿರುವಂಥ ಕ್ಷೇತ್ರದಲ್ಲಿ ಅವರ ಪ್ರಾಬಲ್ಯವನ್ನು ಅರಿತುಕೊಂಡು ಅಧಿಕಾರಿಗಳು ಅಲ್ಲಿ ಅವಕಾಶವನ್ನು ಕೊಡುತ್ತಿದ್ದಾರೆ. ನನ್ನ ಕ್ಷೇತ್ರದಲ್ಲೂ ದಯವಿಟ್ಟು ಬಹುಗ್ರಾಮ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು. ನನ್ನ ಕ್ಷೇತ್ರದಲ್ಲಿ ಬರುವ ಗ್ರಾಮ ಪಂಚಾಯಿತಿಗಳಲ್ಲಿ ದಾರಿದೀಪದ ತೊಂದರೆ ಇರುವುದರಿಂದ, ಅನೇಕ ಗ್ರಾಮಗಳು ಕುಗ್ರಾಮದ ರೀತಿ ಇರುವುದರಿಂದ ಆ ಭಾಗದಲ್ಲಿ ದಾರಿದೀಪಗಳ ವ್ಯವಸ್ಥೆ ಆಗಬೇಕು ಎಂದು ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ಕೇಳುತ್ತೇನೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್‌ಗೆ ಸಂಬಂಧಿಸಿದಂತೆ ಇಡೀ ರಾಜ್ಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಮಾತನಾಡಿದ ಎಲ್ಲರೂ ಹೇಳಿದ್ದಾರೆ. ನಮ್ಮ ಯು.ಪಿ.ಎ. ಸರ್ಕಾರ ತಂದಂಥ N.R.E.G.A ಯೋಜನೆಯಲ್ಲಿ

ಗ್ರಾಮಗಳಲ್ಲಿ ವ್ಯವಸ್ಥಿತವಾಗಿ ಕೆಲಸವಾಗುತ್ತಿದ್ದು, ಅದು ನಮ್ಮ ಯು.ಪಿ.ಎ. ಸರ್ಕಾರ ತಂದಂಥ ಒಂದು ವ್ಯವಸ್ಥೆ ಎಂದು ಹೇಳಲು ನನಗೆ ಹೆಮ್ಮೆಯಾಗುತ್ತಿದೆ. ಇದರ ಪಾಲನೆಯನ್ನು ಅಧಿಕಾರಿಗಳು ಕಟ್ಟುನಿಟ್ಟಾಗಿ, ವ್ಯವಸ್ಥಿತವಾಗಿ ಮಾಡಬೇಕು. ಪಿ.ಡಿ.ಓ.ಗಳು ಮತ್ತು ಇ.ಓ.ಗಳಂಥ ಕೆಲವು ಅಧಿಕಾರಿಗಳು ಮತ್ತು ಇಂಜಿನಿಯರುಗಳು ಗ್ರಾಮದಲ್ಲಿ ಸಭೆಗಳಾಗುವಂಥ ಸಂದರ್ಭದಲ್ಲಿ ಬರುವುದೇ ಇಲ್ಲ. ಕನಿಷ್ಠ ಪಕ್ಷ ಒಂದು ತಿಂಗಳಿಗೆ ಒಂದು ಸಭೆಯಾಗುವಂತೆ ಮಾಡಿ, ಅಲ್ಲಿ ಅವರು ಕಟ್ಟುನಿಟ್ಟಾಗಿ ಹಾಜರಿರುವಂಥ ವ್ಯವಸ್ಥೆಯನ್ನು ಮಾಡಲು ಮಾನ್ಯ ಮಂತ್ರಿಗಳು ಸೂಚನೆಯನ್ನು ನೀಡಬೇಕು ಎನ್ನುವ ಮಾತನ್ನು ಹೇಳಿ, ನಾನು ಹೆಚ್ಚು ಸಮಯವನ್ನು ವ್ಯಯಿಸದೇ, ಅಗತ್ಯವಾಗಿರುವ ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸಬೇಕಾದ ಅಗತ್ಯವನ್ನು ನಾನು ಸಚಿವರಿಗೆ ಮತ್ತೊಮ್ಮೆ ಮನವರಿಕೆ ಮಾಡಿಕೊಡುತ್ತೇನೆ. ತಮಗೆ ಗೊತ್ತಿದೆ, ಸಮುದ್ರದ ಹತ್ತಿರದಲ್ಲಿರುವುದರಿಂದ ಮಳೆ ಬಂದರೆ ನಮ್ಮ ಭಾಗದ ರಸ್ತೆಗಳು ಹಾಳಾಗುತ್ತವೆ. ದಕ್ಷಿಣ ಕರ್ನಾಟಕದ ದುರಾದೃಷ್ಟವೆಂದರೆ ಬೃಹತ್ ನಿರಾವರಿ ಇಲಾಖೆಯಿಂದ ನಮಗೆ ಒಂದು ರೂಪಾಯಿಯೂ ಸಿಗುವುದಿಲ್ಲ, ಸಣ್ಣ ನೀರಾವರಿಯಿಂದ ಸಣ್ಣಸಣ್ಣ ವ್ಯವಸ್ಥೆಯ ಸಹಾಯಗಳಾಗುತ್ತವೆ. ಆ ಭಾಗದಲ್ಲಿ ಕೃಷಿಗೂ ನೀರಿನ ವ್ಯವಸ್ಥೆ ಇರುವುದಿಲ್ಲ. ಆದ್ದರಿಂದ, ದಯವಿಟ್ಟು ನಮಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ಗ್ರಾಮೀಣಾಭಿವೃದ್ಧಿ ಸಚಿವರು ಬಹಳಷ್ಟು ಒತ್ತನ್ನು ಕೊಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ನನಗೆ ನೀಡಿದ ಅವಕಾಶಕ್ಕಾಗಿ ತಮಗೆ ವಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ಹೆಚ್. ಶ್ರೀನಿವಾಸ್ (ತರೀಕೆರೆ):- ಮಾನ್ಯ ಉಪಾಧ್ಯಕ್ಷರೆ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಮೊದಲಿಗೆ ಧನ್ಯವಾದಗಳನ್ನು ಹೇಳುತ್ತಿದ್ದೇನೆ. ಸುಮಾರು 20 ವರ್ಷಗಳ ನಂತರ ಈ ಇಲಾಖಾವಾರು ಬಜೆಟ್ ಮಂಡನೆಗೆ ಅವಕಾಶ ಮಾಡಿದ್ದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಯವರಿಗೆ ಹಾಗೂ ಮಾನ್ಯ ಸಭಾಧ್ಯಕ್ಷರಿಗೆ ಈ ಸಂದರ್ಭದಲ್ಲಿ ವಿಶೇಷವಾಗಿ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಇಷ್ಟಪಡುತ್ತಿದ್ದೇನೆ. ಮಾನ್ಯ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು 2014–15ನೇ ಸಾಲಿನ ಇಲಾಖಾ ಬೇಡಿಕೆ ಮಂಡನೆ ಮಾಡಿದ್ದು ಅದರ ಒಪ್ಪಿಗೆಗಾಗಿ ಈ ಸದನದಲ್ಲಿ ಮಂಡಿಸಿದ್ದಾರೆ. ಆ ವಿಚಾರವಾಗಿ ಕೆಲವು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಬಹಳ ಜನ ಸದಸ್ಯರು ಗ್ರಾಮೀಣಾಭಿವೃದ್ಧಿ ಇಲಾಖೆ ಬಗ್ಗೆ ಮಾತನಾಡಿದ್ದಾರೆ. ಯಾವುದು ಮಾತನಾಡಿಲ್ಲ ಆ ಕೆಲವೊಂದು ವಿಚಾರಗಳ ಬಗ್ಗೆ ಮಾತನಾಡುವುದಕ್ಕೆ ಬಯಸುತ್ತೇನೆ. ಪುರಸಭೆ ಇರಬಹುದು ಅಥವಾ ಬೇರೆ ಇಲಾಖೆಗಳಲ್ಲಿ ಚುನಾವಣೆ ಆದಾಗ nominations ಮಾಡಿರುತ್ತಾರೆ. ಆದರೆ, ತಾಲ್ಲೂಕು ಪಂಚಾಯಿತಿ ಇರಬಹುದು, ಜಿಲ್ಲಾ ಪಂಚಾಯಿತಿ ಇರಬಹುದು, ಗ್ರಾಮ ಪಂಚಾಯಿತಿಗಳಲ್ಲಿ ಯಾವುದು nominations ಅನ್ನು ಆ ಇಲಾಖೆಗೆ ಮಾಡಿಲ್ಲ, ಆ nominations ಅನ್ನು ಮಾಡಿದರೂ ಕೂಡ ಇನ್ನೂ ಕೂಡ ಹೆಚ್ಚಿನ ಸಮರ್ಥವಾದ ವ್ಯಕ್ತಿಗಳನ್ನು ಇಂಥವರನ್ನು ಆಯ್ಕೆ ಮಾಡಬೇಕು, nominations ಮಾಡಬೇಕೆಂದು ಸರ್ಕಾರ ಸುತ್ತೋಲೆ ಮಾಡಿದರೆ ಆ nomination ಮಾಡಿದರೆ ಹೆಚ್ಚಿನ ಅನುಕೂಲವಾಗುತ್ತದೆ. ನಮ್ಮ ಜಿಲ್ಲಾ ಪಂಚಾಯತ್ AE ಗಳಿಗೆ, AEE ಗಳಿಗೆ NRWP ಅದನ್ನು upload ಮಾಡುವುದಕ್ಕೆ, computer ನಲ್ಲಿ operate ಮಾಡುವುದಕ್ಕೆ ಬರುವುದಿಲ್ಲ. ಅಂಥ training ಅನ್ನು ಅಭಿಯಂತರರಿಗೆ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಇನ್ನು Multi Village Scheme ಬಗ್ಗೆ ಹೇಳುವುದಾದರೆ, ನಮ್ಮ ತರೀಕೆರೆ ಕ್ಷೇತ್ರದಲ್ಲಿ ನದಿಗಳು ಇವೆ, dam ಗಳಿವೆ, ಅಬ್ಬಿ ಜಲಪಾತವಿದೆ. ಅವುಗಳ ಉಪಯೋಗ ಮಾಡಿಕೊಂಡು ಇಡೀ ತಾಲ್ಲೂಕಿಗೆ ಮತ್ತು ಪಕ್ಕದ ತಾಲ್ಲೂಕುಗಳಿಗೆ ನೀರು ಸರಬರಾಜು ಮಾಡಬಹುದು. ಅಷ್ಟು ನೀರು ಇದೆ. ನಮ್ಮ ಇಡೀ ತಾಲ್ಲೂಕಿನ ನೂರಾರು ಹಳ್ಳಿಗಳಿಗೆ ಕುಡಿಯಲಿಕ್ಕೆ ನೀರಿಲ್ಲ. ಟ್ಯಾಂಕುಗಳಲ್ಲಿ ನೀರು ಇಲ್ಲದಿರುವ ಸಂದರ್ಭ ಇದೆ. ಆದ್ದರಿಂದ, ಅಷ್ಟು ನೀರನ್ನು ಉಪಯೋಗಿಸಿಕೊಳ್ಳಲಿಕ್ಕೆ Multi Village Scheme ಅನ್ನು ಮಾಡಬೇಕು. ಇನ್ನು, RDPR ಇಲಾಖೆಯ ಅಧಿಕಾರಿಗಳು ನಮ್ಮ ಜಿಲ್ಲಾ ಪಂಚಾಯತ್‌ನಿಂದ ರಸ್ತೆ ಅಭಿವೃದ್ಧಿ ಬಗ್ಗೆ ತಿಳಿದುಕೊಳ್ಳುವುದಕ್ಕೋಸ್ಕರ ತಮಿಳುನಾಡಿಗೆ ಹೋಗಿದ್ದಾರೆ. ಆ ಅಧಿಕಾರಿಗಳನ್ನು

ನಾನು ವಿಚಾರಿಸಿದೆ. ಅಲ್ಲಿಯ ಹಳ್ಳಿಗಳಲ್ಲಿರುವ ರಸ್ತೆಗಳನ್ನು tar road ತುಂಬಾ ಅಭಿವೃದ್ಧಿ ಮಾಡುತ್ತಿದ್ದಾರೆ, ತುಂಬಾ ಖುಷಿಯಾಯಿತು ಎಂದು ಹೇಳಿದರು. ಆದ್ದರಿಂದ, ನಮ್ಮಲ್ಲೂ ಕೂಡ ಕೆಲವು ರಸ್ತೆಗಳನ್ನು ಏನು PMGSY ನಲ್ಲಿ ಮಾಡುತ್ತಿದ್ದೀರಿ, ಅದೇ ರೀತಿಯಾದ ರಸ್ತೆಗಳನ್ನು ಎಲ್ಲಾ ಇಲಾಖೆಗಳಲ್ಲೂ ಕೂಡ ಮಾಡಬೇಕು. ಆ ರಸ್ತೆಗಳಿಗೆ ಅವರು 10 ವರ್ಷಗಳ guarantee ಕೊಟ್ಟಿರುತ್ತಾರೆ. 10 ವರ್ಷಗಳ ಬಾಳಿಕೆ ಬರತಕ್ಕಂಥ ರಸ್ತೆಗಳನ್ನು ಮಾಡಬೇಕು ಮತ್ತು maintain ಮಾಡಬೇಕೆಂದು condition ಹಾಕಿರುತ್ತಾರೆ. ಅದೇ ರೀತಿಯಾಗಿ ಎಲ್ಲಾ ಇಲಾಖೆಗಳಲ್ಲೂ ಕೂಡ minimum 6 ವರ್ಷಗಳಾದರೂ ರಸ್ತೆಗಳನ್ನು contractor maintain ಮಾಡಬೇಕೆನ್ನುವ condition ಹಾಕಿ ಆ ರೀತಿಯಾಗಿ ಗುತ್ತಿಗೆಯನ್ನು ಕೊಟ್ಟರೆ ಖಂಡಿತವಾಗಿ ರಸ್ತೆಗಳು ಹತ್ತಾರು ವರ್ಷಗಳು ಇರುತ್ತವೆ. ಈಗ ಜಿಲ್ಲಾ ಪಂಚಾಯತ್‌ನಲ್ಲಿ ಮಾಡಿಸಿದ ರಸ್ತೆಗಳು 6 ತಿಂಗಳು ಕೂಡ ಬಾಳಿಕೆ ಬರುವುದಿಲ್ಲ. ಸುಮ್ಮನೆ ಬೇಕಾಬಿಟ್ಟಿ ರಸ್ತೆಗಳನ್ನು ಮಾಡುತ್ತಿದ್ದಾರೆ. ಆದ್ದರಿಂದ, ಒಂದು condition ಹಾಕಿ ಇದೇ ರೀತಿ ರಸ್ತೆಗಳನ್ನು ಮಾಡಬೇಕೆಂದು, ಅಧಿಕಾರಿಗಳು ಏನು PMGSY ನಲ್ಲಿ ರಸ್ತೆಗಳನ್ನು ಮಾಡುತ್ತಿದ್ದಾರೆ, ಅದೇ ರೀತಿಯಾದ ರಸ್ತೆಗಳನ್ನು ಮಾಡಲಿಕ್ಕೆ ಸಂಬಂಧಪಟ್ಟವರಿಗೆ ಸೂಚನೆ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಯಾವುದೇ ಕುಡಿಯುವ ನೀರಿನ ಯೋಜನೆಯಲ್ಲಿ ಮೊದಲು pipeline ಮಾಡುತ್ತಾರೆ. ಮಾನ್ಯ ರಾಜೀವ್ (ಕುಡಚಿ) ರವರು ಹೇಳಿದಹಾಗೆ, ಹಲವಾರು tank ಗಳಿಗೆ, overhead tank ಗಳಿಗೆ ನೀರೇ ಕೊಟ್ಟಿರುವುದಿಲ್ಲ. Pipeline ಮಾಡುವುದನ್ನು ಮಾಡಿಬಿಟ್ಟಿರುತ್ತಾರೆ, tank ಮಾಡುವುದನ್ನು ಮಾಡಿಬಿಟ್ಟಿರುತ್ತಾರೆ. ಆದರೆ, ಅಲ್ಲಿಗೆ ನೀರಿನ sources ಇರುವುದಿಲ್ಲ. Borewell ಎಂದು ತೋರಿಸಿರುತ್ತಾರೆ, ಆದರೆ, ಆ Borewell dry ಆಗಿರುತ್ತದೆ. ಅಂಥ ಹಲವಾರು ನಿದರ್ಶನಗಳು ನಮ್ಮ ರಾಜ್ಯದಲ್ಲಿ ಇವೆ. ಅಂಥವಕ್ಕೆಲ್ಲ ಹೆಚ್ಚಿನ ಕಾಳಜಿ ವಹಿಸಿ ಮಂತ್ರಿಗಳು ಮತ್ತು ಅಧಿಕಾರಿಗಳು ಅದಕ್ಕೆ ಸರಿಯಾದ ರೂಪರೇಷೆಯನ್ನು ಮಾಡಬೇಕಾಗುತ್ತದೆ. ಅದರ ಜೊತೆಗೆ ಹಲವಾರು ಇಲಾಖೆಗಳಲ್ಲಿ ಇಂಜಿನಿಯರುಗಳಿಲ್ಲ. ತರೀಕೆರೆಯಲ್ಲಂತೂ ಇಬ್ಬರೇ ಇಬ್ಬರು

ಇಂಜಿನಿಯರುಗಳಿದ್ದಾರೆ. ನಮ್ಮಲ್ಲಿ 46 ಪಂಚಾಯಿತಿಗಳು ಬರುತ್ತವೆ. ಇಬ್ಬರೇ ಇಬ್ಬರು ಇಂಜಿನಿಯರುಗಳು ಅಷ್ಟು ಕಡೆ ಕೆಲಸ ಮಾಡಲಿಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ತಕ್ಷಣದಲ್ಲಿ ಎಲ್ಲೆಲ್ಲಿಗೆ ಅವಶ್ಯಕತೆ ಜಾಸ್ತಿ ಇದೆ, ಅಂಥ ಕಡೆ ಇಂಜಿನಿಯರುಗಳು, ಅಸಿಸ್ಟೆಂಟ್ ಇಂಜಿನಿಯರುಗಳನ್ನು ತುರ್ತಾಗಿ ನೇಮಕ ಮಾಡಬೇಕೆಂದು ಕೋರುತ್ತಿದ್ದೇನೆ. ಅದರ ಜೊತೆಗೆ ನಮ್ಮ ಜಿಲ್ಲೆಯಲ್ಲಿ 156 PDO ಗಳು, Scretary ಗಳು ಇಲ್ಲ. ಮುಖ್ಯವಾಗಿ ಏನಾದರೂ ಕೆಲಸ ಮಾಡಬೇಕೆಂದರೆ ಅಧಿಕಾರಿಗಳು ಬಹಳ ಮುಖ್ಯ. ಆದ್ದರಿಂದ, ಇವರನ್ನು ತೆಗೆದುಕೊಳ್ಳಲಿಕ್ಕೆ ತುರ್ತು ಕ್ರಮವನ್ನು ತೆಗೆದುಕೊಳ್ಳಬೇಕು. ಆಗ ಕೆಲಸವನ್ನು ಮಾಡಲಿಕ್ಕೆ ಆಗುತ್ತದೆ. ಅಧಿಕಾರಿಗಳು ಇಲ್ಲ, ಇಂಜಿನಿಯರುಗಳು ಇಲ್ಲವೆಂದರೆ ಯಾವ ರೀತಿ ನಾವು ಕೆಲಸಗಳನ್ನು ಮಾಡುವುದು? ತೊಂದರೆಯಾಗುತ್ತದೆ. ಆದ್ದರಿಂದ, ದಯವಿಟ್ಟು ಇಂಜಿನಿಯರುಗಳನ್ನು ಬೇಗನೆ ನೇಮಕ ಮಾಡಬೇಕು. AEE ಗಳು ಸಿಗುತ್ತಾರೆ. Section Officer ಗಳು, Assistant Engineer ಗಳೆಲ್ಲ promotion ಆಗಿರುವುದರಿಂದ ಎಲ್ಲಾ ಕಡೆ ಅಭಾವವಿದೆ. ಎಲ್ಲಿ ಹುಡುಕಿದರೂ ಕೂಡ ಸಿಗುತ್ತಿಲ್ಲ. ಆದ್ದರಿಂದ, ತಕ್ಷಣದಲ್ಲಿ Assistant Engineer ಗಳನ್ನು, JE ಗಳನ್ನು ತೆಗೆದುಕೊಳ್ಳಲಿಕ್ಕೆ ಸರ್ಕಾರ ತುರ್ತಾಗಿ ಕ್ರಮವನ್ನು ತೆಗೆದುಕೊಂಡರೆ ಈಗ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಅದನ್ನು ಸರಿಯಾದ ಸಮಯದಲ್ಲಿ ಮುಗಿಸಬಹುದು. ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಸನ್ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ (ಹಾವೇರಿ):- ಮಾನ್ಯ ಉಪಾಧ್ಯಕ್ಷರೆ, ನಿನ್ನೆಯಿಂದ ಗ್ರಾಮೀಣಾಭಿವೃದ್ಧಿ ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ. ಬಹಳಷ್ಟು ವಿಚಾರಗಳನ್ನು ಎಲ್ಲಾ ಹಿರಿಯ ಸದಸ್ಯರುಗಳು ಕೂಡ ಮಾತನಾಡಿದ್ದಾರೆ. ಮೊದಲು ಗ್ರಾಮ ಪಂಚಾಯಿತಿಯಲ್ಲಿ ಕೇವಲ ಸಿಬ್ಬಂದಿಗಳ ಪಗಾರ ಕೊಡಲಿಕ್ಕೆ ಮತ್ತು current bill ಕಟ್ಟಲಿಕ್ಕೆ ಆಗುತ್ತಿರಲಿಲ್ಲ. ಅಂಥ ಸಂದರ್ಭದಲ್ಲಿ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ನಮ್ಮ ಹಳ್ಳಿಗಳಲ್ಲಿ ಕೋಟ್ಯಂತರ ರೂಪಾಯಿಗಳು ಬರುತ್ತಿರುವುದು ಬಹಳ ಸ್ವಾಗತಾರ್ಹ. ಆದರೆ, ಕೇಂದ್ರ

ಸರ್ಕಾರದ ಕೆಲವು norms ನಲ್ಲಿ ಹೀಗೇ ಮಾಡಬೇಕು, ಹಾಗೇ ಮಾಡಬೇಕೆನ್ನುವ condition ನೊಂದಿಗೆ ಈ ಯೋಜನೆ ಸ್ವಲ್ಪ ಹಿನ್ನಡೆಗೆ ಬಂದಿದೆ ಏನೋ ಎನ್ನುವ ಅನುಮಾನ ಬಂದಿದೆ. ಮೊದಲು ಮೊದಲು ಬಹಳಷ್ಟು ಜನರು ಇದರ ಉಪಯೋಗ ಪಡೆದುಕೊಂಡು ಮಾಡಲಿಕ್ಕೆ ಮುಂದೆ ಬಂದರು. ಇತ್ತೀಚೆಗೆ ಆ ಯೋಜನೆಯಲ್ಲಿ ಬಹಳಷ್ಟು condition ಗಳನ್ನು ಹಾಕಿರುವುದರಿಂದ ಈ ಯೋಜನೆಯನ್ನು ಮಾಡಲಿಕ್ಕೆ ಬಹಳಷ್ಟು ಹಿಂದೆಮುಂದೆ ನೋಡುತ್ತಿದ್ದಾರೆ. ಇದರಲ್ಲಿ ಕೆಲವು norms ಅನ್ನು ಕಡಿಮೆ ಮಾಡಿದರೆ ನಮ್ಮ ಹಳ್ಳಿಗಳಲ್ಲಿ ಆಸ್ತಿ ಸೃಷ್ಟಿ ಮಾಡಿತಕ್ಕಂಥ ಕೆಲಸಗಳು ಎಲ್ಲಾ ಪಂಚಾಯಿತಿಗಳಲ್ಲಿ ಬಹಳಷ್ಟು ಚೆನ್ನಾಗಿ ನಡೆದಿದೆ. ಆದ್ದರಿಂದ, ಈ ಯೋಜನೆ ಮುಂದುವರಿಯಬೇಕೆನ್ನುವುದು ನಮ್ಮ ಆಶಯ ಕೂಡ ಆಗಿದೆ. ನಾವು ಎಷ್ಟು ಹಣ ಅಲ್ಲಿ ತೊಡಗಿಸುತ್ತೇವೆಂದರೆ, ನಮ್ಮೂರಿನಲ್ಲಿ ಕೆರೆ ಮಾಡತಕ್ಕಂಥದ್ದು ಆಗಿರಬಹುದು, ಆಟದ ಮೈದಾನವಾಗಿರಬಹುದು, ರೈತರೆಲ್ಲ ಕಣಗಳನ್ನು ಮಾಡುವುದಾಗಿರಬಹುದು. ನನ್ನ ಒಂದು ಕ್ಷೇತ್ರದಲ್ಲಿ ನಮ್ಮ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಮತ್ತು ನಾವು ಕೂಡಿ ಒಂದು ಯಲೂಗಿ ಗ್ರಾಮ ಪಂಚಾಯಿತಿಯಲ್ಲಿ ಸುಮಾರು 14 ಅಂಶಗಳ ಕಾರ್ಯಕ್ರಮದಲ್ಲಿ 11 ಅಂಶಗಳನ್ನು ನಾವು ಅನುಷ್ಠಾನಗೊಳಿಸಿದ್ದೇವೆ. ಅಲ್ಲಿ ಸ್ಮಶಾನವನ್ನು ಮಾಡಿದೆವು, ಕೆರೆ ಹೂಳು ಎತ್ತುವುದು, ವೈಯಕ್ತಿಕ 300 ಶೌಚಾಲಯಗಳನ್ನು ಕಟ್ಟಿರುವಂಥದ್ದು ಆಗಿರಬಹುದು, telecast ಯೋಜನೆ – ನಮ್ಮ ಪಂಚಾಯಿತಿಯಲ್ಲಿ telecast ಹಾಕಿಕೊಂಡು ನಮ್ಮ ಗ್ರಾಮ ಪಂಚಾಯಿತಿ ಸದಸ್ಯರು ಯಾವ ರೀತಿ ಪಂಚಾಯಿತಿ ಸಭೆಗಳನ್ನು ನಡೆಸುತ್ತಿದ್ದಾರೆನ್ನುವುದನ್ನು ನಮ್ಮ ಮನೆಯಲ್ಲಿ ಕುಳಿತು ನೋಡುವಂಥ ಒಂದು ಹೊಸ ವ್ಯವಸ್ಥೆಯನ್ನು ಆ ಪಂಚಾಯಿತಿಯಲ್ಲಿ ಅಳವಡಿಸಿದ್ದೇವೆ. ಅಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಮಾಡಿದ್ದೇವೆ. ರೈತರ ಹೊಲಗಳಲ್ಲಿ ಸಮತಟ್ಟನ್ನು ಮಾಡತಕ್ಕಂಥದ್ದು, ಗಿಡಗಳನ್ನು ನೆಡಿಸತಕ್ಕಂಥದ್ದು, ಕೃಷಿ ಹೊಂಡಗಳನ್ನು ಮಾಡತಕ್ಕಂಥದ್ದು ಇಂಥ ಯೋಜನೆಗಳಿಂದ ನಮ್ಮ ರೈತರಿಗೆ ಅನುಕೂಲವಾಗಿದೆ. ಹಾಗೆಯೇ, 'ನಮ್ಮ ಹೊಲ ನಮ್ಮ ರಸ್ತೆ' ಇದರಲ್ಲಿ ನಮ್ಮ

ಹೊಲಗಳಿಗೆ ನಮ್ಮ ರೈತರು ಒಡಗೂಡಿ ಇವತ್ತು ನಾವು NREGA ಯೋಜನೆಯಡಿಯಲ್ಲಿ ನನ್ನ ಕ್ಷೇತ್ರದಲ್ಲಿ ಸುಮಾರು 50 ಕಿ.ಮೀ. ರಸ್ತೆಯನ್ನು ಮಾಡಿದ್ದೇವೆ. ಅದನ್ನು ಮಾಡಿದ್ದರಿಂದ ಬಹಳ ಸಂತೋಷವಾಗುತ್ತದೆ. ಇನ್ನು, ಕೆರೆಗಳನ್ನು ಅಭಿವೃದ್ಧಿಪಡಿಸತಕ್ಕಂಥದ್ದು, ಅದನ್ನು ನೋಡಿದರೆ ನಂಬಲಿಕ್ಕೆ ಸಾಧ್ಯವಿಲ್ಲ ಅಧ್ಯಕ್ಷರೆ. ಇವತ್ತು ಅಲ್ಲಿ ಕೆರೆ ನೋಡಿಬಿಟ್ಟರೆ ನಾವು ಈ ಯೋಜನೆಯಡಿಯಲ್ಲಿ ಇಂಥ ಕೆರೆ ಕಟ್ಟಿದ್ದೇವೆಯೇ ಎಂದು ನಮಗೆ ಸಂಶಯ ಬರುತ್ತದೆ. ಅಷ್ಟು ಉತ್ತಮವಾದ ಕೆರೆಗಳನ್ನು ಕಟ್ಟಿದ್ದೇವೆ. ಈಗಾಗಲೇ ಅನೇಕ ಕಮಿಟಿಯವರು ನಮ್ಮ ಕೇತ್ರಕ್ಕೆ ಬಂದು ಅವುಗಳನ್ನು ನೋಡತಕ್ಕಂಥದ್ದು ಆಗಿದೆ. ನಮ್ಮಲ್ಲಿ ಕುರಿ ದೊಡ್ಡಿಗಳನ್ನು ಕಟ್ಟತಕ್ಕಂಥದ್ದು, ದನದ ದೊಡ್ಡಿಗಳನ್ನು ಕಟ್ಟತಕ್ಕಂಥದ್ದು, ಸಂತೆ ಮೈದಾನವನ್ನು ಮಾಡಿರತಕ್ಕಂಥದ್ದು, ಅಲ್ಲಿ ಗ್ರಾಮ ಪಂಚಾಯಿತಿ office ಕಟ್ಟಿರತಕ್ಕಂಥದ್ದು, society ಗಳನ್ನು ಕಟ್ಟಿರತಕ್ಕಂಥದ್ದು, ಎಲ್ಲವನ್ನೂ ಕೂಡ NREGA ಯೋಜನೆಯಡಿಯಲ್ಲಿ ಆ ಗ್ರಾಮ ಪಂಚಾಯಿತಿಯಲ್ಲಿ ನಾವು ಮಾಡಿದ್ದೇವೆ. ಅಲ್ಲಿ ಕೆಲವರು ನಮಗೆ lift irrigation ಮೂಲಕ ನೀರು ತರಬೇಕೆಂದು ಹೇಳಿದ್ದಾರೆ. ಮಾನ್ಯ ಬಸವರಾಜ ಬೊಮ್ಮಾಯಿಯವರು ನೀರಾವರಿ ಮಂತ್ರಿಯಾಗಿದ್ದಾಗ ಅಲ್ಲಿ ಒಂದು ಯೋಜನೆಯನ್ನು ಮಾಡಿ ಸುಮಾರು 11 ಕೆರೆಗಳಿಗೆ ನೀರು ತುಂಬಿಸತಕ್ಕಂಥದ್ದು, 40 ಸಾವಿರ ಎಕರೆಗೆ drip irrigation ಮಾಡತಕ್ಕಂಥ ಯೋಜನೆಯನ್ನು ಅವರು ಮಂಜೂರು ಮಾಡಿದ್ದರು. ನಮ್ಮ ಸರ್ಕಾರ ಬಂದ ನಂತರ ಆ ಯೋಜನೆಗೆ ಎಲ್ಲಾ ಅನುದಾನವನ್ನು ಕೊಟ್ಟು, ಸುಮಾರು 690 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಕೊಟ್ಟು ಈ ತಿಂಗಳಲ್ಲಿಯೇ ಅಂಥ ಯೋಜನೆಗೆ ಅಡಿಗಲ್ಲನ್ನು ಹಾಕತಕ್ಕಂಥ ವ್ಯವಸ್ಥೆಯನ್ನು ನಮ್ಮ ಸರ್ಕಾರ ಮಾಡುತ್ತಿದೆ. ಇನ್ನು ಕೆಲವು ಯೋಜನೆಗಳ ಬಗ್ಗೆ ಹೇಳುವುದಾದರೆ, ಗಟಾರಗಳನ್ನೆಲ್ಲ ನಾವು ಕಟ್ಟುತ್ತೇವೆ, ಆದರೆ ಆ ಗಟಾರಗಳನ್ನು ಸ್ವಲ್ಪ ದಿವಸಗಳಲ್ಲಿಯೇ ನಮ್ಮ ರೈತರಾಗಿರಬಹುದು, ಬೇರೆಯವರಾಗಿರಬಹುದು, ಅವರ ಹೊಲಕ್ಕೆ ಹೋಗಬೇಕು, ಅವರ ಕಣಕ್ಕೆ ಹೋಗಬೇಕೆಂದರೆ ಅದನ್ನು ಒಡೆದುಬಿಡುತ್ತಾರೆ. ಅದನ್ನು ಒಡೆದರೆ ಅಲ್ಲಿಂದ ಕೆಟ್ಟ ನೀರು, ವಾಸನೆ

ಬರುತ್ತದೆ. ನಂತರ ಆ ನೀರು ಅಲ್ಲಿಯೇ ನಿಂತು ಕೊಳಚೆ ಆಗಿ ಅದು ಯಾವುದಕ್ಕೂ ಉಪಯೋಗಕ್ಕೆ ಬರದ ಹಾಗೆ ಆಗುತ್ತದೆ. ಆದ್ದರಿಂದ, ಮುನಿಸಿಪಾಲಿಟಿಗಳಲ್ಲಿ ಬೇರೆ ಬೇರೆ ರೀತಿಯಲ್ಲಿ maintain ಮಾಡುತ್ತೀರಿ, ಆ ರೀತಿಯಲ್ಲಿ ಹಳ್ಳಿಗಳಲ್ಲಿ ಗಟಾರಗಳನ್ನು maintain ಮಾಡಿದರೆ ಬಹುಶಃ ಅವು ಶುದ್ಧವಾಗಿ ಇರುತ್ತವೆ. ಇಲ್ಲದಿದ್ದರೆ ಅಲ್ಲಿಗೆ ಕಸವನ್ನು ಹಾಕುವುದರಿಂದ ಅಲ್ಲಿ ಸೊಳ್ಳೆಗಳು ಹೆಚ್ಚು ಉತ್ಪಾದನೆ ಆಗಿ ರೋಗಗಳನ್ನು ಉತ್ಪಾದನೆ ಮಾಡತಕ್ಕಂಥ ಜಾಗವಾಗುತ್ತದೆ. ಅಂಥವರು ಯಾರು ಮಾಡುತ್ತಾರೆ, ಅವರ ಮೇಲೆ criminal case ಗಳನ್ನು ಹಾಕಿ ಅವುಗಳನ್ನು ಶುದ್ಧೀಕರಣ ಮಾಡುವಂಥ ವ್ಯವಸ್ಥೆ ಮಾಡುಬೇಕು. ಅದರ ಜೊತೆಗೆ, ಗ್ರಾಮಸಭೆಗಳಲ್ಲಿ ನಾವು ಸೈಟ್ ಕೊಡಬೇಕು, ಮನೆಗಳನ್ನು ಕೊಡಬೇಕು, beneficiary ಆಯ್ಕೆ ಮಾಡಬೇಕು ಎಂದು ಅಂದುಕೊಂಡಿದ್ದೇವೆ. ಅದನ್ನು ಗ್ರಾಮ ಪಂಚಾಯಿತಿಯಲ್ಲಿ ತೆಗೆದುಕೊಂಡು ಹೋಗಿ ಮಾಡುತ್ತಾರೆ. ಅದನ್ನು ಗ್ರಾಮ ಪಂಚಾಯಿತಿಯಲ್ಲಿ ಮಾಡಲಿಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಆದ್ದರಿಂದ, ಆ list ಅನ್ನು ಮಾಡಿ ಅದರ ಮುಖಾಂತರವಾಗಿ ಸೈಟ್‌ಗಳನ್ನು ಕೊಟ್ಟರೆ ಅರ್ಹ ಫಲಾನುಭವಿಗಳಿಗೆ ನಾವು ಕೊಡತಕ್ಕಂಥದ್ದನ್ನು ಮಾಡಬಹುದು. ಸನ್ಮಾನ್ಯ ಕುಮಾರಸ್ವಾಮಿಯವರು ಮಾತನಾಡುವಾಗ, 19 ಸಾವಿರ ಶೌಚಾಲಯಗಳು ಮಾಯವಾಗಿವೆ ಎಂದು ಹೇಳಿದರು. ಅದನ್ನು ಕೇಳಿದರೆ ನಮಗೆಲ್ಲರಿಗೂ ಕೂಡ ಪ್ರಜಾಪ್ರಭುತ್ವದಲ್ಲಿ ನಾಚಿಕೆ ಬರತಕ್ಕಂಥ ವ್ಯವಸ್ಥೆ. ಇವತ್ತು ಶೌಚಾಲಯಗಳನ್ನು ಸಹ ತಿಂದುಬಿಟ್ಟಿದ್ದಾರೆಂದರೆ.......

ಉಪಾಧ್ಯಕ್ಷರು:- Conclude ಮಾಡಿ.

ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:- ಅಂಥ ಸಮಸ್ಯೆಯನ್ನು ಸ್ವಾತಂತ್ರ್ಯ ಬಂದ ನಂತರ ಇಲ್ಲಿಯವರೆಗೂ ಕೂಡ ನಾವು ಶೌಚಾಲಯಗಳನ್ನು ಕಟ್ಟಲಿಕ್ಕಾಗಿಲ್ಲ. ನಮ್ಮ ಹೆಣ್ಣುಮಕ್ಕಳು ನಾವು ಹೋಗುವಾಗ ಬೀದಿಯಲ್ಲಿ ನಿಂತುಕೊಂಡು ಅಥವಾ ರಸ್ತೆ ಬದಿಗಳಲ್ಲಿ ನಿಂತು ನಾವು ಬಂದಾಗ ಏಳುತ್ತಾರೆ, ಮತ್ತೆ ಬಂದು ಕೂರುತ್ತಾರೆ. ಇಂಥದ್ದನ್ನು ನೋಡಿದರೆ ಬಹಳ ನೋವು ಎನಿಸುತ್ತದೆ. ಎಲ್ಲಾ ಸರ್ಕಾರಗಳೂ ಕೂಡ ಇದನ್ನು ಮಾಡಬೇಕೆಂದು

ಹೇಳುತ್ತವೆ. ಆದರೆ, ಸಂಪೂರ್ಣವಾಗಿ ಆಗಿರತಕ್ಕಂಥದ್ದು ಆಗಿಲ್ಲ. ಈ ಸರ್ಕಾರದಲ್ಲಿಯಾದರೂ ಸಹ ಗ್ರಾಮೀಣಾಭಿವೃದ್ಧಿ ಸಚಿವರು ಇದರ ಕಡೆ ಹೆಚ್ಚು ಗಮನಹರಿಸಿದ್ದಾರೆ. ಸಾಕಷ್ಟು ಶೌಚಾಲಯಗಳನ್ನು ಕಟ್ಟಿಕೊಳ್ಳಲಿಕ್ಕೆ ನರೇಗಾ ಯೋಜನೆಯಡಿಯಲ್ಲಿ ಮತ್ತು ವೈಯಕ್ತಿಕವಾಗಿ ಎಲ್ಲರಿಗೂ ಕೂಡ ಕೊಟ್ಟಿದ್ದಾರೆ. ಅದೂ ಕೂಡ ಹೆಚ್ಚಿನ ಪ್ರಮಾಣದಲ್ಲಾಗಬೇಕು. ಕುಮಾರಸ್ವಾಮಿಯವರು ಹೇಳಿದ ಹಾಗೆ, ಸದನ ಸಮಿತಿ ಮಾಡಿ, ಆ ಸದನ ಸಮಿತಿಯ ಮುಖಾಂತರವಾಗಿ ಅದನ್ನು ಸರಿಪಡಿಸಲಿಕ್ಕೆ ನಾನು ಆಗ್ರಹಪಡಿಸುತ್ತೇನೆ.

ಉಪಾಧ್ಯಕ್ಷರು:– Conclude ಮಾಡಿ.

ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:– ಅದರ ಜೊತೆಗೆ, ಹಿಂದಿನ ಸರ್ಕಾರ ಕೂಡ ಸುಮಾರು ಲಕ್ಷ ಮನೆಗಳನ್ನು ಕೊಟ್ಟೆವು ಎಂದು ಹೇಳಿದರು. ಆದರೆ, ಆ ಮನೆಗಳಲ್ಲೂ ಕೂಡ ಅವ್ಯವಹಾರವಾಗಿದೆ. ರಾಜೀವ್ ಗಾಂಧಿ ನಿಗಮದವರನ್ನು ಕೇಳಿದರೆ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿದವರಿಗೆ ಇವತ್ತು ಹೊಸ ವಸತಿ ಯೋಜನೆಗಳನ್ನು ಕೊಟ್ಟಿದ್ದಾರೆ. ಅಂಥದ್ದೂ ಕೂಡ ಆಗಿವೆ. ಅಂಥದ್ದೂ ಕೂಡ ತನಿಖೆಯಾಗಬೇಕು. ಏಕೆಂದರೆ, ಆ ಹಳ್ಳಿಯೊಳಗೆ ಯಾರ್‍ಯಾರಿದ್ದರು, ಏನೇನು ತೆಗೆದುಕೊಂಡಿರುತ್ತಾರೆ, ಅವರೇ ಎಲ್ಲವನ್ನೂ ತೆಗೆದುಕೊಳ್ಳುತ್ತಾ ಹೋದರೆ, ಬಡವರಿಗೆ, ನಿಜವಾದ ಫಲಾನುಭವಿಗಳಿಗೆ ಅದು ಮುಟ್ಟುವುದಿಲ್ಲ.

ಉಪಾಧ್ಯಕ್ಷರು:– ಆಯಿತು, close ಮಾಡಿ. Conclude ಮಾಡಿ. ಮಾತನಾಡುವವರು ಬಹಳ ಜನ ಇದ್ದಾರೆ.

ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ:– ಅರಣ್ಯ ಪ್ರದೇಶಗಳಲ್ಲಿ ಜನರು ಇವತ್ತು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅಲ್ಲೇನೂ ಕೆಲಸಗಳನ್ನು ಮಾಡಲಿಕ್ಕಾಗುತ್ತಿಲ್ಲ. ಆದ್ದರಿಂದ, ನಾನು ಕಾನೂನು, ಸಮಾಜ ಕಲ್ಯಾಣ, ಕಂದಾಯ ಸಚಿವರುಗಳಲ್ಲಿ ವಿನಂತಿ ಮಾಡುವುದೇನೆಂದರೆ, ಅನ್ಯ ಗ್ರಾಮಗಳು ಎಂದು ಹೇಳುವ ಗ್ರಾಮಗಳಿಗೆ ಕಂದಾಯ ಗ್ರಾಮಗಳನ್ನು ಮಾಡಲಿಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು ಎಂದು ನಾವು ಪದೇ ಪದೇ ಹೇಳುತ್ತಿದ್ದೇವೆ. ಈ

ದೃಷ್ಟಿಯಲ್ಲಿ ಆ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನೂ ಅನೇಕ ಸಮಸ್ಯೆಗಳಿವೆ, ಅವುಗಳ ಬಗ್ಗೆ ಮಾತನಾಡಬೇಕಾಗಿತ್ತು, ಸಮಯವಿಲ್ಲದ ಕಾರಣ ಮತ್ತೆ ಈ ಚರ್ಚೆಯನ್ನು ಮುಂದುವರಿಸೋಣವೆಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ವಿನಯ್ ಕುಲಕರ್ಣಿ (ಧಾರವಾಡ):- ಮಾನ್ಯ ಉಪಾಧ್ಯಕ್ಷರೆ, ನಮ್ಮ ಧಾರವಾಡ ಕ್ಷೇತ್ರದಲ್ಲಿ ಬಹಳ ವರ್ಷಗಳ ನಂತರ ಈ ವರ್ಷ ನಾವು ಬರ ಕಾಣುತ್ತಿದ್ದೇವೆ. ಏಕೆಂದರೆ, ಧಾರವಾಡದಲ್ಲಿ ನಾವೆಲ್ಲ ಸಹಜವಾಗಿ ಬೋರ್‌ವೆಲ್ ಅನ್ನು drill ಮಾಡುತ್ತೇವೆ. ನಮ್ಮ ಜಿಲ್ಲೆಯಲ್ಲಿ ಇವತ್ತಿನವರೆಗೆ 250 ಅಡಿವರೆಗೆ ಬೋರ್‌ವೆಲ್ ಕೊರೆಯುತ್ತಿರಲಿಲ್ಲ. ಆದರೆ, ಇವತ್ತಿನ ಪರಿಸ್ಥಿತಿ ಏನಿದೆ ಎಂದರೆ, 500 ಅಡಿ, 500 ಅಡಿ ನಂತರ drilling ಮಾಡುವ ವ್ಯವಸ್ಥೆ ನೋಡುತ್ತಿದ್ದೇವೆ. ಇವತ್ತು ಹಲವಾರು ಸ್ಕೀಂಗಳಲ್ಲಿ ಬೋರ್‌ವೆಲ್ ಡ್ರಿಲ್ ಮಾಡುವ ಪ್ರಮಾಣ ಜಾಸ್ತಿಯಾಗಿದೆ. ಜಿಲ್ಲಾ ಪಂಚಾಯತ್ water supply ಕೂಡ ಬೋರ್‌ವೆಲ್ ಮೇಲೆ depend ಆಗಿದ್ದೇವೆ. ಜೊತೆಗೆ, ರೈತರಿಗೆ ಕೂಡ ಹಲವಾರು ಸ್ಕೀಂಗಳಲ್ಲಿ ನಾವು ಬೋರ್‌ವೆಲ್ drill ಮಾಡುತ್ತೇವೆ. ಅದಕ್ಕೆಕ್ಕಹಾಗೆ ನಮ್ಮಲ್ಲಿ water recharging structure ಆಗುತ್ತಿಲ್ಲ. ಸಚಿವರಿಗೆ ನಾನು ವಿನಂತಿ ಮಾಡುತ್ತೇನೆ. ಏಕೆಂದರೆ, ಅದರಲ್ಲಿ ನಾವು ಹಿಂದೆ ಸಾಕಷ್ಟು ಕೆಲಸ ಮಾಡಿದ್ದೇವೆ. 15 ವರ್ಷಗಳ ಹಿಂದೆ ನಾನು ಜಿಲ್ಲಾ ಪಂಚಾಯತ್ ಸದಸ್ಯನಿದ್ದಾಗ ಕೂಡ ಮಾನ್ಯ ಹೆಚ್.ಕೆ. ಪಾಟೀಲ್‌ರವರ ಜೊತೆ ಸಾಕಷ್ಟು ದೊಡ್ಡ ಪ್ರಮಾಣದ ಕೆಲಸ ಮಾಡಿದ್ದೆವು. ಇವತ್ತೂ ಕೂಡ ವಿನಂತಿ ಮಾಡುತ್ತೇನೆ. ತಾವೇ RDPR ಸಚಿವರಾಗಿರುವುದರಿಂದ Bore-well ಗಳನ್ನು ಎಲ್ಲಿ drill ಮಾಡಿದ್ದೀರಿ, ಎಲ್ಲಿ drinking water bore-wells ಇವೆ, compulsory recharging structure ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಎರಡನೆಯದಾಗಿ, ಗ್ರಾಮೀಣ ಪ್ರದೇಶಗಳಲ್ಲಿ ಹೊಲಕ್ಕೆ ಹೋಗುವ ರಸ್ತೆಗಳಲ್ಲಿ CD ನಿರ್ಮಾಣದ ಅವಶ್ಯಕತೆ ಬಹಳ ಇದೆ. ಗರ್ವಪುರ ಕ್ಷೇತ್ರದಲ್ಲಿ ಸಣ್ಣ ಸಣ್ಣ CDಗಳಿಗೂ ಹೆಚ್ಚಿನ ಆದ್ಯತೆಯನ್ನು ತಾವು RDPR ಕಡೆಯಿಂದ, ಗ್ರಾಮೀಣಾಭಿವೃದ್ಧಿಯಿಂದ ಕೊಡಬೇಕೆಂದು ವಿನಂತಿ ಮಾಡುತ್ತೇನೆ. NREGA ದಲ್ಲಿ ಸಣ್ಣ

ಹಿಡುವಳಿದಾರರಿಗೆ ಮಾತ್ರ ಹೊಲದಲ್ಲಿ ಕೆಲಸ ಮಾಡುವುದಕ್ಕೆ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಜೊತೆಗೆ, ದನದ ಕೊಟ್ಟಿಗೆಗಳನ್ನು ನಿರ್ಮಾಣ ಮಾಡುವ ಅವಶ್ಯಕತೆ ಇದೆ. 5 ಎಕರೆಯೊಳಗೆ ಮಾತ್ರ ಇದ್ದಂಥವರಿಗೆ ಮಾತ್ರ ಎಂದು ಇದೆ. ದಯವಿಟ್ಟು ಅದನ್ನು 10 ಎಕರೆವರೆಗೆ ವಿಸ್ತರಣೆ ಮಾಡಬೇಕೆಂದು ತಮಗೆ ವಿನಂತಿಸುತ್ತೇನೆ. ಗ್ರಾಮೀಣ ಪ್ರದೇಶಗಳಲ್ಲಿ ಹೊಲಕ್ಕೆ ಹೋಗುವ ರಸ್ತೆಗಳ ನಿರ್ಮಾಣ ಕೂಡ ಅಷ್ಟೇ ಅವಶ್ಯಕತೆ ಇದೆ. ಎಷ್ಟು CD ಅವಶ್ಯಕತೆ ಇದೆಯೋ ಅಷ್ಟೇ ಹಳ್ಳಿಗಳ ಹೊಲಕ್ಕೆ ಹೋಗುವ ರಸ್ತೆಗಳೂ ಸಹ ಅವಶ್ಯಕತೆ ಇದೆ. ಮೊನ್ನೆ ಕೂಡ ಹಲವಾರು ಕಡೆ ಮಾತನಾಡಿದ್ದೇವೆ. ನಮ್ಮ ಸಚಿವರು ಅದಕ್ಕೆ ಹೆಚ್ಚಿನ ಒತ್ತು ಕೊಟ್ಟು ಹೊಲಕ್ಕೆ ಹೋಗುವ ರಸ್ತೆಗಳ ನಿರ್ಮಾಣ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತಾ, ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತು ಮುಗಿಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಶಿಗ್ಗಾಂವಿ):- ಈಗಾಗಲೇ RDPR demand ಮೇಲೆ ಎಲ್ಲರೂ ಮಾತನಾಡಿದ್ದಾರೆ. ನಾನೊಂದು ಗಮನಿಸಿರುವುದೇನೆಂದರೆ, ಎಲ್ಲರೂ ಕೂಡ Rural development ಗೆ ಬಹಳಷ್ಟು ಒತ್ತು ಕೊಟ್ಟು ಮಾತನಾಡಿದ್ದಾರೆ. ಆದರೆ, rural development ಆಗುವಂಥದ್ದು Panchayat Raj Institutions ಮೇಲೆ. ಅದಕ್ಕಾಗಿ ಆ ಕಡೆ ಸ್ವಲ್ಪ ಬೆಳಕು ಚೆಲ್ಲುವಂಥ ಪ್ರಯತ್ನವನ್ನು ನಾನು ಮಾಡುತ್ತೇನೆ. ನಾನು ಮೊನ್ನೆ ನೋಡುತ್ತಿದ್ದೆ. ನಜೀರ್ ಸಾಬ್‌ರವರು Panchayat Raj Act ತರುವಂಥ ಸಂದರ್ಭದಲ್ಲಿ ಸುಮಾರು 10-15 ದಿವಸ ಎರಡೂ ಮನೆಗಳಲ್ಲಿ debate ಆಗಿ ಸುದೀರ್ಘವಾಗಿ ಕೊಟ್ಟ ಉತ್ತರವನ್ನು ನೋಡಿದಾಗ, ಅದರ ಹಿಂದಿರುವಂಥ ಧ್ಯೇಯ, ಉದ್ದೇಶಗಳು, ಆ Act ನಲ್ಲೇನಿತ್ತು ಮತ್ತು ಇವತ್ತೂ ಏನು ನಡೆಯುತ್ತಿದೆ ಎಂಬುದನ್ನು ನೋಡಿದಾಗ ಬಹಳಷ್ಟು ಬದಲಾವಣೆ ಮತ್ತು ಅಜಗಜಾಂತರ ವ್ಯತ್ಯಾಸಗಳನ್ನು ನಾವು ನೋಡುತ್ತೇವೆ. ಅದೇನೇ ಇದ್ದರೂ ನಮ್ಮ ರಾಜ್ಯ ರಾಷ್ಟ್ರದಲ್ಲಿಯೇ ಅಧಿಕಾರದ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಬಹಳಷ್ಟು ಮುಂದಿರುವಂಥ ರಾಜ್ಯ. Pioneer State ಎಂದು ನಾವು

ಕರೆಯುತ್ತೇವೆ. ಈಗಾಗಲೇ ನಾವು 5 ಚುನಾವಣೆಗಳನ್ನು ಮಾಡಿದ್ದೇವೆ. ಶೇ.50ರಷ್ಟು ಹೆಣ್ಣುಮಕ್ಕಳಿಗೆ reservation ಕೊಟ್ಟಿರುವಂಥ ರಾಜ್ಯ ಎನ್ನುವ ಹೆಗ್ಗಳಿಕೆಯನ್ನೂ ಕೂಡ ಗಳಿಸಿದ್ದೇವೆ. ಅಧಿಕಾರ ವಿಕೇಂದ್ರೀಕರಣದ ಮೂಲ ಉದ್ದೇಶವೆಂದರೆ, ಸ್ವಾತಂತ್ರ್ಯ ಬಂದ ನಂತರ ಬದಲಾಗುತ್ತಿರುವಂಥ ಅಂತರರಾಷ್ಟ್ರೀಯ ಮಟ್ಟದ ರಾಜಕೀಯ, ಸಾಮಾಜಿಕ, ಆರ್ಥಿಕ ಬದಲಾವಣೆಗಳಿಗನುಗುಣವಾಗಿ ಬೆಳೆಯುತ್ತಿರುವಂಥ ಜನಸಂಖ್ಯೆಗನುಗುಣವಾಗಿ ಸಮರ್ಥವಾದಂಥ ಆಡಳಿತವನ್ನು ಕೊನೆ ಹಂತಕ್ಕೂ ಕೊಡಬೇಕೆನ್ನುವ ದೃಷ್ಟಿಯಿಂದ ಅಷ್ಟು ದೊಡ್ಡ ಜನಸಂಖ್ಯೆಯನ್ನು ಕೇವಲ ನಾವು ರಾಜ್ಯದ ರಾಜಧಾನಿಯಲ್ಲಿ, ಕೇಂದ್ರದ ರಾಜಧಾನಿಯಲ್ಲಿ ಕುಳಿತು ಆಡಳಿತ ಮಾಡುವುದಕ್ಕೆ ಸಾಧ್ಯವಿಲ್ಲವೆಂಬುದನ್ನು ಮನಗಂಡು ಮೊದಲಿದ್ದ, ಬ್ರಿಟಿಷರ ಕಾಲದಲ್ಲಿದ್ದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸುಧಾರಣೆ ಮಾಡುವ ಉದ್ದೇಶದಿಂದ ಇದಕ್ಕೆ ನಾವು ರಾಜ್ಯಾಂಗದಲ್ಲಿ 73rd, 74th amendment ಅನ್ನೂ ಕೂಡ ತಂದಿದ್ದೇವೆ. ಅದರಲ್ಲಿ ಬಹಳ ಸ್ಪಷ್ಟವಾಗಿ ಉದ್ದೇಶಗಳಿವೆ. ಒಂದನೆಯದಾಗಿ, ಮೊದಲಿದ್ದ Local Self Government (ಸ್ಥಳೀಯ ಸರ್ಕಾರಗಳು) ಎಂದೇನು ಕರೆಯುತ್ತಿದ್ದೆವು, ಆ ಸ್ಥಳೀಯ ಸರ್ಕಾರಗಳನ್ನು ನಿಜವಾಗಿಯೂ ಕೂಡ ಸರ್ಕಾರದ ರೂಪದಲ್ಲಿ ಸರ್ವ ಸ್ವತಂತ್ರ ಮತ್ತು ಅಧಿಕಾರಯುತವಾಗಿ ಚಲಾವಣೆ ಮಾಡಬೇಕೆನ್ನುವಂಥ ಒಂದು ಉದ್ದೇಶ. ಮತ್ತೊಂದು ಏನೆಂದರೆ, participatory democracy ಎಂದರೆ ಪಾಲ್ಗೊಳ್ಳುವಿಕೆಯ ಪ್ರಜಾಪ್ರಭುತ್ವ. ಇದರ ಉದ್ದೇಶವೂ ಕೂಡ ಅದರಲ್ಲಿತ್ತು. ಈ ಎರಡೂ ಘನ ಉದ್ದೇಶಗಳನ್ನು ಇಟ್ಟುಕೊಂಡು ಮಾಡಿದಂಥ ಪರಿಣಾಮ ಆ ಉದ್ದೇಶದಲ್ಲಿ ಏನಾಗುತ್ತದೆ ಎಂದರೆ, ಜನರ ಸುತ್ತಲೂ ಅಭಿವೃದ್ಧಿಯಾಗಬೇಕೇ ಹೊರತಾಗಿ ಅಭಿವೃದ್ಧಿ ಸುತ್ತಲೂ ಜನರು ಓಡಾಡಬಾರದು. There should be development round the people, not people round the development. ಆ ಹಿನ್ನೆಲೆಯಲ್ಲಿ ಈ ಎಲ್ಲಾ Constitutional Amendment, State Act ಇವೆಲ್ಲವನ್ನು ನಾವು ಮಾಡಿದ್ದೇವೆ. ಕಾಲಕಾಲಕ್ಕೆ ಅದಕ್ಕೆ amendments ಕೂಡ ಸೇರಿಸಿಕೊಂಡು ಬಂದಿದ್ದೇವೆ. ಒಟ್ಟಾರೆಯಾಗಿ ಗ್ರಾಮೀಣಾಭಿವೃದ್ಧಿ ಎಂದರೇನು?

ಗ್ರಾಮದಲ್ಲಿರುವಂಥ ರೈತ ಇರಬಹುದು, ಕರಕುಶಲ ಕಾರ್ಮಿಕ ಇರಬಹುದು ಅಥವಾ ಒಕ್ಕಲುತನ ಕಾರ್ಮಿಕ ಇರಬಹುದು, ಅವನ ಜೀವನ ಗುಣಮಟ್ಟ ಹೆಚ್ಚಾಗಬೇಕು, ಸ್ವಾವಲಂಬನೆಯಾಗಬೇಕು ಮತ್ತು ಅವನ ಭವಿಷ್ಯ ಎಂದರೆ ಅವರ ಮಕ್ಕಳೂ ಕೂಡ ಇತರರಂತೆ, ಇತರ ವೃತ್ತಿಯಲ್ಲಿರವಂಥ ಮಕ್ಕಳಂತೆ, ಶಹರದಲ್ಲಿರುವಂಥ ಮಕ್ಕಳಂತೆ ಎಲ್ಲ ರಂಗದಲ್ಲೂ ಕೂಡ ವಿದ್ಯೆ, ಜ್ಞಾನ, ಪೈಪೋಟಿ ಕೊಡುವಂಥ ಶಕ್ತಿ ಅವರಿಗೆ ಬರಬೇಕೆನ್ನುವಂಥ ಉದ್ದೇಶದಿಂದ ಈ ಎಲ್ಲಾ ಕಾರ್ಯಕ್ರಮಗಳನ್ನು ನಾವು ರೂಪಿಸಿರುತ್ತೇವೆ. ಇವತ್ತು ನಾವು ಕಾರ್ಯಕ್ರಮ ಆಧಾರಿತ ಆಡಳಿತವನ್ನು ಮಾಡುತ್ತಿದ್ದೇವೆ. ಈ ಕಾರ್ಯಕ್ರಮ ಆಧಾರಿತ ಆಡಳಿತ ಮಾಡುತ್ತಾ ಈಗಾಗಲೇ ಹೇಳಿದಹಾಗೆ, 146 ಕಾರ್ಯಕ್ರಮಗಳನ್ನು RDPR ನಲ್ಲಿ ನಾವು ಕೊಟ್ಟಿದ್ದೇವೆ. 200ಕ್ಕಿಂತ ಹೆಚ್ಚು ಕಾರ್ಯಕ್ರಮ ರಾಜ್ಯ ವಲಯ ಮತ್ತು ರಾಷ್ಟ್ರ ವಲಯದಲ್ಲಿ ನಾವು ನೋಡಿದಾಗ ಇಷ್ಟು ದೊಡ್ಡ ಕಾರ್ಯಕ್ರಮಗಳನ್ನು ನಾವು ಮಾಡಿ ಅದಕ್ಕೆ ನೂರಾರು financial head ಗಳನ್ನು create ಮಾಡಿ ಕೊನೆಗೆ ಎಲ್ಲ ತಾತ್ಪರ್ಯ ಏನೆಂದರೆ, ಇವತ್ತಿಗೂ ಕೂಡ ಗ್ರಾಮೀಣಾಭಿವೃದ್ಧಿ, ಅದರ ಜೀವನದ ಗುಣಮಟ್ಟ ಎಲ್ಲಿದೆಯೋ ಅಲ್ಲಿಯೇ ಇದೆ. ಅಂದರೆ, ನಾವು ಇದೆಲ್ಲವನ್ನೂ ಮಾಡುತ್ತಿದ್ದಾಗಲೂ ಕೂಡ ಎಲ್ಲಿ ತಪ್ಪಿದ್ದೇವೆ, ನಾವು ನೋಡುವಂಥ ರೀತಿ ನಾವು ಮಾಡುವಂಥ ನೀತಿ, ಇವೆರಡರಲ್ಲಿಯೂ ಕೂಡ ಬಹಳಷ್ಟು ಬದಲಾವಣೆಯ ಅವಶ್ಯಕತೆ ಇದೆ ಎನ್ನುವುದು ಒಟ್ಟಾರೆ ಈ ನಾಲ್ಕು ದಿವಸದ ಚರ್ಚೆಯ ತಾತ್ಪರ್ಯವೆಂದು ನಾನು ಭಾವಿಸುತ್ತೇನೆ. ಪಂಚಾಯತ್ ರಾಜ್ ವಿಷಯಕ್ಕೆ ನಾನು ನೇರವಾಗಿ ಬರುತ್ತೇನೆ, ಏಕೆಂದರೆ, ಸಮಯ ಇಲ್ಲ. Devolution of Power and Devolution of Finance ಇವೆರಡೂ ಮುಖ್ಯವಾಗಿ ಆಗಬೇಕಾಗಿರುವುದು. ಅಧಿಕಾರ ವಿಕೇಂದ್ರೀಕರಣದಲ್ಲಿ ನಾವು ಏನು ಮಾಡಿದ್ದೇವೆ? ಖಂಡಿತವಾಗಿಯೂ ನಾವು ಅದರ ಒಂದು structure ಅನ್ನು ಮಾಡಿದ್ದೇವೆ. Constitution ನಲ್ಲಿದೆ 3-tier system ಅನ್ನು ತಂದಿದ್ದೇವೆ, structure ಅನ್ನು ಮಾಡಿದ್ದೇವೆ. ಅಂದರೆ, ದೇಹವನ್ನು create ಮಾಡಿದ್ದೇವೆ. ಅದರೆ, content ಇಲ್ಲ ಅದಕ್ಕೆ ಪ್ರಾಣ ಇಲ್ಲ. ಇಂದು structure ಜೊತೆಗೆ

content ಪ್ರಾಣ ಕೊಟ್ಟರೆ ಮಾತ್ರ ಅದು ಜೀವಿತವಾಗಿ ಕೆಲಸ ಮಾಡುವುದಕ್ಕೆ ಸಾಧ್ಯ. ಇಂದು ನಿರ್ಜೀವವಾಗಿರುವ ಮಗುವಿನ ರೀತಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಮೇಲಿನಿಂದ ಏನಾದರೂ ಅಧಿಕಾರಿಗಳು ಯಾವುದಾದರೂ ಕಾರ್ಯಕ್ರಮ ಕೊಟ್ಟು ಸ್ವಲ್ಪ ಹಣವನ್ನು ಕೊಟ್ಟಾಗ ಮಾತ್ರ ಅದಕ್ಕನುಗುಣವಾಗಿ ಅವರು ಕೆಲಸ ಮಾಡುವುದು. ನಜೀರ್ ಸಾಹೇಬ್ರು, ನಮ್ಮ ಹಳ್ಳಿಗೇನು ಬೇಕೆನ್ನುವ ತೀರ್ಮಾನ ವಿಧಾನ ಸಭೆಯಲ್ಲಿ ಅಥವಾ ವಿಧಾನ ಸೌಧದ ಮೂರನೇ ಮಹಡಿಯಲ್ಲಿ ಆಗಬಾರದು ಎಂದು ಹೇಳುತ್ತಿದ್ದರು. ಆದರೆ, ಇಂದು ಏನಾಗಿದೆ ಯಾವುದಾದರೂಂದು ಸಣ್ಣ ಹಳ್ಳಿಗೆ ಕುಡಿಯುವ ನೀರಿಗೆ ಸಂಬಂಧಪಟ್ಟಂಥ ರಿಪೇರಿ ಮಾಡಿಸಬೇಕಾದರೂ ಬೆಂಗಳೂರಿನಿಂದ ಆದೇಶ ಬರುವಂಥ ಪರಿಸ್ಥಿತಿ ಇದೆ. ನಾನು ಯೋಜನೆ ಬಗ್ಗೆ ಹೇಳುತ್ತಿಲ್ಲ. ಅಧಿಕಾರಿಗಳು ಅದನ್ನು ಒಪ್ಪುವುದಿಲ್ಲ ಅದು ನೈಜವಾಗಿ ಏನಾಗುತ್ತಿದೆ, ನಾವು ನಮ್ಮ ಅಧಿಕಾರಿಗಳಿಗೆ ಹೇಳಿದರೆ, ಅದಕ್ಕವರು ಸರ್ ಅದಕ್ಕೆ funds ಇಲ್ಲ ಜಿಲ್ಲಾ ಪಂಚಾಯತ್‌ರವರನ್ನು ಕೇಳಬೇಕೆನ್ನುತ್ತಾರೆ. ನಾವು ಜಿಲ್ಲಾ ಪಂಚಾಯತ್‌ರವರನ್ನು ಕೇಳಿದಾಗ ನಮ್ಮಲ್ಲಿ ಏನು programme ಇದೆ ಅಷ್ಟೆ ಇದೆ ಹೆಚ್ಚಿನದೇನು ಇಲ್ಲವೆನ್ನುತ್ತಾರೆ. ಹಾಗಾದರೆ ಮೇಲೆ ಬರೆಯಿರಿ ಎಂದು ಹೇಳಬೇಕಾಗಿದೆ. ಕೆಳಗಡೆಯಿಂದ ಕೆಲಸಕ್ಕಾಗಿ ಮೇಲೆ ಬರೆಯುವಂಥ ಪದ್ಧತಿ ಏನು ಇದೆ ಇದನ್ನು ನಿಲ್ಲಿಸಬೇಕೆಂದು ಮಾಡಿದ್ದೆವು. ಅದು ಇಂದಿಗೂ ಕೂಡ ಪ್ರಸ್ತುತವಾಗಿದ್ದು ನಮ್ಮ ಕಣ್ಣು ಮುಂದಿದೆ ನಾವೆಲ್ಲರೂ ಅನುಭವಿಸುತ್ತಿದ್ದೇವೆ ಇದು ಕಟು ಸತ್ಯ. ಇದನ್ನು ಯಾರು ಅಧಿಕಾರಸ್ಥರು ಇರುತ್ತಾರೆ ಅವರು ಬದಲಾವಣೆಗಳನ್ನು ಬಯಸುವುದಿಲ್ಲ. ಅದು ರಾಜಕೀಯ ಅಧಿಕಾರಸ್ಥರು ಇರಬಹುದು, officers ಇರಬಹುದು. ಒಮ್ಮೆ ನಮಗೆ ಅಧಿಕಾರ ಬಂದರೆ ಸಹಜವಾಗಿ ಗುಣ, ಇನ್ನಷ್ಟು ಅಧಿಕಾರ ನಮಗೆ ಬೇಕು, ಇಂದು ನಾವು ಮಂತ್ರಿಯಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಅಲ್ಲಿ ಎಲ್ಲೋ ಒಂದು ಹಳ್ಳಿಯಲ್ಲಿ ಆ ಗ್ರಾಮ ಪಂಚಾಯಿತಿಯ ಕೆಲಸವನ್ನೂ ಕೂಡ ನಾನೇ ಇಲ್ಲಿಂದ ನಿಯಂತ್ರಣ ಮಾಡಬೇಕೆನ್ನುವಂಥದ್ದು ಸಹಜವಾಗಿರುತ್ತದೆ. ಅದನ್ನು ಮೀರಿ ನಮ್ಮ ಧ್ಯೇಯ ಉದ್ದೇಶಗಳನ್ನು ಮಾಡುವಂಥ ಒಂದು ರೀತಿಯಲ್ಲಿ

ರಾಜಕೀಯ ಇಚ್ಛಾಶಕ್ತಿ ಎನ್ನುವ ಶಬ್ದವನ್ನು ಬಹಳ ಸುಲಭವಾಗಿ ಬಳಸುತ್ತೇವೆ, ಅದಕ್ಕಿಂತ ಅದನ್ನು ದಿನನಿತ್ಯದ ಕರ್ಮವಾಗಿ ಅದನ್ನು habit ಅಗಿ ಅದನ್ನು overcome ಮಾಡುವಂಥ ಒಂದು ಪ್ರವೃತ್ತಿಯನ್ನು ನಾವೆಲ್ಲರೂ ಕೂಡ ಬೆಳೆಸಿಕೊಂಡರೆ, ನಮ್ಮ ಚಿಂತನೆಯಲ್ಲಿ ಬದಲಾವಣೆಯಾದರೆ, ನಾವು ನೋಡುವಂಥ ಚಿಂತನೆಯಲ್ಲಿ ಬದಲಾವಣೆಯಾದರೆ, ಅದನ್ನು ಪ್ರವೃತ್ತಿಯಲ್ಲಿ ನಾವು ಬದಲಾವಣೆ ಮಾಡಿಕೊಂಡರೆ ಇದಕ್ಕೆ ಏನಾದರೂ ಜೀವ ಕೊಡುವುದಕ್ಕೆ ಸಾಧ್ಯ. ಇಲ್ಲದಿದ್ದರೆ ಎಷ್ಟೇ debate ಮಾಡಿದರೂ ಕೂಡ ಎಷ್ಟೇ ಧ್ಯೇಯ ಉದ್ದೇಶಗಳನ್ನು ಇಟ್ಟುಕೊಂಡರೂ ಕೂಡ, ಎಷ್ಟೇ ಸಮರ್ಥವಾದ ನಾಯಕತ್ವ ಅಥವಾ ಮಂತ್ರಿಯಿದ್ದರೂ ಕೂಡ ಇಷ್ಟು ದೊಡ್ಡ system ಅನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ಮೊದಲು ಇದನ್ನು ಅರ್ಥ ಮಾಡಿಕೊಳ್ಳಬೇಕು. ಜನಕ್ಕೆ ಅತ್ಯಂತ ಹತ್ತಿರ ಇರುವಂಥ ಸರ್ಕಾರ ಎಂದರೆ ಗ್ರಾಮ ಪಂಚಾಯಿತಿ. ರೈತನಿಗೆ ಸರ್ಕಾರ ಎಂದರೇನು, ಸರ್ಕಾರ ಎಂದರೆ ಅವನಿಗೆ ವಿಧಾನ ಸಭೆಯಲ್ಲ. ಸರ್ಕಾರ ಎಂದರೆ ಯಾವುದೇ ಇಲಾಖೆಯ office ಅಲ್ಲ. ಸರ್ಕಾರ ಎಂದರೆ ಒಂದು ಕಡೆ ಗ್ರಾಮ ಪಂಚಾಯಿತಿ. ಅವನು ತನ್ನ ದಿನನಿತ್ಯದ ಕೆಲಸಗಳನ್ನು ಮಾಡಿಸಬೇಕಾದರೆ ಅದು ಗ್ರಾಮ ಪಂಚಾಯಿತಿ ಇನ್ನೊಂದು ತಹಶೀಲ್ದಾರ್ ಕಚೇರಿ, ಇದೇ ಅವನ ಸರ್ಕಾರ. ಇದನ್ನು ದಾಟಿ ಅವನಿಗೇನು ಅವಶ್ಯಕತೆಯೇ ಇಲ್ಲ. ಒಬ್ಬ ಹಳ್ಳಿಗನಿಗೆ ಇದನ್ನು ದಾಟಿ ಅವನಿಗೆ ಬೇರೆ ಅವಶ್ಯಕತೆಯೇ ಇಲ್ಲ. ಅಂದರೆ, ನಾವು ಇವತ್ತು ಅವನಿಗೆ ಸರ್ಕಾರ ಎಂದರೆ ಗ್ರಾಮ ಪಂಚಾಯಿತಿ ಎನ್ನುವ ಭಾವನೆ ಕೊಡುತ್ತಿಲ್ಲ. ಅದಕ್ಕೆ ಅವನಿಗೆ ಗ್ರಾಮ ಪಂಚಾಯಿತಿಯ ಬಗ್ಗೆ ವಿಶ್ವಾಸವಿಲ್ಲ, ಗ್ರಾಮ ಪಂಚಾಯಿತಿಯ ಬಗ್ಗೆ ಅವನಿಗೆ ಒಂದು ರೀತಿಯ ಗೌರವ ಇಲ್ಲ. ಎಲ್ಲಿ ವಿಶ್ವಾಸ, ಗೌರವ ಇರುವುದಿಲ್ಲ ಅಲ್ಲಿ ಆ ಒಂದು ಸಂಸ್ಥೆಯ ಮಾನ್ಯತೆ ಕಡಿಮೆಯಾಗುತ್ತಾ ಬರುತ್ತದೆ. ಯಾವಾಗ ಮಾನ್ಯತೆ ಕಡಿಮೆಯಾಗುತ್ತಾ ಬರುತ್ತದೆ, ಅಲ್ಲಿ ಕೆಲಸ ಮಾಡುವವರ ಮನೋಸ್ಥಿತಿಯೂ ಕೂಡ ಅದೇ ರೀತಿ ಕೀಳರಿಮೆ ಭಾವನೆಯಿಂದ ಬರುತ್ತದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಗ್ರಾಮದಲ್ಲಿ ವಾಸ ಮಾಡತಕ್ಕಂಥವನಿಗೆ ತನ್ನ ದಿನ ನಿತ್ಯದ ಜೀವನದಲ್ಲಿ ಗ್ರಾಮ್ಯದ ಬದುಕಿನಲ್ಲಿ

ಯಾವ್ಯಾವ ಇಲಾಖೆಗಳ ಅಗತ್ಯ, ಸಂಪರ್ಕ ಅವನಿಗೆ ಬರುತ್ತದೆ, ಅವುಗಳ ಪೈಕಿ ಶೇಕಡ ಎರಡರಷ್ಟು ಇಲಾಖೆಗಳು ಕೂಡ ಜನಪ್ರತಿನಿಧಿಗಳಿಗೆ ಅವರು ಉತ್ತರ ಕೊಡಬೇಕಾದ ವ್ಯವಸ್ಥೆ ಇಲ್ಲ. ಉದಾಹರಣೆಗೆ ಒಬ್ಬ Veterinary doctor ಇರುತ್ತಾರೆ. ಕಾಲು ಬಾಯಿ ಜ್ವರ ಬರುತ್ತದೆ. ಪಂಚಾಯಿತಿ ಅಧ್ಯಕ್ಷ ಅವನ್ನೇನು ಕರೆದು ಮಾತನಾಡುವುದು? ಜಿಲ್ಲಾ ಪಂಚಾಯಿತಿಯ member ಗೂ ಬಗ್ಗುವುದಿಲ್ಲ. MLA ಕೇಳಿದರೆ transfer ಬೆದರಿಕೆಗೆ ಆಯಿತು, ಸರ್ ಎನ್ನುತ್ತಾರೆ. ಅವರು ಉತ್ತರ ಕೊಡುವುದು ಏನಿದ್ದರೂ Director ಗೆ Deputy Director ಗೆ. ದಿನನಿತ್ಯದ ಬದುಕಿನಲ್ಲಿ ಅವರು ಗ್ರಾಮ ಪ್ರತಿನಿಧಿಗಳಿಗೆ ಉತ್ತರ ಕೊಡತಕ್ಕಂಥ ಸ್ಥಿತಿ ತರಬೇಕು. ಗ್ರಾಮ ಪ್ರತಿನಿಧಿಗಳಿಗೆ ಜವಾಬ್ದಾರಿಯಿಂದ ಕೆಲಸ ಮಾಡತಕ್ಕಂಥ ವ್ಯವಸ್ಥೆ ಬಂದಾಗ ನೀವು ಹೇಳುವಂತೆ ಗ್ರಾಮ ಸ್ವರಾಜ್ಯ ಬರುತ್ತದೆ. Devolution of Power, Devolution of Authority, we have to actually map the physical authority, and activity mapping ಮಾಡಬೇಕಾಗುತ್ತದೆ. So, it is not the question of making somebody big, it is an attempt to administer ourselves in a better way.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಈ ರೀತಿಯಾದರೆ ನಮ್ಮ ಗತಿ ಏನು? ಮೋರಿ ವಿಷಯ ಬಂದರೂ MLA. ಯಾವುದೇ ಸಮಸ್ಯೆ ಬಂದರೂ ಜಿಲ್ಲಾ ಪಂಚಾಯತ್‌ನಲ್ಲಾಗಲಿ, ಗ್ರಾಮ ಪಂಚಾಯತ್‌ನಲ್ಲಾಗಲಿ, ಬಹಳ confidence is with MLA. ಯಾವ MLA ಹಳ್ಳಿಗೆ ಪ್ರವೇಶ ಮಾಡಿದಾಕ್ಷಣಕ್ಕೆ ಮೋರಿ ನೀರಿನಿಂದ ಹಿಡಿದು, ಕುಡಿಯುವ ನೀರಿನಿಂದ ಹಿಡಿದು ಎಲ್ಲವೂ MLA ಗೆ ಹೇಳುತ್ತಾರೆ. Fuse ಹಾಕಿ bulb ಹಾಕುವವರೆವಿಗೂ, ಅಲ್ಲೊಂದು delivery case ನಲ್ಲಿ ಅಪಾಯವಾದರೂ ಎಲ್ಲಾ MLA ಗೆ ಬರುತ್ತದೆ. ಈ ಪರಿಸ್ಥಿತಿಗೆ ಬಂದಿದೆ. ಅದರಿಂದ, ಮಾನ್ಯ ರಮೇಶ್ ಕುಮಾರ್ ಬಗ್ಗೆ ನಾವೇನೋ ಆಸೆ ಇಟ್ಟುಕೊಂಡಿದ್ದೇವೆ. ಏನು ಕ್ರಾಂತಿ ಮಾಡುತ್ತಾರೋ ಗೊತ್ತಿಲ್ಲ, ಮಾನ್ಯ ಮಂತ್ರಿಗಳಿಗಂತೂ ಅದು ಹೇಗೆ ಉತ್ತರ ಕೊಡುತ್ತಾರೋ ನಮಗೆ

ಗೊತ್ತಾಗಲಿಲ್ಲಿ. ಅದ್ದರಿಂದ, ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ, ಅವರು ಮಾತನಾಡಲಿ.

ಶ್ರೀ ಬಸವರಾಜ್ ಬೊಮ್ಮಾಯಿ:- ಮಾನ್ಯ ಉಪಾಧ್ಯಕ್ಷರೆ, ನಾವು ಇಲ್ಲಿ ಬರಿ ಸಮಸ್ಯೆಗಳನ್ನು ಚರ್ಚಿಸಿದರೆ ಸಾಲದು. ಇಲ್ಲಿ ಕೆಲವೊಂದು ನಿರ್ಣಯಗಳನ್ನು ಮಾಡಬೇಕೆನ್ನುವುದು ನನ್ನ ಅಭಿಲಾಷೆ ಇಷ್ಟೆಲ್ಲಾ ಸಮಸ್ಯೆಗಳು ನಮಗೆ ಗೊತ್ತಿವೆ ಜೊತೆಗೆ ಸರ್ಕಾರಕ್ಕೂ ಕೂಡ ಗೊತ್ತಿವೆ. ಇಷ್ಟೆಲ್ಲಾ ಸಮಸ್ಯೆಗಳು ನಮ್ಮಿಬ್ಬರಿಗೂ ಗೊತ್ತಿದ್ದರೂ ಕೊನೆಗೆ ಇದು ಚರ್ಚೆಯಲ್ಲಿ ಮಕ್ತಾಯವಾದರೆ ಬಹುತೇಕವಾಗಿ ನಮ್ಮ ಚರ್ಚೆ ಅರ್ಥಪೂರ್ಣ ಅಷ್ಟೆ ಅಲ್ಲ ವ್ಯರ್ಥ ಕೂಡ ಆಗುತ್ತದೆ. ಇದಕ್ಕೆ ಏನಾದರೂ ಕೆಲವು ನಿರ್ಣಯಗಳನ್ನು ನಾವು ಮಾಡಬೇಕು. ನಿರ್ಣಯ ಮಾಡುವ ಪೂರ್ವದಲ್ಲಿ ಅದಕ್ಕೇನು ಅಭ್ಯಾಸ ಮಾಡಬೇಕೋ ಅದೆಲ್ಲವನ್ನೂ ಮಾಡಿ ಎಲ್ಲರೂ ಕೂಡಿ, ನಾನೇನು ಈಗಲೇ ಮಾಡಬೇಕೆಂದು ಹೇಳುವುದಿಲ್ಲ. ಎಲ್ಲರೂ ಸೇರಿ ಕೆಲವು ಕ್ರಾಂತಿಕಾರಿಯಾದ ಬದಲಾವಣೆಗಳನ್ನು ತರುವುದಕ್ಕೆ ಪ್ರಯತ್ನಿಸಿದರೆ ಬಹುತೇಕವಾಗಿ ಈ ಚರ್ಚೆಗೆ ಒಂದು ರೀತಿಯಲ್ಲಿ ತೂಕ ಬರುತ್ತದೆ ಎಂದು ನಾನು ಭಾವಿಸುತ್ತೇನೆ. ನೇರವಾಗಿ ಈ ವಿಷಯಕ್ಕೆ ಬರುವುದಾದರೆ, Devolution of Power ನಲ್ಲಿ ಕೇಂದ್ರ ಮತ್ತು ರಾಜ್ಯದ ನಡುವೆ Devolution of Power ಆಗಬೇಕು. ಇದು ನಮ್ಮ ರಾಜ್ಯಾಂಗದಲ್ಲಿ ಇದೆ. State list ಇದೆ, Central list ಇದೆ, Concurrent list ಇದೆ. ಅಲ್ಲಿ ಬಹಳ clear ಇದೆ. State list ನಲ್ಲಿ ಬರುವಂಥ subject ಗಳೇನು? ಅದರ ವ್ಯಾಪ್ತಿ ಏನು? ಅದರ ಅಧಿಕಾರ ಏನು? ಅಧಿಕಾರದ ವ್ಯಾಪ್ತಿ ಏನೆಂಬುದೂ ಕೂಡ ಬಹಳ ಸ್ಪಷ್ಟವಾಗಿದೆ. ಯಾವ limit ನಲ್ಲಿ ನಮ್ಮದು ಇದೆ. ಉದಾಹರಣೆಗೆ, water ಅದು State list ನಲ್ಲಿದ್ದರೂ ಕೂಡ ಅದು interstate dispute ಬಂದಾಗ ಅದು Concurrent list ನಲ್ಲಿ ಅದು ಬಂದಿದೆ. ಈ ರೀತಿಯಾಗಿ ಅದು ಬಹಳ ಸ್ಪಷ್ಟತೆ ಇದೆ. ಆದ್ದರಿಂದ, ಕೇಂದ್ರ ಮತ್ತು ರಾಜ್ಯದ ನಡುವೆ ಹಲವಾರು ರೀತಿಯ ವ್ಯತ್ಯಾಸಗಳಿದ್ದರೂ ಕೂಡ ಕರ್ತವ್ಯ ನಿರ್ವಹಣೆಯ ಬಗ್ಗೆ ಇಲಾಖೆ ವಿತರಣೆಯ ಬಗ್ಗೆ ಒಂದು ಸ್ಪಷ್ಟವಾದ ನೀತಿ ಅದರಲ್ಲಿದೆ. ಈ Devolution of Power ನಲ್ಲಿ ಅದೇ ತರಹ

ಆಗಬೇಕೆನ್ನುವುದು ನನ್ನ ಆಸೆ. Panchayath Sector list ಬೇರೆ State list ಬೇರೆ. ಈಗ ಏನಾಗಿದೆ link document ಇದೆ. ಈ link document ಇರುವುದು ನಿಜ. ಇದರಲ್ಲಿ ಬಹಳಷ್ಟು Task-force ಇದೆ, ಬಹಳಷ್ಟು Commission ಅಧ್ಯಯನ ಮಾಡಿದ್ದೇವೆ, ಇದೆಲ್ಲಾ ನಿಜ. ಆದರೆ, practical ಆಗಿ ಏನಾಗುತ್ತಿದೆ ಅಂದರೆ link document ಯಾವುದೋ ಒಂದು circular ಮೂಲಕ ಯಾವುದೋ ಒಂದು ಆದೇಶದ ಮೂಲಕ dilute ಆಗಿದೆ. Link document totally dilute ಆಗಿದೆ. Over-lapping ಆಗಿದೆ. ಒಂದು ಕೆಲಸವನ್ನು ತಾಲ್ಲೂಕು ಪಂಚಾಯಿತಿಯೂ ಮಾಡುತ್ತದೆ ಅಥವಾ ಜಿಲ್ಲಾ ಪಂಚಾಯಿತಿಯೂ ಮಾಡುತ್ತದೆ, ಇವೆರಡರ control State ಮಾಡುತ್ತದೆ. ಅದ್ದರಿಂದ, ಈ link document ಅನ್ನು revisit ಮಾಡಿ. ಈ ಬದಲಾದ ಪರಿಸ್ಥಿತಿಯಲ್ಲಿ ಇಂದು ಹಲವಾರು ಆರ್ಥಿಕವಾದ ಬದಲಾವಣೆಗಳು ಕೂಡ ಆಗಿದೆ. ಈಗ ನಾವು ಯಾವುದೋ ಒಂದು ಕಾನೂನು ಮಾಡಿದ್ದೇವೆ, ಅದಕ್ಕೆ ನಾವು ಜೋತು ಬೀಳಬೇಕೆಂದಲ್ಲ. ಈ ಕಾನೂನು ಮಾಡಿ ಸುಮಾರು ವರ್ಷಗಳಾಗಿವೆ. 1984–85 ರಲ್ಲಿ ಮೊದಲನೆಯದಾಗಿ ಕಾನೂನು ಬಂದ ಮೇಲೆ, Constitution Amendment 1991–92 ರಲ್ಲಿ ಬಂದ ಮೇಲೆ State Act ಅನ್ನು 1994 ರಲ್ಲಿ ಮಾಡಿದ್ದೇವೆ ಮತ್ತೆ amendment ಅನ್ನು ಕೂಡ ಮಾಡಿದ್ದೇವೆ. ಇಂದು ನಮ್ಮ ಸಂವಿಧಾನದ ನಿಜವಾದ life ಏನೆಂದರೆ, ಬೇರೆ ರಾಷ್ಟ್ರಗಳಿಗೆ ಹೋಲಿಸಿದಾಗ ನಮ್ಮದು ಜೀವಿತವಾಗಿರುವ ಸಂವಿಧಾನ.

ಅದೇ ರೀತಿ ಇಲ್ಲಿಯೂ ಕೂಡ State sector and Panchayat sector ನಲ್ಲಿ ಬಹಳ clear cut ಆಗಿ demarcation ಆಗಬೇಕು. ಈಗಾಗಲೇ ಮಾನ್ಯ ರಮೇಶ್ ಕುಮಾರ್‌ರವರು ಮಾತನಾಡುತ್ತಾ ಗ್ರಾಮ ಪಂಚಾಯಿತಿಯವರು ಯಾವ ಕೆಲಸವನ್ನು ಮಾಡಬೇಕೆಂದು ಮತ್ತು ಯಾವ ಇಲಾಖೆಯಲ್ಲಿ ಅವರಿಗೆ ಎಷ್ಟರಮಟ್ಟಿಗೆ ಅಧಿಕಾರ ಇರಬೇಕೆಂಬುದರ ಬಗ್ಗೆ ಹೇಳಿದ್ದಾರೆ. ಇವತ್ತಿನದಿವಸ ಅಲ್ಲಿರುವ ದನ–ಕರುಗಳು ಮತ್ತು ಅಂಗನವಾಡಿ ಹಾಗೂ ಶಾಲೆಗಳ ಮೇಲೆ ಯಾವ ರೀತಿಯಾಗಿ ಆಯಾ ಗ್ರಾಮ ಪಂಚಾಯಿತಿಯ ಸಂಬಂಧ ಮತ್ತು ಅಧಿಕಾರ ಇರಬೇಕೆಂಬುದರ ಬಗ್ಗೆ ಬಹಳ ಸ್ಪಷ್ಟವಾದ ಮಾಹಿತಿ ಬೇಕು. ಅದೇ

ರೀತಿಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಕೂಡ ಮೊದಲು ಆಗಬೇಕು. ಇವತ್ತಿನದಿವಸ planning ಮಾಡುತ್ತಾರೆ. ನಮ್ಮ Constitution ನಲ್ಲಿ State Planning ಬಗ್ಗೆ ಇದೆ. 72ರ ಅಮೆಂಡ್‌ಮೆಂಟ್‌ನಲ್ಲಿ.......

ಶ್ರೀ ಕೆ.ಆರ್. ರಮೇಶ್ ಕುಮಾರ್:- ಮಾನ್ಯ ಬೊಮ್ಮಾಯಿರವರೆ, ಹಸಿವಾಗುತ್ತಿದೆ. ಆನಂತರ ಮಾತನಾಡಿ.

ಶ್ರೀ ಬಸವರಾಜ ಬೊಮ್ಮಾಯಿ:- ಹಸಿವಾಗುತ್ತಿದೆಯೇ? ಇನ್ನು 5–10 ನಿಮಿಷದಲ್ಲಿ ಮುಗಿಸುತ್ತೇನೆ.

ಉಪಾಧ್ಯಕ್ಷರು:- 5–10 ನಿಮಿಷ ಬೇಡ. ಬೇಗ ಮುಗಿಸಿಬಿಡಿ.

ಶ್ರೀ ಬಸವರಾಜ ಬೊಮ್ಮಾಯಿ:- ಆನಂತರ ಮಾತನಾಡುತ್ತೇನೆ.

ಉಪಾಧ್ಯಕ್ಷರು:- ಈಗಲೇ ಮುಗಿಸಿಬಿಡಿ. ಆಮೇಲೆ reply ಇದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಬೊಮ್ಮಾಯಿಯವರೆ, since you are the last speaker, ಸಚಿವರಾಗಿರುವ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಒಪ್ಪಿಕೊಂಡರೆ ಊಟ ಮುಗಿಸಿಕೊಂಡು ಬಂದು 5 ನಿಮಿಷ ನೀವು ಮಾತನಾಡಿ conclude ಮಾಡಿದರೆ he can start the reply. ಬಹಳ ಜನ diabetic patients ಇದ್ದಾರೆ, ನನಗೇನು diabetic problem ಇಲ್ಲ. ಆದರೆ, ಹಸಿವಿನ problem ಇದೆ. ಯಜಮಾನರು ಹೇಳಿದ ಹಾಗೆ ನಾವು ಊಟಕ್ಕಾಗಿಯೇ ಬಂದಿದ್ದೇವೆ.

ಶ್ರೀ ಬಸವರಾಜ ಬೊಮ್ಮಾಯಿ:- ಆಯಿತು, I agree.

ಉಪಾಧ್ಯಕ್ಷರು:- ಈಗ ಒಂದು ಪ್ರಕಟಣೆ.

ಪ್ರಕಟಣೆ

"ಮಾನ್ಯ ಸಾರಿಗೆ ಸಚಿವರಾಗಿರುವ ರಾಮಲಿಂಗಾರೆಡ್ಡಿಯವರು ಈ ದಿನ ಮಧ್ಯಾಹ್ನ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಾನ್ಯ ಸದಸ್ಯರ ಗೌರವಾರ್ಥ

ಭೋಜನಕೂಟವನ್ನು ಏರ್ಪಡಿಸಿರುತ್ತಾರೆ. ತಾವೆಲ್ಲರೂ ಭೋಜನ ಕೂಟದಲ್ಲಿ ಪಾಲ್ಗೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ."

ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 12 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3 ಗಂಟೆ 8 ನಿಮಿಷಕ್ಕೆ ಪ್ರಾರಂಭವಾಯಿತು ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ವಿ. ಸುನೀಲ್ ಕುಮಾರ್:- ಮಾನ್ಯ ಉಪಾಧ್ಯಕ್ಷರೆ, ಆಡಳಿತ ಪಕ್ಷದ ಕಡೆಯವರು ಯಾರೂ ಕೂಡ ಸದನಕ್ಕೆ ಬಂದಿರುವುದಿಲ್ಲ. ಹೀಗಾದರೆ ಸದನವನ್ನು ಹೇಗೆ ನಡೆಸುತ್ತೀರಿ.

(ಗೊಂದಲ)

ಶ್ರೀ ಎಸ್.ಆರ್. ವಿಶ್ವನಾಥ್:- ಇಲ್ಲಿ ಕೋರಂ ಮಾಡಿರುವುದು ನಾವೇ ಆಗಿದ್ದೇವೆ. ಆಡಳಿತ ಪಕ್ಷದಲ್ಲಿ ಮಂತ್ರಿಗಳೇ ಬಂದಿಲ್ಲ.

ಉಪಾಧ್ಯಕ್ಷರು:- ಬರುತ್ತಾರೆ.

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಬರುತ್ತಿದ್ದಾರೆ.

ಶ್ರೀ ಎಸ್.ಆರ್. ವಿಶ್ವನಾಥ್:- ಆರೋಗ್ಯ ಇಲಾಖಾ ಸಚಿವರು ಬಂದ ತಕ್ಷಣ ಆರೋಗ್ಯವಾಗಿದೆ ಎಂದು ಅರ್ಥವೇ?

ಶ್ರೀ ಜಿ.ಟಿ. ದೇವೇಗೌಡ:- ಸದನಕ್ಕೆ ಇದೇ ರೀತಿಯಾ ಗೌರವವನ್ನು ಕೊಡುವುದು?

ಶ್ರೀ ವಿ. ಸುನೀಲ್ ಕುಮಾರ್:- ಮಾನ್ಯ ಉಪಾಧ್ಯಕ್ಷರೆ, ಆಡಳಿತ ಪಕ್ಷದ ಸಚಿವರ ಮೊದಲನೇ ಬೆಂಚ್ ಮತ್ತು ಎರಡನೇ ಬೆಂಚ್‌ನಲ್ಲಿ ಸಚಿವರುಗಳು ಬಂದಿಲ್ಲ.

(ಗೊಂದಲ)

ಉಪಾಧ್ಯಕ್ಷರು:- ಸಚಿವರುಗಳು ಬರುತ್ತಿದ್ದಾರೆ. .....

ಶ್ರೀ ವಿ. ಸುನೀಲ್ ಕುಮಾರ್:- ರಾಯರೆಡ್ಡಿ, ಶಿವಮೂರ್ತಿಯವರಿಗಾದರೂ ಸಚಿವ ಸ್ಥಾನ ಕೊಡಬಹುದಿತ್ತಪ್ಪಾ.

ಶ್ರೀ ಯು.ಟಿ. ಖಾದರ್:- (Revenue Minister, RDPR Ministerಗಳು ಬಂದರಲ್ಲಾ?

(ಗೊಂದಲ)

ಶ್ರೀ ವಿ. ಸುನೀಲ್ ಕುಮಾರ್:- ಶ್ರೀ ಶಿವಮೂರ್ತಿಯವರಿಗಾದರೂ ಅವಕಾಶ ಕೊಟ್ಟಿದ್ದರೆ, ಅವರು ಇಲ್ಲಿ ಬಂದು ಕುಳಿತಿರುತ್ತಿದ್ದರು.

ಉಪಾಧ್ಯಕ್ಷರು:- ಅಶೋಕ್‌ರವರೆ, ತಾವು ಕುಳಿತುಕೊಳ್ಳಿ.

ಶ್ರೀ ಜಿ.ಟಿ. ದೇವೆಗೌಡ:- ಆಡಳಿತ ಪಕ್ಷದವರು ತಾವಾಗಿದ್ದೀರಿ. ಇಲ್ಲಿ ಅಧಿಕಾರಿಗಳೂ ಸಹ ಇರುವುದಿಲ್ಲ.

ಉಪಾಧ್ಯಕ್ಷರು:- ಮಾನ್ಯ ಪಿ.ಎಂ. ಅಶೋಕ್‌ರವರೆ, ಕರೆಸಿ.

ಶ್ರೀ ಜಿ.ಟಿ. ದೇವೇಗೌಡ:- ಮಾನ್ಯ ಉಪಾಧ್ಯಕ್ಷರೆ, ಸದನವನ್ನು ಮುಂದಕ್ಕೆ ಹಾಕಿ.

(ಗೊಂದಲ)

ಉಪಾಧ್ಯಕ್ಷರು:- ಅವರೆಲ್ಲರೂ ಹೇಳಿ ಹೋಗಿದ್ದಾರೆ, ಬರುತ್ತಿದ್ದಾರೆ.

ಶ್ರೀ ಸಾ.ರಾ. ಮಹೇಶ್:- ಮಾನ್ಯ ಉಪಾಧ್ಯಕ್ಷರೆ, ಮೊನ್ನೆ 6 ದಿವಸದಲ್ಲಿ ಹಕ್ಕು ಚ್ಯುತಿ ನಿರ್ಣಯ ಮಾಡಿ ತಕ್ಷಣದಿಂದಲೇ ಜಾರಿಗೆ

ಬರುತ್ತದೆ ಎಂದು ಮಾನ್ಯ ಕಾನೂನು ಸಚಿವರು ಹೇಳಿದ್ದರು. ಇನ್ನೂ ಅದರ ಬಗ್ಗೆ ಏನು ಕ್ರಮವಾಗಿದೆ ಎಂದು ಗೊತ್ತಾಗಿಲ್ಲ. ತಕ್ಷಣದಿಂದಲೇ ಜಾರಿಗೆ ಬರುತ್ತದೆ ಎಂದು ಹೇಳಿ ಇವತ್ತಿಗೆ ಆರು ದಿವಸಗಳು ಆಯಿತು.

ಉಪಾಧ್ಯಕ್ಷರು:– ಮಾನ್ಯ ಕಾನೂನು ಸಚಿವರು ಬರಲಿ. ಅವರು ಬಂದ ನಂತರ ಉತ್ತರ ಕೊಡಿಸೋಣ.

ಶ್ರೀ ಎಸ್.ಆರ್. ವಿಶ್ವನಾಥ್:– ಮಾನ್ಯ ಉಪಾಧ್ಯಕ್ಷರೆ, BEO ರವರದ್ದು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸದನದಲ್ಲಿ ತೀರ್ಮಾನ ತೆಗೆದುಕೊಂಡರೂ ಇಲ್ಲಿಯವರೆಗೂ ಏನೂ ಆಗಲಿಲ್ಲ.

ಉಪಾಧ್ಯಕ್ಷರು:– ಕಾನೂನು ಸಚಿವರು ಬರಲಿ. ಅವರು ಬಂದ ನಂತರ ಮಾತನಾಡೋಣ. ಈಗ ವರದಿಗಳನ್ನೊಪ್ಪಿಸುವುದು.

5. ವರದಿಗಳನ್ನೊಪ್ಪಿಸುವುದು

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ (ಅಧ್ಯಕ್ಷರು, ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಮಿತಿ):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲದ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್ ರಾಜ್ ಸಮಿತಿಯ ಅಧ್ಯಕ್ಷನಾದ ನಾನು 2013–14ನೇ ಸಾಲಿನ ಸಮಿತಿಯಿಂದ ಅಂಗೀಕರಿಸಲ್ಪಟ್ಟ ಭಾರತ ಲೆಕ್ಕಪತ್ರ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು, ಪಂಚಾಯತ್ ರಾಜ್ ಸಂಸ್ಥೆಗಳು 2008–09ನೇ ಸಾಲಿನ ವರದಿಯಲ್ಲಿನ ಕಂಡಿಕೆಗಳನ್ನು ಹಾಗೂ ಕಾರ್ಯ ನಿರ್ವಹಣೆ ಸಮೀಕ್ಷೆ ಮೇಲಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಲ್ಲಿಸಿದಂತೆ ಸಮಿತಿಯ ಮೂರನೇ ವರದಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಸಮಿತಿಯ ನಾಲ್ಕನೇ ವರದಿ, ಸಮಾಜ ಕಲ್ಯಾಣ ಹಾಗೂ ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಸಮಿತಿಯ ಐದನೇ ವರದಿಯನ್ನು ಸದನದಲ್ಲಿ ಮಂಡಿಸುತ್ತೇನೆ.

ಉಪಾಧ್ಯಕ್ಷರು:– ವರದಿಯನ್ನು ಮಂಡಿಸಲಾಯಿತು.